ಸಂಪುಟ: 13 Volume | ಸಂಚಿಕೆ: 355 Issue | ಪುಟಗಳು 08 Pages | ಶನಿವಾರ 21 ಮಾರ್ಚ್ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಪ್ರೀತಿಯು ಒಡೆತನವನ್ನು ಪ್ರತಿಪಾದಿಸುವುದಿಲ್ಲ. ಸ್ವಾತಂತ್ರ್ಯವನ್ನು ನೀಡುತ್ತದೆ.

–ರವೀಂದ್ರನಾಥ್ ಟ್ಯಾಗೋರ್


# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ
ಕನ್ನಡ ಕಿರಣ
Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ
ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

ಕೇಶವ್ ಬಲಿರಾಮ್ ಹೆಡ್ಗೆವಾರ್ ಜಯಂತಿ 6
ಹಿಂದುತ್ವದ ಗೆಲುವಾಗಲಿ: ವೀರಣ್ಣ ಚರಂತಿಮಠ 7
ಟ್ಯಾಗ್-ಎಚ್ಚರ ಪಾಲಕರೇ ಎಚ್ಚರ...! 8



ಚಿಟಗುಪ್ಪ: ತಾಲೂಕಿನ ನಿರ್ಣಾ ಗ್ರಾಮದ ಸೈಯದ್ ಮೌಲಾ ರವರ ಸುಪುತ್ರಿ ಹಾಜರಾ ಫಾತಿಮಾ 8ವರ್ಷದ ಕಂದಮ್ಮ ಪವಿತ್ರ ರಂಜಾನ್ ಮಾಸದಲ್ಲಿ ಒಂದು ದಿನ ಪೂರ್ಣ ಉಪವಾಸ ಮಾಡಿದ್ದಾಳೆ.



ನೂತನ ಸಂವತ್ಸರ ಪ್ರಯುಕ್ತ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಬಿಜೆಪಿ ಅಧ್ಯಕ್ಷ ನಿತಿನ್ ನಬಿನ್ ಅವರನ್ನು ಭೇಟಿಯಾಗಿ ಯುಗಾದಿ ಹಬ್ಬದ ಶುಭಾಶಯಗಳನ್ನು ಕೋರಿದ್ದಾರೆ. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹಾಜರಿದ್ದರು.

## ಕ್ಷೇತ್ರದ ಪ್ರಗತಿಗಾಗಿಯೇ ಶ್ರಮ..!

**ಹುಮನಾಬಾದ್:** ಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸುವುದು ನನ್ನ ಮೊದಲ ಕರ್ತವ್ಯ. ನಾನು 24ಇಂಟು7 ಕ್ಷೇತ್ರದ ಜನರ ಮಧ್ಯೆ ಇದ್ದು ಅವರ ಸಮಸ್ಯೆಗಳನ್ನು ಕೇಳಿ ಪರಿಹರಿಸಲು ನಿರಂತರವಾಗಿ ಕೆಲಸ ಮಾಡುತ್ತಿದ್ದೇನೆ ಎಂದು ರಾಜಶೇಖರ ಪಾಟೀಲ ತಿಳಿಸಿದ್ದಾರೆ.



ಜಿಪಂ, ತಾಪಂ, ಪುರಸಭೆ.ಎಂಎಲ್ಎ ಚುನಾವಣೆಗಳು ಬಂದರೂ ನಾವು ರಡಿಯಾಗಿದ್ದೇವೆ. ಕ್ಷೇತ್ರದ ಗ್ರಾಮ ಹಾಗೂ ಪಟ್ಟಣಗಳಲ್ಲಿ ಜನರೊಂದಿಗೆ ನೇರ ಸಂಪರ್ಕ ಹೊಂದಿದ್ದು, ರೈತರು, ಕಾರ್ಮಿಕರು, ಯುವಕರು ಮತ್ತು ಮಹಿಳೆಯರ ಸಮಸ್ಯೆಗಳ ಬಗ್ಗೆ ಅರಿತು ಅವುಗಳಿಗೆ ಪರಿಹಾರ ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದೇನೆ. ಜನರ ಅಭಿವೃದ್ಧಿಯೇ ನನ್ನ ಮುಖ್ಯ ಗುರಿ ಎಂದು ಸ್ಪಷ್ಟಪಡಿಸಿದ್ದಾರೆ.

ಮತಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರದ ವಿವಿಧ ಯೋಜನೆಗಳನ್ನು ಜನರಿಗೆ ತಲುಪಿಸುವ ಕಾರ್ಯವನ್ನು ಮುಂದುವರೆಸುತ್ತಿದ್ದು, ಜನರ ವಿಶ್ವಾಸಕ್ಕೆ ತಕ್ಕಂತೆ ಸೇವೆ ಸಲ್ಲಿಸುತ್ತೇನೆ ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ ಹೇಳಿದ್ದಾರೆ.

## ಇಸ್ರೇಲ್–ಇರಾನ್ ಯುದ್ಧ ಕೂಡಲೇ ನಿಲ್ಲಿಸಿ: ರಷ್ಯಾ

• ಮಲ್ಲಮ್ಮ ನುಡಿ ವಾರ್ತೆ ಮಾಸ್ಕೊ

ಮುಖಾಮುಖಿಯ ಬಗ್ಗೆ ರಷ್ಯಾ ಗಂಭೀರ ಕಳವಳ ವ್ಯಕ್ತಪಡಿಸಿದೆ. ಯುದ್ಧವನ್ನು ತಕ್ಷಣವೇ ಕೊನೆಗೊಳಿಸುವಂತೆ ಕರೆ ನೀಡಿದೆ. ಈ ಪರಿಸ್ಥಿತಿಯನ್ನು ಇರಾನ್ ವಿರುದ್ಧ ಅಮೆರಿಕ ಮತ್ತು ಇಸ್ರೇಲ್‌ನ ಅಪ್ರಚೋದಿತ ಆಕ್ರಮಣ ಎಂದು ದೂರಿದೆ.

ರಷ್ಯಾ ವಿದೇಶಾಂಗ ಸಚಿವಾಲಯವು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, ಮಧ್ಯ ಪ್ರಾಚ್ಯ ಸಂಘರ್ಷವು ಹೆಚ್ಚುತ್ತಿರುವ ಅಪಾಯ ಮತ್ತು ಪ್ರಾದೇಶಿಕ ಸ್ಥಿರತೆಯ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ ಎಂದು ಎಚ್ಚರಿಸಿದೆ. ಇರಾನ್ ಮತ್ತು ನೆರೆಯ ಅರಬ್ ರಾಷ್ಟ್ರಗಳಲ್ಲಿ ಇಂಧನ, ಇತರ ನಿರ್ಣಾಯಕ ಮೂಲಸೌಕರ್ಯಗಳಿಗೆ ಹಾನಿಯ ಪ್ರಮಾಣವು ಹೆಚ್ಚುತ್ತಲೇ ಇದೆ ಎಂದು




ರಷ್ಯಾ ತಿಳಿಸಿದೆ. ಕದನ ವಿರಾಮದ ಅಗತ್ಯವನ್ನು ಎತ್ತಿ ತೋರಿಸಿದ್ದು, ಅಮೆರಿಕ ಮತ್ತು ಇಸ್ರೇಲ್, ಇರಾನ್ ವಿರುದ್ಧ ಅಪ್ರಚೋದಿತ ಆಕ್ರಮಣದಿಂದ ಉಂಟಾಗಿರುವ ಯುದ್ಧವನ್ನು ತಕ್ಷಣವೇ ನಿಲ್ಲಿಸಬೇಕೆಂದು ನಾವು ಕರೆ ನೀಡುತ್ತೇವೆ ಎಂದು ಒತ್ತಾಯ ಮಾಡಿದೆ.

## ಡೀಪ್‌ಫೇಕ್ ವಿರುದ್ಧ ಕೋರ್ಟ್‌ಗೆ ಗಂಭೀರ್

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ಭಾರತೀಯ ಪುರುಷರ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಕೋರ್ಟ್ ಮೆಟ್ಟಿಲೇರಿದ್ದಾರೆ. AI-ರಚಿತ ಡೀಪೇಕ್‌ಗಳು, ನಕಲಿ ವೀಡಿಯೊಗಳ ವಿರುದ್ಧ ತುರ್ತು ಪರಿಹಾರ ಕೋರಿ ಗೌತಮ್ ಗಂಭೀರ್ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. 2.5 ಕೋಟಿ ರೂ.ಗಳ ಪರಿಹಾರವನ್ನು ಕೋರಿದ್ದಾರೆ. ಗಂಭೀರ್ ತಮ್ಮ ಕಾನೂನು ತಂಡವು AI–ರಚಿತ ಡೀಪೇಕ್‌ಗಳು, ಧ್ವನಿ ಕ್ಲೋನಿಂಗ್ ಹಾಗೂ ಅವರ ಗುರುತಿನ ಅನಧಿಕೃತ ವಾಣಿಜ್ಯ ಬಳಕೆಯನ್ನು ಒಳಗೊಂಡ ಡಿಜಿಟಲ್ ಅನುಕರಣೆಯು ಸಂಘಟಿತ ಅಭಿಯಾನ ಎಂದು ಕರೆಯುವುದರ ವಿರುದ್ಧ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.



ನನ್ನ ಗುರುತು– ನನ್ನ ಹೆಸರು, ನನ್ನ ಮುಖ, ನನ್ನ ಧ್ವನಿ–ತಪ್ಪು ಮಾಹಿತಿಯನ್ನು ಹರಡಲು, ಆದಾಯವನ್ನು ಗಳಿಸಲು ಅಸ್ತ್ರವಾಗಿದೆ ಎಂದು ಗಂಭೀರ್ ಹೇಳಿಕೊಂಡಿದ್ದಾರೆ. ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಕಾನೂನು ರಕ್ಷಣೆಯ ಒಂದು ವಿಷಯವಾಗಿ ಈ ಸಮಸ್ಯೆಯನ್ನು ರೂಪಿಸಲಾಗಿದೆ.

ವಾಣಿಜ್ಯ ವಿಭಾಗದಲ್ಲಿ ಸಲ್ಲಿಸಲಾದ ಈ ಮೊಕದ್ದಮೆಯಲ್ಲಿ, ಉಲ್ಲಂಘನೆಯ ವಿಷಯವನ್ನು ತಕ್ಷಣವೇ ತೆಗೆದುಹಾಕಲು ಮತ್ತು ಹೆಚ್ಚಿನ ಪ್ರಸರಣವನ್ನು ತಡೆಯಲು ತುರ್ತು ಎಕ್ಸ್–ಪಾರ್ಟೆ ಆಡ್–ಇಂಟರಿಮ್ ತಡೆಯಾಜ್ಞೆಯನ್ನು ಕೋರಲಾಗಿದೆ.

# ಬೈ ಎಲೆಕ್ಷನ್ ತಲೆಬಿಸಿ

## ಬಿಜೆಪಿ ಅಭ್ಯರ್ಥಿಗಳ ಹೆಸರು ಪ್ರಕಟ | ಕಾಂಗ್ರೆಸ್ ನಲ್ಲಿ ತಿಕ್ಕಾಟ | ವರಿಷ್ಠರಿಗೆ ಸಮಸ್ಯೆ ಬಿಸಿತುಪ್ಪ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಬಾಗಲಕೋಟೆ–ದಾವಣಗೆರೆ ದಕ್ಷಿಣ ಕ್ಷೇತ್ರಗಳ ಉಪಚುನಾವಣೆಗೆ ಬಿಜೆಪಿ ಹಾಗೂ ಕಾಂಗ್ರೆಸ್‌ಗೆ ಪ್ರತಿಷ್ಠೆಯ ಕಣವಾಗಿ ಪರಿಣಮಿಸಿದೆ. ಏತನ್ಮಧ್ಯೆ ಬಿಜೆಪಿ ಹೈಕಮಾಂಡ್ ತನ್ನ ಅಭ್ಯರ್ಥಿಗಳ ಹೆಸರನ್ನು ಅಧಿಕೃತವಾಗಿ ಪ್ರಕಟಿಸಿದೆ. ಬಾಗಲಕೋಟೆಯಿಂದ ನಿರೀಕ್ಷೆಯಂತೆ ಮಾಜಿ ಶಾಸಕ ವೀರಭದ್ರಯ್ಯ ಚರಂತಿಮಠ ಅವರಿಗೆ ಟಿಕೆಟ್ ನೀಡಿದ್ದು, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಶ್ರೀನಿವಾಸ ಟಿ.ದಾಸಕರಿಯಪ್ಪ ಅವರಿಗೆ ಅವಕಾಶ ನೀಡುವ ಮೂಲಕ ಪಕ್ಷವು ವಿಕ್ಷಿಪ್ತ ನಡೆ ಪ್ರದರ್ಶಿಸಿದೆ. ದಾವಣಗೆರೆ ದಕ್ಷಿಣದಲ್ಲಿ ಬಿಜೆಪಿ ತನ್ನ ಅಭ್ಯರ್ಥಿಯಾಗಿ ಶ್ರೀನಿವಾಸ್ ದಾಸ ಕರಿಯಪ್ಪ ಅವರನ್ನು ರಂಗಕ್ಕೆ ಇಳಿಸಿದೆ.

**ಬಿಎಸ್‌ವೈ ಬಣ ಪಟ್ಟು ಆದರೆ..!:** ಬಿಜೆಅಜಯ್ ಕುಮಾರ್ ಅವರಿಗೆ ಟಿಕೆಟ್ ನೀಡಬೇಕು ಎಂದು ಬಿಎಸ್ ಯಡಿಯೂರಪ್ಪ ಬಣ ಪಟ್ಟು ಹಿಡಿದಿತ್ತು. ಆದರೆ ಹೈಕಮಾಂಡ್ ಅಚ್ಚರಿಯ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಇದು ಬಿಎಸ್‌ವೈ ಬಣಕ್ಕೆ ಆದ ಹಿನ್ನಡೆ ಎಂದೇ ವ್ಯಾಖ್ಯಾನಿಸಲಾಗುತ್ತಿದೆ.

**ಲಿಂಗಾಯತ ಮತಕ್ಕೆ ಕಣ್ಣು:** ದಾವಣಗೆರೆ ದಕ್ಷಿಣದಲ್ಲಿ ಜಾತಿ ಲೆಕ್ಕಾಚಾರದ ತಂತ್ರವನ್ನು ಬಿಜೆಪಿ ಹೆಣೆದಿದೆ. ಎಸ್‌ಟಿ ಸಮುದಾಯದ ಟಿ.ಶ್ರೀನಿವಾಸದಾಸ ಕರಿಯಪ್ಪಗೆ ಟಿಕೆಟ್ ನೀಡಿದೆ. ಈ ಮೂಲಕ ಅಹಿಂದ ಮತ್ತು ಲಿಂಗಾಯತ ವರ್ಗದ ಮತಗಳ ಮೇಲೆ ಪಕ್ಷ ಕಣ್ಣಿಟ್ಟಿದೆ.

ಪ್ರಭಾವಿ ನಾಯಕ ವೀರಣ್ಣ ಚರಂತಿಮಠ್ ಅವರಿಗೆ ಬಿಜೆಪಿ ಮತ್ತೆ ಮಣೆ ಹಾಕಿದೆ.




### ಬಿಜೆಪಿಯ ಅಚ್ಚರಿ ಅಭ್ಯರ್ಥಿ


ಕುರುಬ ಸಮುದಾಯದ ಜಿ.ಬಿ.ವಿನಯ್ ಕುಮಾರ್ ಅವರನ್ನು ಕಣಕ್ಕಿಳಿಸುವ ಬಗ್ಗೆ ಸುದ್ದಿ ಇದ್ದಿತು. 2024 ರ ಸಂಸತ್ ಚುನಾವಣೆಯಲ್ಲಿ ದಾವಣಗೆರೆ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಲು ಪ್ರಯತ್ನಿಸಿ ವಿಫಲರಾದ ವಿನಯ್, ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ 42,907 ಮತ ಗಳಿಸಿದ್ದರು. ಅಚ್ಚರಿ ಎಂಬಂತೆ ಬಿಜೆಪಿ ಎಸ್ಟಿ ಸಮುದಾಯದ ಶ್ರೀನಿವಾಸ ದಾಸ ಕರಿಯಪ್ಪರಿಗೆ ಮಣೆ ಹಾಕಿದೆ.

### ಪ್ರಬಲ ಸಮುದಾಯ ಬಿಟ್ಟು..!

ದಾವಣಗೆರೆ ಕ್ಷೇತ್ರದಲ್ಲಿ ಸಿದ್ದೇಶ್ವರ ಬಣದ ಶ್ರೀನಿವಾಸ್ ದಾಸ ಕರಿಯಪ್ಪಗೆ ಟಿಕೆಟ್ ನೀಡಿರುವುದು ಅಚ್ಚರಿ ಮೂಡಿಸಿದೆ. ದಾವಣಗರೆಯಲ್ಲಿ ಪ್ರಬಲ ಲಿಂಗಾಯತ, ಮರಾಠ ಸಮುದಾಯ ಬಿಟ್ಟು ಎಸ್‌ಟಿ ಸಮುದಾಯಕ್ಕೆ ಟಿಕೆಟ್ ಘೋಷಣೆ ಮಾಡಿರುವುದು ಕುತೂಹಲ ಕೆರಳಿಸಿದೆ. ದಕ್ಷಿಣ ಕ್ಷೇತ್ರದಲ್ಲಿ 13 ಸಾವಿರ ಎಸ್ ಟಿ ಸಮುದಾಯದ ಮತಗಳಿವೆ. ಶ್ರೀನಿವಾಸ್ ದಾಸ ಬಿಜೆಪಿಯ ರಾಜ್ಯ ಎಸ್ಟಿ ಮೋರ್ಚಾ ಉಪಾಧ್ಯಕ್ಷರಾಗಿದ್ದರು.

### ನಿರಾಣಿ ಯಾಕೊ ನಿರಾಸಕ್ತಿ

ಬಾಗಲಕೋಟೆಯಲ್ಲಿ ನಿರೀಕ್ಷೆಯಂತೆ ಚರಂತಿಮಠಗೆ ಟಿಕೆಟ್ ನೀಡಲಾಗಿದೆ. ಉಪಚುನಾವಣೆಯಲ್ಲಿ ಸ್ಪರ್ಧಿಸಲು ಎಂಎಲ್ಸಿ ಪಿ.ಎಚ್.ಪೂಜಾರ, ಹಿಂದುಳಿದ ಸಮುದಾಯದ ವೀರಣ್ಣ ಹಳೇಗೌಡರು ಟಿಕೆಟ್ ಆಕಾಂಕ್ಷಿಗಳಾಗಿದ್ದು, ಚರಂತಿಮಠಗೆ ಟಿಕೆಟ್ ಲಭಿಸಿದೆ. ವರ್ಚಸ್ವೀ ನಾಯಕ ಮುರುಗೇಶ್ ನಿರಾಣಿಗೆ ಟಿಕೆಟ್ ನೀಡಲು ಕಮಲ ಬಯಸಿತ್ತು. ಆದರೆ, ನಿರಾಣಿ ಸ್ಪರ್ಧೆ ಮಾಡಲು ಆಸಕ್ತಿಯನ್ನು ತೋರಲಿಲ್ಲ..!



### ಬಿಫಾರ್ಮ್ ಇಲ್ಲದೇ ನಾಮಪತ್ರ

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮಹತ್ವದ ಬೆಳವಣಿಗೆಯಾಗಿದೆ. ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗ ಸಚಿವ ಎಸ್ ಎಸ್ ಮಲ್ಲಿಕಾರ್ಜುನ ಅವರ ಮಗ ಸಮರ್ಥ್ ಶಾಮನೂರು ಯಾವುದೇ ಪಕ್ಷದಡಿಯಲ್ಲಿ ಬಿ ಫಾರ್ಮ್ ಇಲ್ಲದೆಯೇ ನಾಮಪತ್ರ ಸಲ್ಲಿಸಿದ್ದಾರೆ. ಪೂಜೆ ಪುನಸ್ಕಾರ ಬಳಿಕ ತಮ್ಮ ತಾಯಿ ಡಾ.ಪ್ರಭಾ ಮಲ್ಲಿಕಾರ್ಜುನ್ ಸೇರಿದಂತೆ ಆಪ್ತರೊಂದಿಗೆ ತೆರಳಿ ನಾಮಪತ್ರ ಸಲ್ಲಿಸಿದ್ದಾರೆ..!



ಶಾಮನೂರು ಅವರ ಉಪಕಾರ ಪೂಜ್ಯ ತಂದೆ ಯಡ್ಡಿಯೂರಪ್ಪ, ಪುತ್ರರಾದ ರಾಘವೇಂದ್ರ, ವಿಜಯೇಂದ್ರ ಮೇಲೆ ತುಂಬಾ ಇದೆ. ರಾಘವೇಂದ್ರ ಹಾಗೂ ವಿಜಯೇಂದ್ರ ಗೆಲ್ಲಲು ಶಾಮನೂರು ಅವರ ಸಹಾಯ ಇದೆ. ಟಿಕೆಟ್ ಈಗ ಕೊಟ್ಟಿರೋದು ತಾತ್ಕಾಲಿಕ ಎಂದು ಯತ್ನಾಳ್ ಹೇಳಿದ್ದಾರೆ. ಸಿದ್ದೇಶ್ವರ ಆಪ್ತಗೆ ಟಿಕೆಟ್ ಕೊಟ್ಟರೂ ಪೂಜ್ಯ ತಂದೆ ಹಾಗೂ ಮಕ್ಕಳು ಬಿಜೆಪಿ ಅಭ್ಯರ್ಥಿಯನ್ನ ಸೋಲಿಸುತ್ತಾರೆ.

–ಬಸವನಗೌಡ ಪಾಟೀಲ್ ಯತ್ನಾಳ್, ಮಾಜಿ ಸಚಿವ.

## ಡ್ಯಾಂ ಗೇಟ್ ಅಳವಡಿಕೆ ಪೂರ್ಣ ಶೀಘ್ರ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ತುಂಗಭದ್ರಾ ಡ್ಯಾಂ ನ ಅಣೆಕಟ್ಟು 33 ಹೊಸ ಗೇಟ್ ಗಳು ಅಳವಡಿಕೆ ಎಡದಂಡೆ ಕಾಲುವೆಯ ಹೊಡೆದು ಹೋಗಿದೆ. ಬೋರ್ಡ್‌ನವರು ಮತ್ತು ಮೂರು ರಾಜ್ಯ ಸರ್ಕಾರ ಸೇರಿ 33 ಹೋಸ ಗೇಟ್ ಗಳು ಕೊಡಿಸುವ ಸರ್ಕಾರದ ಉದ್ದೇಶಿಸಿವೆ ಎಂದು ಶಾಸಕ ಹಂಪನಗೌಡ ಬಾದರ್ಲಿ ಹೇಳಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಮಾತನಾಡಿ, ಬೇಸಿಗೆ ಬೆಳೆಯನ್ನು ಬೆಳೆಯುವುದಕ್ಕೆ ನೀರು ಬಿಡುವುದಕ್ಕೆ ಆಗುವುದಿಲ್ಲ ಎಂಬ ವಿಚಾರವನ್ನು ಮುಂದಿಟ್ಟುಕೊಂಡು ಕಾಮಗಾರಿ ಕೆಲಸ ಪ್ರಾರಂಭವಾಗಿದೆ ಎಂದಿದ್ದಾರೆ. ಖಾಜಿ ಮಲ್ಲಿಕಾ ವಕೀಲರು. ಆರ್ ಅಂಬ್ರೋಸ್ ಡಾ.ರಾಮಣ್ಣ.ಗೋನವಾರ ಮಲ್ಲಿಕಾರ್ಜುನ ಗೌಡ. ರಾಮನಗೌಡ ಮಲ್ಕಾಪುರ ಸೇರಿದಂತೆ ಇತರರು ಇದ್ದರು.

### ಮೇ15ರ ಒಳಗೆ ಎಲ್ಲಾ ಕೆಲಸ ಪೂರ್ಣ

ಈಗಾಗಲೇ 33 ಗೇಟ್‌ಗಳ ಪೈಕಿ 18 ಗೇಟ್ ಅಳವಡಿಕೆ ಶೇ.90 ಕಾಮಗಾರಿ ಕೆಲಸ ಮುಗಿದಿದೆ.ಎರಡೂ ಗೇಟ್ ಚೈನ್ ಲಿಂಕ್ ಹಾಕಿ ಟೆಸ್ಟ್ ಮಾಡಿದ್ದಾರೆ. ಉಳಿದ 13 ಕ್ರಸ್ಟ್ ಗೇಟ್ ಎಪ್ರಿಲ್ 15 ರಿಂದ ಮೇ 15 ರ ಒಳಗೆ ಎಲ್ಲಾ ಕೆಲಸ ಮುಗಿಸುವ ತುಂಗಭದ್ರಾ ಬೋರ್ಡ್ ಹಾಗೂ ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದಿದ್ದಾರೆ ಬಾದರ್ಲಿ.

### ಅಧಿಕಾರಿಗಳ ಸಸ್ಪೆಂಡ್‌ಗೆ ಬಾದರ್ಲಿ ಆಗ್ರಹ

ಮೊದಲು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕೆಂದು ಸರ್ಕಾರಕ್ಕೆ ಆಗ್ರಹಿಸುವೆ. ಕಾಲುವೆ ಒಡೆಯುವುದಕ್ಕೆ ಎಇಇ ಅಮರೇಶ, ಸಿಬ್ಬಂದಿ ವರ್ಗ ಕಾರಣ. ಸ್ಥಳೀಯ ಜನರು ಕಾಲುವೆ ನೀರು ಬಿಡುವ ಮುಂಚೆ ಅಲ್ಲಿನ ಕಾಲುವೆ ದುರಸ್ತಿ ಬಗ್ಗೆ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಜನರ ಮಾತಿಗೆ ಕ್ಯಾರೇ ಎನ್ನದೆ ನಿರ್ಲಕ್ಷ್ಯವಹಿಸಿದ್ದಾರೆ ಎಂದು ಕಿಡಿಕಾರಿದ್ದಾರೆ.












**ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ಬಗ್ಗೆ ಆಡಳಿತ ಪಕ್ಷದಲ್ಲೇ ವಿರೋಧವನ್ನು ಗಮನಿಸುತ್ತಿದ್ದೇವೆ: ಬಿ.ವೈ.ವಿಜಯೇಂದ್ರ**

## ಅಮೃತ ಮಹೋತ್ಸವ: ಪ್ರಚಾರ ರಥಕ್ಕೆ ಚಾಲನೆ

# ಏಪ್ರಿಲ್‌ನಲ್ಲಿ ಅರ್ಥಪೂರ್ಣ ಕಾರ್ಯಕ್ರಮ



ಭಾಲ್ಕಿ,ಬಸವ ಜಯಂತಿ,ವಚನ ಜಾತ್ರೆ–2026 ಮತ್ತು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ನಿಮಿತ್ತ ಪಟ್ಟಣದಲ್ಲಿ ಬರುವ ಏಪ್ರಿಲ್‌ನಲ್ಲಿ ಅರ್ಥಪೂರ್ಣ ಕಾರ್ಯಕ್ರಮಗಳು ಜರುಗಲಿವೆ ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಹೇಳಿದರು.

ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ಹಿರೇಮಠ ಸಂಸ್ಥಾನ ಮತ್ತು ಅಮೃತ ಮಹೋತ್ಸವ ಸಮಿತಿ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಕಾರ್ಯಾಲಯ ಉದ್ಘಾಟನೆ ಮತ್ತು ಪ್ರಚಾರ ರಥ ಚಾಲನೆ ಕಾರ್ಯಕ್ರಮದ ನೇತೃತ್ವ ವಹಿಸಿ ಅವರು ಮಾತನಾಡಿದರು.

ಏಪ್ರಿಲ್ 1ರಿಂದ ಪ್ರವಚನ ಸೇರಿ ಮುಂತಾದ ಅರ್ಥಪೂರ್ಣ ಕಾರ್ಯಕ್ರಮಗಳು ಆರಂಭಗೊಂಡು ಏ.22ಕ್ಕೆ ಸಮಾರೋಪಗೊಳ್ಳಲಿವೆ. ನಾಡಿನ ನಾನಾ ಮಠಾಧೀಶರು, ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು, ಕೇಂದ್ರ, ರಾಜ್ಯ ಸಚಿವರು, ಸಾಹಿತಿಗಳು ಪಾಲ್ಗೊಳ್ಳಲಿದ್ದಾರೆ ಎಂದರು ಮಾಹಿತಿ ವಿನಿಮಯ ಮಾಡಿಕೊಳ್ಳಲು ಕಾರ್ಯಾಲಯ ತೆರೆಯಲಾಗಿದೆ. ಪ್ರಚಾರ ರಥ ಜಿಲ್ಲೆಯಾದ್ಯಂತ ಸಂಚರಿಸಿ ಸಮಾರಂಭದ ಉಪಯುಕ್ತ ಮಾಹಿತಿ ನೀಡಲಿದೆ ಎಂದು ತಿಳಿಸಿದರು. ನಾರಾಯಣ ಖೇಡ ಮುನ್ಸಿಪಲ್ ಚೇರಮನ್ ನಾಗೇಶ ಶೆಟಕಾರ್ ಕಾರ್ಯಾಲಯ ಉದ್ಘಾಟಿಸಿದರು.

ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಸಾನ್ನಿಧ್ಯ ವಹಿಸಿದ್ದರು. ಈ ಸಂದರ್ಭದಲ್ಲಿ ಅಮೃತ ಮಹೋತ್ಸವ ಸಮಿತಿ ಗೌರವಾಧ್ಯಕ್ಷ, ಮಾಜಿ ಶಾಸಕ ಪ್ರಕಾಶ ಖಂಡ್ರೆ, ಚನ್ನಬಸವ ಪಟ್ಟದ್ದೇವರು ಬ್ಯಾಂಕ್‌ನ ಅಧ್ಯಕ್ಷ ಡಿ.ಕೆ.ಸಿದ್ರಾಮ, ಯುವ ಮುಖಂಡ ಶಿವು ಲೋಖಂಡೆ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಶಂಭುಲಿಂಗ ಕಾಮಣ್ಣ, ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಸೋಮನಾಥಪ್ಪ ಅಷ್ಟೂರೆ, ಪ್ರಮುಖರಾದ ಕಾಶಿನಾಥ ಭೂರೆ, ನಾಗಶೆಟೆಪ್ಪ ಲಂಜವಾಡೆ, ಶಿವರಾಜ ಮಲ್ಲೇಶಿ, ಮೋಹನ ರೆಡ್ಡಿ, ಶಿವಕುಮಾರ ಕಮಠಾಣೆ, ಗುಂಡಪ್ಪ ಸಂಗಮಕರ್ ಸೇರಿದಂತೆ ಹಲವರು ಇದ್ದರು.

# ಭಕ್ತರ ರಕ್ಷಕ ಇಟಗಾ ಚನ್ನಮಲ್ಲೇಶ್ವರ

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ



ಚನ್ನಮಲ್ಲೇಶ್ವರರ ಪಲ್ಲಕ್ಕಿ ಉತ್ಸವಕ್ಕೆ ಶಾಸಕ ಡಾ. ಸಿದ್ದು ಪಾಟೀಲ್ ಹಾಗೂ ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ್ ಪಾಟೀಲ್ ಚಾಲನೆ ನೀಡಿದರು.

ಚನ್ನಮಲ್ಲೇಶ್ವರ ಮೇಲೆ ಭಕ್ತರು ಶ್ರದ್ಧೆಯಿಂದ ಪೂಜಿಸಿದರೆ ನಮ್ಮ ಇಷ್ಟಾರ್ಥಗಳು ಸಿದ್ಧಿ ಆಗುತ್ತವೆ ಎಂದು ಚಾಂಗಲೇರಾ ಮತ್ತು ಚಿಟಗುಪ್ಪ ಹಿರೇಮಠದ ಪೀಠಾಧಿಪತಿ ಮರುಳಾರಾಧ್ಯ ಶಿವಾಚಾರ್ಯರು ತಾಲೂಕಿನ ಇಟಗಾ ಗ್ರಾಮದ ವಿರಕ್ತ ಮಠ ಚನ್ನಮಲ್ಲೇಶ್ವರರ ಪಲ್ಲಕ್ಕಿ ಮಹೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಧರ್ಮ ಸಭೆ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ತಿಳಿಸಿದರು.

ಇಟಗಾ ಗ್ರಾಮ ಶ್ರೀ ಗುರುಭದ್ರೇಶ್ವರ ಹಾಗೂ ಚೆನ್ನಮಲ್ಲೇಶ್ವರರ ನೆಲೆಸಿದ್ದ ಪವಿತ್ರವಾದ ಗ್ರಾಮವಾಗಿದೆ ಶಿವರಾತ್ರಿ ಮಹೋತ್ಸವದಂದು ಗ್ರಾಮದಲ್ಲಿ ರಥೋತ್ಸವ ಜರುಗಿದರೆ ಯುಗಾದಿ ಹೊಸ ವರ್ಷದಲ್ಲಿ ಚೆನ್ನಮಲ್ಲೇಶ್ವರರ ಪಲ್ಲಕ್ಕಿ ಉತ್ಸವವನ್ನು ಗುರುವಾರ ಸಂಜೆ 7.30ಕ್ಕೆ ದೇವಸ್ಥಾನದಿಂದ ಜರುಗಿ ಗ್ರಾಮದ ಪ್ರಮುಖ ರಸ್ತೆಗಳ ಮೂಲಕ ಮರುದಿನ ಬೆಳಿಗ್ಗೆ ಪಲ್ಲಕ್ಕಿ ದೇವಸ್ಥಾನಕ್ಕೆ ತಲುಪುತ್ತದೆ ಎಂದರು. ಭರತನೂರು ಮಠದ ಚಿಕ್ಕ ಗುರು ನಂಜೇಶ್ವರರು ಮಾತನಾಡಿ, ಗ್ರಾಮದ ಅತ್ಯಂತ ಪುರಾತನವಾಗಿರುವ ಚೆನ್ನಮಲ್ಲೇಶ್ವರರು ಈ ಗ್ರಾಮದ ರಕ್ಷಕರಾಗಿದ್ದಾರೆ ಭಕ್ತರ ಕಷ್ಟಗಳು ನಿವಾರಿಸಲು ಪವಾಡ ಪುರುಷರಾಗಿದಾರೆ ಎಂದರು. ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ್ ಪಾಟೀಲ ಮಾತನಾಡಿ, ಇಟಗಾ ಗ್ರಾಮ ಪವಿತ್ರ ಗ್ರಾಮವಾಗಿದೆ ಇಲ್ಲಿನ ಜನರು ಧಾರ್ಮಿಕದಲ್ಲಿ ಅಪಾರ ಶ್ರದ್ಧೆ ಭಕ್ತಿ ಉಳ್ಳವರಾಗಿದ್ದಾರೆ. ಪ್ರತಿಯೊಬ್ಬರು ಗುರು ಹಿರಿಯರನ್ನು ಗೌರವದಿಂದ ಕಾಣಬೇಕು ಎಂದರು.

ಈ ಸಂದರ್ಭದಲ್ಲಿ ದೇವಸ್ಥಾನದ ಪಂಚ ಕಮಿಟಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು, ಇಟಗಾ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಿ ದೇವರ ದರ್ಶನ ಪಡೆದರು.

# ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



## ಈ ನಾಡಿನ ಅಭಿವೃದ್ಧಿಗೆ ಪ್ರಮಾಣಿಕ ಹಾಗೂ ಕರ್ತವ್ಯನಿಷ್ಠ ಅಧಿಕಾರಿಗಳು ಅತ್ಯಂತ ಅಗತ್ಯ

ಅಧಿಕಾರಿಗಳು ನಿಷ್ಠೆಯಿಂದ ಕೆಲಸ ಮಾಡಿದಾಗ ಮಾತ್ರ ಸರ್ಕಾರದ ಯೋಜನೆಗಳು ನಿಜವಾಗಿ ಜನರಿಗೆ ತಲುಪುತ್ತವೆ. ಆದರೆ ಕೆಲವೆಡೆ ಭ್ರಷ್ಟಾಚಾರ, ನಿರ್ಲಕ್ಷ್ಯ ಮತ್ತು ಜವಾಬ್ದಾರಿಯ ಕೊರತೆಯಿಂದ ಜನರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಅಧಿಕಾರಿಗಳ ಕಿರುಕುಳಕ್ಕೆ ಕೆಲಬಡ ಜನರು ನರಕ ಅನುಭವಿಸುತ್ತಿದ್ದಾರೆ ಎಂಬ ಆರೋಪವು ಕೇಳಿಬರುತ್ತಿದೆ. ಅಧಿಕಾರಿಗಳು ತಮ್ಮ ಹುದ್ದೆಯನ್ನು ಜನಸೇವೆಗೆ ಬಳಸಬೇಕು. ಸರ್ಕಾರ ನೀಡುವ ಸೌಲಭ್ಯಗಳು ನಿಜವಾದ ಅರ್ಹರಿಗೆ ತಲುಪುವಂತೆ ನೋಡಿಕೊಳ್ಳಬೇಕು. ಜನರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ, ಪಾರದರ್ಶಕ ಆಡಳಿತ ನೀಡುವುದು ಅವರ ಪ್ರಮುಖ ಕರ್ತವ್ಯವಾಗಿದೆ.

ಪ್ರಮಾಣಿಕ ಅಧಿಕಾರಿಗಳು ಇದ್ದರೆ ರಾಜ್ಯದಲ್ಲಿ ಅಭಿವೃದ್ಧಿ ವೇಗವಾಗಿ ನಡೆಯುತ್ತದೆ, ಜನರ ವಿಶ್ವಾಸ ಸರ್ಕಾರದ ಮೇಲೆ ಹೆಚ್ಚುತ್ತದೆ. ಆದರೆ ಅಧಿಕಾರಿಗಳು ಜವಾಬ್ದಾರಿಯನ್ನು ಮರೆತರೆ ಆಡಳಿತ ವ್ಯವಸ್ಥೆಯೇ ದುರ್ಬಲವಾಗುತ್ತದೆ.

ಆದ್ದರಿಂದ ಈ ನಾಡಿಗೆ ಪ್ರಮಾಣಿಕ, ನಿಷ್ಠಾವಂತ ಹಾಗೂ ಜನಪರ ಅಧಿಕಾರಿಗಳ ಅವಶ್ಯಕತೆ ಇದೆ. ಇಲ್ಲದಿದ್ದರೆ ಈ ನಾಡು ಹಾಳಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

# ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ: ಸಹಾಯವಾಣಿ ಕೇಂದ್ರ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಬೇಸಿಗೆಯ ಬಿಸಿಲ ತಾಪ ಏರುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಕಮಲನಗರ ತಾಲ್ಲೂಕು ಪಂಚಾಯತ್ ಕಚೇರಿಯಲ್ಲಿ ವಿಶೇಷ ಸಹಾಯವಾಣಿ ಕೇಂದ್ರವನ್ನು (Helpline Center) ತೆರೆಯಲಾಗಿದೆ.

ತಾಲ್ಲೂಕಿನಾದ್ಯಂತ ಬೇಸಿಗೆಯ ಅವಧಿಯಲ್ಲಿ ಉಂಟಾಗಬಹುದಾದ ನೀರಿನ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಹಣಮಂತರಾಯ ಕೌಟಗೆ ಅವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕರಿಗೆ ಸೂಚನೆ:

ತಾಲೂಕಿನ ಯಾವುದೇ ಗ್ರಾಮಗಳಲ್ಲಿ ಅಥವಾ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ಕಂಡುಬಂದಲ್ಲಿ, ಸಾರ್ವಜನಿಕರು ಈ ಕೆಳಗಿನ ಮೊಬೈಲ್ ಸಂಖ್ಯೆಗಳಿಗೆ ಕರೆ ಮಾಡಿ ಮಾಹಿತಿ ನೀಡಬಹುದು ಅಥವಾ ದೂರು ದಾಖಲಿಸಬಹುದು: ಸಹಾಯವಾಣಿ ಸಂಖ್ಯೆಗಳು: 9880913616 / 9480747496 ತ್ವರಿತ ಸ್ಪಂದನೆ: "ಕುಡಿಯುವ ನೀರಿನ ಸಮಸ್ಯೆ ಎದುರಾದಲ್ಲಿ ಸಾರ್ವಜನಿಕರು ಗಾಬರಿಯಾಗುವ ಅಗತ್ಯವಿಲ್ಲ. ಸಹಾಯವಾಣಿಗೆ ಕರೆ ಮಾಡಿದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆಯನ್ನು ಬಗೆಹರಿಸಲಿದ್ದಾರೆ, ಎಂದು ಅಧಿಕಾರಿಗಳು ಭರವಸೆ ನೀಡಿದ್ದಾರೆ.



ಬಸವಕಲ್ಯಾಣ: ನಗರದ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ಹಾಗೂ ವಿಶ್ವಸ್ಥ ಸಮಿತಿಯ ಇವರ ಸಂಯುಕ್ತ ಆಶ್ರಯದಲ್ಲಿ ಚಂದ್ರಮಾನ ಯುಗಾದಿ ಹಬ್ಬದಿಂದ ನಂದಿಧ್ವಜದ ತರಬೇತಿ ನಿಮಿತ್ಯ ಇಲ್ಲಿನ ಶರಣ ನಾಗಿದೇವರ ಕಂಬಳಿಮಠ ದಲ್ಲಿ 23.ನೇಯ ವರ್ಷದ ನಂದಿಧ್ವಜ ತರಬೇತಿ ಕಾರ್ಯಕ್ರಮದಲ್ಲಿ ಶ್ರೀ ಬಸವೇಶ್ವರ ದೇವಸ್ಥಾನದ ನೂತನ ನಿರ್ದೇಶಕರಿಗೆ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಖೇಳಗಿ ಪೂಜ್ಯ ಶ್ರೀ ಶಿವಲಿಂಗೇಶ್ವರ ಮಹಾಸ್ವಾಮಿಜಿ . ಶ್ರೀ ಬಸವೇಶ್ವರ ನಂದಿಧ್ವಜದ ಸೇವಾ ಸಮಿತಿ ಅಧ್ಯಕ್ಷರಾದ ಮಲ್ಲಯ ಸ್ವಾಮಿ ಹಿರೇಮಠ. . ಸಿ. ಪಿ. ಐ. ಅಲಿಸಾಬ್. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕಾ ಅಧ್ಯಕ್ಷರಾದ ಮಾರ್ಥಂಡ್ ಜೋಶಿ. ವಿಶ್ವಸ್ಥ ಸಮಿತಿಯ ಅಧ್ಯಕ್ಷರಾದ ಶಶಿಕಾಂತ ದುರ್ಗೆ. ಕಲಬುರ್ಗಿಯ ವಾಣಿಜ್ಯ ಇಲಾಖೆಯ ಅಧಿಕಾರಿಗಳಾದ ಡಾ. ಮಹೇಶ್ ಪಾಟೀಲ. ಮಾಜಿ ನಿರ್ದೇಶಕ ಸುಭಾಷ ಹೋಳಕುಂದೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸರ್ಕಾರಿ ಶಾಲೆಯ ವಾರ್ಷಿಕೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ



ಪಟ್ಟಣದ ಫಾತಿಮಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ದ್ವಿತೀಯ ವರ್ಷದ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಇಂದು ಸಂಜೆ 5:30 ಘಂಟೆಗೆ ಶಾಲಾ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಶಾಲೆಯ ಮುಖ್ಯ ಶಿಕ್ಷಕಿ ಪ್ರೇಮಿಳಾ ರೆಡ್ಡಿ ತಿಳಿಸಿದ್ದಾರೆ. ಕ್ಷೇತ್ರ ಶಿಕ್ಷಣಾಧಿಕಾರಿ ವೆಂಕಟೇಶ್ ಎಸ್. ಗುಡಾಳ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪುರಸಭೆ ಮುಖ್ಯಾಧಿಕಾರಿ ಸತೀಶ್ ಗುಡ್ಡೆ, ಅಕ್ಷರ ದಾಸೋಹ ಯೋಜನೆ ಸಹಾಯಕ ನಿರ್ದೇಶಕಿ ಕರುಣಾದೇವಿ ಭೋಸ್ಲೆ, ರವೀಂದ್ರರೆಡ್ಡಿ ಮಾಲಿ ಪಾಟೀಲ್, ಸಾರಿಕಾ ಗಂಗಾ, ರಾಜಶೇಖರ ಉಪ್ಪಿನ, ಅಶೋಕಕುಮಾರ್ ಮಹೇಂದ್ರಕರ್, ರಾಜಪ್ಪ ಜಮಾದರ್, ಪಂಡಿತ ಕಲ್ಯಾಣಿ, ಡಾ. ರವಿ ಸ್ವಾಮಿ ನಿರ್ಣಾ, ಅನೀಲಕುಮಾರ್ ಸಿಂಧೆ, ತಸ್ಲೀಮ್ ಬೇಗಂ, ದಿಲೀಪ ನರನಾಳ, ಅಂಬಾಜಿ ಪವಾರ್, ಸುಭಾಷ ಜಮಾದರ್, ವಿಶೇಷ ಸನ್ಮಾನಿತರಾಗಿ ಗೌರಮ್ಮ ಮಡೆಪ್ಪ ನರನಾಳ, ಸೌಭಾಗ್ಯವತಿ ಅಶೋಕ ಸ್ವಾಮಿ, ಶಾಂತಾಬಾಯಿ ಲಕ್ಷ್ಮಣ ಪವಾರ್, ಶಶಿಕಲಾ ವೈಜಿನಾಥರೆಡ್ಡಿ ರಾಂಪುರ, ಗೋರಖನಾಥ ಸೀತಾಳಗೇರಾ, ಜಗದೇವಿ ಅಂಬಣ್ಣ ಸಿಂಧನಕೇರಾ ಆಗಮಿಸಲಿದ್ದಾರೆ. ಆದ ಕಾರಣ ಗ್ರಾಮಸ್ಥರು, ಶಿಕ್ಷಣ ಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಾರ್ಮಿಕರ ಬೆಳವಣಿಗೆಗೆ ಒಗ್ಗಟ್ಟಿನ ಶ್ರಮ ಅಗತ್ಯ



• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಇಂದಿನ ನಾಗರಿಕ ಜಗತ್ತಿನಲ್ಲಿ ಕಾರ್ಮಿಕರ ಸರ್ವಾಂಗೀಣ ಅಭಿವೃದ್ಧಿ ಆಗಬೇಕಾದರೆ ಕಾರ್ಮಿಕರಲ್ಲಿ ಒಗ್ಗಟ್ಟಿನ ಶ್ರಮ ಅಗತ್ಯವಾಗಿದೆ ಎಂದು ಭಾರತೀಯ ದಲಿತ ಪ್ಯಾಂಥರ್ ಸಂಘಟನೆ ತಾಲೂಕ ಅಧ್ಯಕ್ಷ ಗಣಪತಿ ಅಷ್ಟೂರೆ ಹೇಳಿದರು.

ನಗರದ ಶಿವಪೂರ ಬಡಾವಣೆಯ ಉಪಾರ ಗಲ್ಲಿಯ ಕಲ್ಯಾಣ ಮಂಟಪದಲ್ಲಿ ಭಾರತೀಯ ದಲಿತ ಪ್ಯಾಂಥರ್ ಸಂಘಟನೆಯ ಕಾರ್ಮಿಕ ಘಟಕದ ವತಿಯಿಂದ ಗುರುವಾರ ಆಯೋಜಿಸಿದ್ದ ಕಾರ್ಮಿಕರ ಸೌಲಭ್ಯಗಳ ಅರಿವು ಮೂಡಿಸುವ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಇಂದಿನ ಒತ್ತಡದ ಬದುಕಿನಲ್ಲಿ ಕೇವಲ ಕೆಲಸ ಮಾಡುತ್ತಾ ಜೀವನ ಕಳೆಯಬಾರದು, ತಮ್ಮ ಆರೋಗ್ಯದ ಕಡೆಯೂ ವಿಶೇಷ ಕಾಳಜಿ ವಹಿಸಬೇಕು. ಜೊತೆಗೆ ಕಾರ್ಮಿಕರಿಗಾಗಿ ಕಾರ್ಮಿಕ ಇಲಾಖೆಯಿಂದ ಸಿಗುವ ಎಲ್ಲ ಸೌಲಭ್ಯಗಳ ಕುರಿತು ಮಾಹಿತಿ ಪಡಿದುಕೊಂಡು ಸರಕಾರದ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಂದಾಯ ನಿರೀಕ್ಷಕ ರಾಹುಲದೇವ ಪ್ರಸಾದ ಮಾತನಾಡಿ, ದೇಶದ ಸಮಗ್ರ ಅಭಿವೃದ್ಧಿಯಲ್ಲಿ ಕಾರ್ಮಿಕರ ಕೊಡುಗೆ ಅಪಾರವಿದೆ. ಹೀಗಾಗಿ ಕಾರ್ಮಿಕರ ಹಕ್ಕುಗಳ ರಕ್ಷಣೆ ಆಗಬೇಕು. ಅಲ್ಲದೇ ನಿಜವಾದ ಕಾರ್ಮಿಕರಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಡುವ ಕಾರ್ಯ ಕಾರ್ಮಿಕ ಇಲಾಖೆ ಅಧಿಕಾರಿಗಳು ಪ್ರಾಮಾಣಿಕವಾಗಿ ಮಾಡಬೇಕು ಎಂದು ತಿಳಿಸಿದರು.

ಕಾರ್ಮಿಕ ನಿರೀಕ್ಷಕ ರಾಹುಲ್ ರತ್ನಾಕರ ಮಾತನಾಡಿ, ಕಾರ್ಮಿಕರ ಕಲ್ಯಾಣಕ್ಕಾಗಿ ನಮ್ಮ ಇಲಾಖೆಯಿಂದ ಅನೇಕ ಯೋಜನೆಗಳನ್ನು ನೀಡಲಾಗಿದೆ. ಕಾರ್ಮಿಕರು ಅವುಗಳನ್ನು ಸದುಪಯೋಗ ಮಾಡಿಕೊಂಡು ಆರ್ಥಿಕರಾಗಿ ಬೆಳೆಯಬೇಕು. ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಅವರ ಭವಿಷ್ಯಕ್ಕೆ ದಾರಿ ಮಾಡಿಕೊಡಬೇಕು ಎಂದರು.

ಈ ಸಂದರ್ಭದಲ್ಲಿ ಭಗೀರಥ ಸಮಾಜದ ಅಧ್ಯಕ್ಷ ಪೀರಪ್ಪ ಪಡತಲ್, ಉಪಾರ ಸಮಾಜದ ಅಧ್ಯಕ್ಷ ಮಹೇಶ ಸೂರುರ್, ಕಲ್ಲಪ್ಪ ಸಗರ್, ಸುಶೀಲಕುಮಾರ ಭೋಲಾ, ಸಿದ್ಧಾರ್ಥ ಜಾನವೀರ್, ಗೌತಮ ಜಾನವೀರ, ಸುನೀಲ್ ಬರ್ಲಾ, ದೇವಿದಾಸ ಪಡತಲ್, ರಾಜು ಚಲವಾದಿ, ದತ್ತು ಪಡತಲ್, ಮಾರುತಿ ಸೇರಿ ಅನೇಕರಿದ್ದರು.

# ನಂದಿಧ್ವಜ ತರಬೇತಿಗೆ ಖೇಳಗಿ ಪೂಜ್ಯರಿಂದ ಚಾಲನೆ



ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ನಗರದ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ಹಾಗೂ ವಿಶ್ವಸ್ಥ ಸಮಿತಿಯ ಇವರ ಸಂಯುಕ್ತ ಆಶ್ರಯದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಚಂದ್ರಮಾನ ಯುಗಾದಿ ಹಬ್ಬದಿಂದ ಪ್ರಾರಂಭವಾಗುವ ನಂದಿಧ್ವಜದ ತರಬೇತಿ ನಿಮಿತ್ಯ ಇಲ್ಲಿನ ಶರಣ ನಾಗಿದೇವರ ಕಂಬಳಿಮಠ ದಲ್ಲಿ ಗುರುವಾರ ನಡೆದ 23.ನೇಯ ವರ್ಷದ ನಂದಿಧ್ವಜ ತರಬೇತಿ ಕಾರ್ಯಕ್ರಮಕ್ಕೆ ಖೇಳಗಿ ಶ್ರೀ ಶಿವಲಿಂಗೇಶ್ವರ ವಿರಕ್ತ ಮಠದ ಪೂಜ್ಯ ಶ್ರೀ ಶಿವಲಿಂಗೇಶ್ವರ ಮಹಾಸ್ವಾಮಿಜಿ ಚಾಲನೆ ನೀಡಿ ಅವರು ಮಾತನಾಡಿ ಹೆಣ್ಣು. ಹೂನ್ನು. ಮಣ್ಣು ಇವು ಒಳ್ಳೆಯದು ಹೌದು ಅಷ್ಟೇ ನಮ್ಮ ಅವನತಿಗೆ ಕಾರಣವಾಗುತ್ತವೆ ಎಂದು ಉತ್ತಮ ದೃಷ್ಟಾಂತ ನೀಡಿ ತಿಳಿಸಿದರು. . ಶ್ರೀ ಬಸವೇಶ್ವರ ನಂದಿಧ್ವಜದ ಸೇವಾ ಸಮಿತಿ ಅಧ್ಯಕ್ಷರಾದ ಮಲ್ಲಯ್ಯ ಸ್ವಾಮಿ ಹಿರೇಮಠ ಅಧ್ಯಕ್ಷತೆ ವಹಿಸಿ ಮಾತನಾಡಿ ದಿ. ಮಲ್ಲಪ ವಾರದ ಅವರ ಸೇವೆಯನ್ನು ನೆನಪಿಸಿಕೊಂಡ ಇವರು ಬಸವಕಲ್ಯಾಣದಲ್ಲಿ ವೈಭವರೀತಿಯ ಬಸವೇಶ್ವರ ಜಾತ್ರೆ ಹಾಗೂ ನಂದಿ ಧ್ವಜದ ಮೆರವಣಿಗೆ ಇವರ ಸೇವೆ ಬಹಳಷ್ಟು. ಅಲ್ಲದೆ ಇವರು ಸತ್ಯ ಸುದ್ದ ಕಾಯಕ ಪುರುಷರಾಗಿದರು ಎಂದು ತಿಳಿಸಿ ಅವರ ಒಂದು ಮೂರ್ತಿ ವಾರದ ಚೌಕದಲ್ಲಿ ಸ್ಥಾಪನೆ ಮಾಡಬೇಕು ಎಂದು ದೇವಸ್ಥಾನದ ಮಂಡಳಿಯವರಿಗೆ ಮನವಿ ಮಾಡಿದರು.

ಮುಖ್ಯ ಅತಿಥಿಗಳಾಗಿ ನಗರ ಪೊಲೀಸ್ ಠಾಣೆಯ ಸಿ. ಪಿ. ಐ. ಅಲಿಸಾಬ್ ಮಾತ ನಾಡಿ ಈ ಸಮಿತಿ ಉತ್ತಮ ಕಾರ್ಯ ಹಮ್ಮಿ ಕೊಂಡಿದ್ದಕ್ಕೆ ಅಭಿನಂದನೆ ಸಲ್ಲಿಸಿದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕಾ ಅಧ್ಯಕ್ಷರಾದ ಮಾರ್ಥಂಡ್ ಜೋಶಿ. ವಿಶ್ವಸ್ಥ ಸಮಿತಿಯ ಅಧ್ಯಕ್ಷರಾದ ಶಶಿಕಾಂತ ದುರ್ಗೆ. ಕಲಬುರ್ಗಿಯ ವಾಣಿಜ್ಯ ಇಲಾಖೆಯ ಅಧಿಕಾರಿಗಳಾದ ಡಾ. ಮಹೇಶ್ ಪಾಟೀಲ. ಮಾಜಿ ನಿರ್ದೇಶಕ ಸುಭಾಷ ಹೊಳಕುಂದೆ ಉಪಸ್ಥಿತರಿದ್ದರು.

ನಂದಿಧ್ವಜ ಸೇವಾ ಸಮಿತಿಯವರಿಂದ ಶ್ರೀ ಬಸವೇಶ್ವರ ಶಿಕ್ಷಣ ಸಂಸ್ಥೆಯ ನೂತನ್ ನಿರ್ದೇಶಕರಿಗೆ. ಶಿಕ್ಷಕ ಸಿಬ್ಬಂದಿವರ್ಗ ದವರಿಗೆ ಹಾಗೂ ಪತ್ರಕರ್ತರಿಗೆ ಸನ್ಮಾನಿಸಲಾಯಿತು.

ನಂದಿಧ್ವಜ ಸೇವಕರಾದ ಸುಭಾಷ ಬಾವಗೆ, ಕಲ್ಲಯ್ಯ ಸ್ವಾಮಿ, ಸಾಗರ ಲಾಡ, ಗುರುಪಾದಪ್ಪ ಖರೂಣೆ. ಸಚಿನ ಹುಡಗೆ. ಕಿರಣ ಬುಡಗೆ. ರಾಜಪ್ಪ ಶೀಲವಂತ.

ಸಾಗರ ಬಾಲಕಿಲೆ. ಪವನ ದಾಬಕೆ. ವೀರೇಶ ಅಂಬುಲಗೆ. ನರೇಶ ದೇಗಲೂರೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಸಂಗನ ಬಸವ ಸ್ವಾಮಿ ಸಂಚಾಲನೆ ಮಾಡಿದರು.

# ಮಸ್ಕಿ ಮನೆ ಗೋಡೆ ಕುಸಿದು ಮಹಿಳೆ ಸಾವು

• ಮಲ್ಲಮ್ಮ ನುಡಿ ವಾರ್ತೆ ಮಸ್ಕಿ



ಪಟ್ಟಣದ ದೇವಾಂಗ ಮಠದ ಬಳಿ ಶುಕ್ರವಾರ ನಡೆದ ದುರಂತದಲ್ಲಿ ಮನೆ ಗೋಡೆ ಕುಸಿದು ಮಹಿಳೆಯೊಬ್ಬರು ಸಾವನ್ನಪ್ಪಿದ್ದಾರೆ.

ಮೃತರನ್ನು ಈರಮ್ಮದಿನ್ನಿ (60) ಎಂದು ಗುರುತಿಸಲಾಗಿದೆ. ಅವರು ಮನೆಯಲ್ಲಿ ಒಬ್ಬರೇ ವಾಸವಾಗಿದ್ದರು ಎಂದು ತಿಳಿದುಬಂದಿದೆ.

ಪಟ್ಟಣದಲ್ಲಿ ಬಣ್ಣದ ಹಬ್ಬ ನಡೆ–ಯುತ್ತಿದ್ದ ಹಿನ್ನೆಲೆಯಲ್ಲಿ, ಅವರು ಮನೆ ಬಾಗಿಲು ಹಾಕಿಕೊಂಡು ಒಳಗೆ ಮಲಗಿದ್ದ ವೇಳೆ ಗೋಡೆ ಕುಸಿದಿದ್ದು ದುರಂತ ಸಂಭವಿಸಿದೆ.

ಸುದ್ದಿ ತಿಳಿದು ಸ್ಥಳಕ್ಕೆ ದೌಡಾಯಿಸಿದ ಸಿಪಿಐ ರಾಮಪ್ಪ ಜಲೆಗಾರ ಹಾಗೂ ಪಿಎಸ್‌ಐ ಕೆ. ರಂಗಯ್ಯ ಅವರು ಸಾರ್ವಜನಿಕರ ಸಹಾಯದಿಂದ ಮಹಿಳೆಯನ್ನು ಹೊರತೆಗೆದು ಆಸ್ಪತ್ರೆಗೆ ಸಾಗಿಸಲು ಪ್ರಯತ್ನಿಸಿದರು. ಆದರೆ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಅವರು ಮೃತಪಟ್ಟಿದ್ದಾರೆ.

ಈ ಕುರಿತು ಮಸ್ಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

# ಗ್ರ್ಯಾಜ್ಯುಯೇಶನ್ ಹೆಲ್ಪರ್ಸ್ ಡೆ



ಮಲ್ಲಮ್ಮನುಡಿ ವಾರ್ತೆ ಕಮಲನಗರ

ಪಟ್ಟಣದ ಗುರು ಕಾರುಣ್ಯ ಪಬ್ಲಿಕ್ ಸ್ಕೂಲ್‌ನಲ್ಲಿ ಗ್ರ್ಯಾಜ್ಯುಶನ್ ಡೇ ಮತ್ತು ಹೆಲ್ಪರ್ಸ್ ಡೇ ಕಾರ್ಯಕ್ರಮವನ್ನು ಜರುಗಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ನೀಶಾ ನಿತೀನ ಪಾಂಡ್ರೆ ದಂಪತಿ ಅವರಿಂದ ಬಸವ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು.

ಪ್ರೊ. ಎಸ್.ಎನ್.ಶಿವಣಕರ್ ಮಾತನಾಡಿ, ಶಿಕ್ಷಣದ ಮೌಲ್ಯಗಳನ್ನು ತಿಳಿಸಿದರು ಹಾಗೂ ಈ ಶಾಲೆಯಲ್ಲಿ ಮೌಲ್ಯಯುತ

ಶಿಕ್ಷಣದೊಂದಿಗೆ ಸಂಸ್ಕಾರಯುತ ಶಿಕ್ಷಣ ಸಿಗುತ್ತಿರುವುದು ಶ್ಲಾಘನೀಯವಾಗಿದೆ ಎಂದರು.

ಪ್ರಾಂಶುಪಾಲ ನಿಲಕಂಠ ಪಾಂಡ್ರೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು.

ಆಡಳಿತಾಧಿಕಾರಿ ಚನ್ನಬಸವ ಘಾಳೆ, ಪ್ರವೀಣ ಪಾಟೀಲ, ಪ್ರಕಾಶ ಸೋಲಾಪುರೆ, ಸುರೇಶ ಸೋಲಾಪುರೆ, ರಾಜಕುಮಾರ ಸಜ್ಜನಶೆಟ್ಟಿ, ನಾಗಯ್ಯಾ ಸ್ವಾಮಿ, ಶಿಕ್ಷಕ ವಿವೇಕಾನಂದ ಇದ್ದರು. ಶಿಕ್ಷಕಿ ಎಸ್ತಾರಾಣಿ ನಿರೂಪಿಸಿದರು.

# ಮಾರ್ಚ್ 24 ರಂದು ಪ್ರಗತಿ ಪರಿಶೀಲನಾ ಸಭೆ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಅಮೃತರಾವ ಚಿಮಕೋಡೆ ಅವರ ಅಧ್ಯಕ್ಷತೆಯಲ್ಲಿ ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಗಳಾದ ಪಂಚ ಗ್ಯಾರಂಟಿ ಯೋಜನೆಗಳ ಕುರಿತು 2026ನೇ ಮಾರ್ಚ್.24 ರಂದು ಬೆಳಿಗ್ಗೆ 11 ಗಂಟೆಗೆ ಬೀದರ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ.

ಕಾರಣ ಸದರು ಸಭೆಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ತಮ್ಮ ತಮ್ಮ ಇಲಾಖೆಯ ಪ್ರಗತಿ ವರದಿಯೊಂದಿಗೆ ಖುದ್ದಾಗಿ ಸಭೆಗೆ ಹಾಜರಾಗಬೇಕೆಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯ ಕಾರ್ಯದಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಕರ್ನಾಟಕ ಸರ್ಕಾರ
**ಧಾರ್ಮಿಕ ದತ್ತಿ ಇಲಾಖೆ,**
**ಕಾರ್ಯನಿರ್ವಾಹಣಾಧಿಕಾರಿಗಳ ಕಾರ್ಯಾಲಯ, ಶ್ರೀ ಝರಣಿ ನರಸಿಂಹ ದೇವಸ್ಥಾನ,**
**ಬೀದರ ನಗರ ತಾ:ಜಿ:ಬೀದರ.**

ಸಂಖ್ಯೆ:ಝನದೇ:ಸಿಆರ್:01:2024–25 ದಿನಾಂಕ:18/03/2026


**ಪ್ರಕಟಣೆ**

ಬೀದರ ನಗರದ ಶ್ರೀ ಕ್ಷೇತ್ರ ಝರಣಿ ನರಸಿಂಹ ದೇವಸ್ಥಾನಕ್ಕೆ ಸೇರಿದ 16 ಮಳಿಗೆಗಳು/ಚಪ್ಪಲ್ ಸ್ಟ್ಯಾಂಡ್ ವಾಹನ ನಿಲುಗಡೆ (ವೆಹಿಕಲ್ ಪಾರ್ಕಿಂಗ್) ಮತ್ತು ಹಳೆ ಮಹಾದ್ವಾರ ಹತ್ತಿರವಿರುವ ಖಾಲಿ ಜಾಗ ಮತ್ತು ಭಾವಿ ಹತ್ತಿರ ಖಾಲಿ ಜಾಗ ಗರಿಷ್ಟ 5 ವರ್ಷದ ಅವಧಿಗೆ ಹರಾಜನ್ನು **ದಿನಾಂಕ: 30/03/2026** ರಂದು ಸೂಮವಾರ ಮಧ್ಯಾಹ್ನ 12.00 ಗಂಟೆಗೆ ದೇವಸ್ಥಾನದ ಆವರಣದಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುವುದು. ಹರಾಜಿನಲ್ಲಿ ಭಾಗವಹಿಸುವ ಆಸಕ್ತಿವುಳ್ಳವರು ಅಂದು ಬೆಳೆಗ್ಗೆ 10.00 ಗಂಟೆಗಯಿಂದ 12.00 ಗಂಟೆ ಯೊಳಗಾಗಿ ಹರಾಜು ಠೇವಣೆ ಮೊತ್ತ **ರೂ 2,00,000/–** ಗಳನ್ನು ಭರಿಸಿ ಹರಾಜಿನಲ್ಲಿ ಭಾಗವಹಿಸುವಂತೆ ಹಾಗೂ ಅಂತಿಮವಾಗಿ ಹೆಚ್ಚಿನ ಮೊತ್ತಕ್ಕೆ ಬಿಡ್ ಕೂಗಿದವರಿಗೆ ಹರಾಜನ್ನು ಸ್ಥಿರಿಕರಿಸಿ ಉಳಿದವರಿಗೆ ಅವರ ಠೇವಣೆ ಮೊತ್ತವನ್ನು ಹಿಂದಿರುಗಿಸಲಾಗುವದು. ಹರಾಜು ಪಡೆದ ವ್ಯಕ್ತಿಯು ಹರಾಜನ್ನು ಅಂತಿಮವಾಗಿ ಸ್ಥಿರಿಕರಿಸಿ ಆದೇಶ ನೀಡಿದ ನಂತರ [03] ದಿನದೊಳಗಾಗಿ ಸಂಪೂರ್ಣ ಮೊತ್ತ ಭರಿಸಿ ಸದರಿ ಹರಾಜಿನ ಸ್ಥಳಗಳನ್ನು ಸ್ವಾಧೀನಕ್ಕೆ ಪಡೆಯತಕ್ಕದ್ದು ತಪ್ಪಿದಲ್ಲಿ ತಮ್ಮ ಹರಾಜನ್ನು ರದ್ದುಗೊಳಿಸಲಾಗುವುದೆಂದು ಈ ಪತ್ರಿಕಾ ಪ್ರಕಟಣೆ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಿದೆ. ಸಂಪರ್ಕಿಸೂವ ದೂರವಾಣಿ ಸಂಖ್ಯೆ 9482542104

**ಸಹಿ/– ಕಾರ್ಯನಿರ್ವಾಹಣಾಧಿಕಾರಿಗಳು,**
**ಶ್ರೀ ಕ್ಷೇತ್ರ ಝರಣಿ ನರಸಿಂಹ ದೇವಸ್ಥಾನ**
**ಬೀದರ**

ವಾ.ಸಾ.ಸಂ.ಇ/ಬೀದರ/365/ಕೆ.ಎಸ್.ಎಂ.ಸಿ.&ಎ/2025–26

# ಅರ್ಥಪೂರ್ಣ ಮಹಿಳಾ ದಿನಾಚರಣೆ



• ಮಲ್ಲಮ್ಮ ನುಡಿವಾರ್ತೆ ಕುಕನೂರು

ತಾಲೂಕಿನ ಚಿಕ್ಕಬಿಡನಾಳ ಗ್ರಾಮದಲ್ಲಿ ಇಕೊ ಫೌಂಡೇಶನ್ ಫಾರ್ ಸಸ್ಟೇನಬಲ್ ಆಲ್ಟರ್ನೇಟಿವ್ಸ್ ಸಂಸ್ಥೆಯವತಿಯಿಂದಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಸೋಮವಾರ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಸಂಸ್ಥೆಯ ನಿರ್ದೇಶಕಿ ಸುಧಾ ಅವರು ಮಾತನಾಡಿ, ಮಹಿಳಾ ದಿನಾಚರಣೆ ಎನ್ನುವುದು ಮಹಿಳೆಯರಿಗೆ ಮಾತ್ರ ಸೀಮಿತವಾದದ್ದಲ್ಲ ಮತ್ತು ಅದು ಪುರುಷರ ವಿರುದ್ಧವೂ ಅಲ್ಲ. ಗಂಡು-ಹೆಣ್ಣು ಸಮಾನವಾಗಿ ಜೊತೆಯಾಗಿ ಸಾಗಿದಾಗ ಮಾತ್ರ ಸಮಾಜದಲ್ಲಿ ಸಮತೋಲನ ಸಾಧ್ಯವಾಗುತ್ತದೆ ಎಂದು ಹೇಳಿದರು. ಹೆಣ್ಣುಮಕ್ಕಳಿಗೆ ಪುರುಷರು ಬೆನ್ನೆಲುಬಾಗಿ ನಿಂತು ಬೆಂಬಲ ನೀಡಿದಾಗ ಅವರು ಇನ್ನಷ್ಟು ಯಶಸ್ಸು ಸಾಧಿಸಲು ಶಕ್ತಿ ದೊರೆಯುತ್ತದೆ ಎಂದು ತಿಳಿಸಿದರು.

ಮಹಿಳಾ ಧ್ವನಿ ಪುರಸ್ಕಾರದ ಅತಿಥಿಯಾಗಿ ಭಾಗವಹಿಸಿದ್ದ ಮಹಿಳಾ ಸೈನಿಕರಾದ ಶ್ರೀಮತಿ ಶಂಕ್ರಮ್ಮ ಶಿವಪ್ಪ ನಂದಾಪೂರ ಮಾತನಾಡಿ, ಕಳೆದ ಐದು ವರ್ಷಗಳಿಂದ ಸೈನಿಕೆಯಾಗಿಯಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಈ ಸಾಧನೆಯ ಹಿಂದೆ ನನ್ನ ತಂದೆ-ತಾಯಿಯ ಶ್ರಮ ಮತ್ತು ಪ್ರೋತ್ಸಾಹವೇ ಪ್ರಮುಖ ಕಾರಣವಾಗಿದೆ. ಇಂತಹ ಗೌರವ ದೊರೆತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ತಮ್ಮ ಅನುಭವ ಹಂಚಿಕೊಂಡರು.

ಹತ್ತನೇ ತರಗತಿ ವಿದ್ಯಾರ್ಥಿನಿ ಸೌಮ್ಯ ಮಾತನಾಡಿ, ವಿದ್ಯಾರ್ಥಿಗಳು ತಮ್ಮಿಗೆ ಅನುಕೂಲವಾದ ಸಮಯದಲ್ಲಿ ಏಕಾಗ್ರತೆಯಿಂದ ಓದುವುದು ಉತ್ತಮ. ಮೊಬೈಲ್ ಬಳಕೆ ಕಡಿಮೆ ಮಾಡಿ ಅಧ್ಯಯನದ ಕಡೆ ಹೆಚ್ಚು ಗಮನ ಹರಿಸಬೇಕು. ಟ್ಯೂಷನ್ ತರಗತಿಗಳು ನಮ್ಮ ಶಿಕ್ಷಣಕ್ಕೆ ಸಹಕಾರಿಯಾಗಿವೆ ಎಂದು ಹೇಳಿದರು.

ಟ್ಯೂಷನ್ ಶಿಕ್ಷಕರಾದ ಹುಸೇನ್ ಮಾತನಾಡಿ, ಮಕ್ಕಳ ಮೇಲೆ ಪೋಷಕರು ನಂಬಿಕೆ ಇಡಬೇಕು. ಇತರ ಮಕ್ಕಳೊಂದಿಗೆ ಹೋಲಿಕೆ ಮಾಡಿ ಮಕ್ಕಳನ್ನು ಹೀಯಾಳಿಸಬಾರದು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮೂವರು ಮಹಿಳೆಯರಿಗೆ "ಮಹಿಳಾ ಧ್ವನಿ ಪುರಸ್ಕಾರ" ಪ್ರದಾನಿಸಲಾಯಿತು. ಪುರಸ್ಕೃತರಾಗಿ ಕುಮಾರಿ ನೇತ್ರಾವತಿ ಎಂ.ಹೆಚ್ (ಮಂಗಳೂರು), ಅಂಗನವಾಡಿ ಕಾರ್ಯಕರ್ತೆ ಮುಮ್ತಾಜ್ ಬೇಗಂ (ರೋಣ) ಹಾಗೂ ಮಹಿಳಾ ಸೈನಿಕರಾದ ಶ್ರೀಮತಿ ಶಂಕ್ರಮ್ಮ ಶಿವಪ್ಪ ನಂದಾಪೂರ ಅವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಬೆದವಟ್ಟಿ ಮಕ್ಕಳಿಂದ ಬಾಲ್ಯವಿವಾಹ ಕುರಿತು ಅಭಿನಯ ಗೀತೆ ಹಾಗೂ 'ಅಕ್ಕ ವಾಸಂತಿ ತಂಗಿ ಬಸಂತಿ' ನಾಟಕ ಪ್ರದರ್ಶನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಸಿಬ್ಬಂದಿಗಳಾದ ಸುನಿತಾ, ಟ್ಯೂಷನ್ ಶಿಕ್ಷಕರಾದ ಶರಣಮ್ಮ, ಮಂಜುಳಾ, ನೇತ್ರಾವತಿ, ನವೀನಕುಮಾರ, ಶಿಲ್ಪಾ, ಮಹೇಶ್ವರಿ, ದುರಗೇಶ್ ಸೇರಿದಂತೆ ಚಿಕ್ಕಬಿಡನಾಳದ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತರು, ಮಾಜಿ ಸದಸ್ಯರು, ಎಸ್‌ಡಿಎಂಸಿ ಸದಸ್ಯರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

# ದಲಿತರಲ್ಲಿ ಎಡಗೈ, ಬಲಗೈ ಎಂದು ಒಡಕು ಮೂಡಿಸುವ ಹುನ್ನಾರ: ಬಿಳಿಕೆರೆ



• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ಆಡಳಿತ ಸರ್ಕಾರ ದಲಿತರಲ್ಲಿ ಎಡಗೈ,ಬಲಗೈ ಎಂದು ಒಡಕು ಮೂಡಿಸುವ ಹುನ್ನಾರ ನಡೆಸುತ್ತಿದೆ. ರಾಜ್ಯದಲ್ಲಿ ಮೀಸಲಾತಿ ಹೆಸರಿನಲ್ಲಿ ದಲಿತರನ್ನು ಹೋಳು ಮಾಡುವ ಹುನ್ನಾರ ಪಟಭದ್ರ ಹಿತಾಸಕ್ತಿಗಳಿಂದ ನಡೆದಿದೆ. ದಲಿತ ಸಮುದಾಯ ಇದನ್ನು ತೀವ್ರವಾಗಿ ಬೇಸರ ವ್ಯಕ್ತಪಡಿಸಿದ್ದಾರೆ ಎಂದು ದಲಿತ ಮುಖಂಡ ಬಿಳಿಕೆರೆ ರಾಜು ತಿಳಿಸಿದ್ದಾರೆ

ನಗರದ ಪತ್ರಕರ್ತರ ಸಂಘದ ಕಚೇರಿಯಲ್ಲಿ ಕರೆಯಲಾಗಿದೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿ

ದಲಿತರನ್ನು ಮೀಸಲಾತಿ ವಿಷಯದಲ್ಲಿ ಇಬ್ಭಾಗ ಮಾಡಲು ಕುತಂತ್ರ ನಡೆಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ರವರು ದಲಿತರ ವೋಟ್ ಗಳನ್ನು 2ಬಾರಿ ಮುಖ್ಯಮಂತ್ರಿಯಾಗಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅಹಿಂದ ವರ್ಗಕ್ಕೆ ಸೇರಿದ್ದರೂ ಸಾಮಾಜಿಕ ನ್ಯಾಯಕ್ಕೆ ಅನ್ಯಾಯ ಮಾಡಿದ್ದಾರೆ.

ಬಲಗೈ ಮತ್ತು ಎಡಗೈ ಸಮುದಾಯಗಳಲ್ಲಿ ಗೊಂದಲ ಸೃಷ್ಟಿಸಲಾಗಿದೆ ಎಲ್ಲರಿಗೂ ನ್ಯಾಯ ಸಿಗಬೇಕು. ಶೇ15ರಲ್ಲಿ ಪ್ರವರ್ಗ (ಎ)ಬಿ ಮತ್ತು ಸಿ ಗಳಿಗೆ ನಿಗದಿಗೊಳಿಸಿರುವ ಪ್ರಮಾಣದಲ್ಲಿ

ನೇಮಕಾತಿ ನಡೆಸಬೇಕು. ಎಂದರು. ಸಮುದಾಯಕ್ಕೆ ಆಗಿರುವ ಅನ್ಯಾಯದ ವಿರುದ್ಧ ಒಗ್ಗಟ್ಟಿನಿಂದ ಹೋರಾಡುವುದು ಅನಿವಾರ್ಯವಾಗಿದೆ ಎಡಗೈ ಸಮುದಾಯ ಮತ್ತು ಬಲಗೈ ಸಮುದಾಯ ಇಬ್ಬರು ಸೌಹಾರ್ದತೆಯಿಂದ ಇದ್ದು ನಮ್ಮನ್ನು ಒಡೆದು ಆಳುವ ನೀತಿ ಅನುಸರಿಸುತ್ತಿರುವ ಸರ್ಕಾರದ ವಿರುದ್ಧ ಕಿಡುಕರಿದರು. ಒಳಮೀಸಲಾತಿ ನಮ್ಮ ಹಕ್ಕುಗಳ ರಕ್ಷಣೆಗೆ ನಡೆಯುತ್ತಿರುವ ಈ ಹೋರಾಟಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಕರೆ ನೀಡಿದರು. ಅವರು ಈ ಹೋರಾಟಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ನಾಗಮೋಹನ್ ದಾಸ್ ವರದಿಯಲ್ಲಿ ಬಲಗೈ ಸಮುದಾಯದ ಹಿತಾಸಕ್ತಿಗಳನ್ನು ಕಡೆಗಣಿಸಿ ಅನ್ಯಾಯ ಮಾಡಲಾಗಿದೆ ಎಂದು ಆರೋಪಿಸಿ, ವರದಿಯನ್ನು ತಿರಸ್ಕರಿಸುವಂತೆ ಆಗ್ರಹಿಸಿ ಮಾರ್ಚ್ 25ರಂದು ಬೆಂಗಳೂರಿನಲ್ಲಿ ನಡೆಯಲಿರುವ ಬೃಹತ್ ಹೋರಾಟಕ್ಕೆ ಹುಣಸೂರು ತಾಲೂಕಿನಿಂದ ಭಾಗವಹಿಸಬೇಕೆಂದು ಮನವಿ ಸಲ್ಲಿಸಿದ್ದಾರೆ

ದಲಿತರ ಅಭಿವೃದ್ಧಿಗೆ ಮೀಸಲಿಟ್ಟ ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆ ಹಣ ಬಳಸಿಕೊಂಡಿದ್ದು ಘೋರ ಅನ್ಯಾಯ ಮಾಡಿದ್ದಾರೆ.

ಮೀಸಲಾತಿ ವಿಚಾರದಲ್ಲಿ ಸಚಿವರಾದ ಮಹದೇವಪ್ಪ ರವರ ಪೋಟೋಗೆ ಅವಮಾನಿಸಿದ್ದಾರೆ ನಾವು ಬೇಸರ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಕೊಳಗಟ್ಟ ಕೃಷ್ಣ, ಶಿವರಾಜು ಆಸ್ವಾಳು, ಸೋಮಶೇಖರ್ ಮಾರನಹಳ್ಳಿ ಅಶೋಕ್‌ದೇವರಾಜ್ ಲೋಕೇಶ್ ಮುಂತಾದವರು ಇದ್ದರು.

# ಪ್ರಾಮಾಣಿಕ ಪ್ರಯತ್ನಕ್ಕೆ ತಕ್ಕ ಫಲ



• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ತಾಲೂಕಿನ ಎಸ್ ಎಸ್ ಎಲ್ ಸಿ ಪರೀಕ್ಷೆ ಬರೆಯುತ್ತಿರುವ ಪ್ರೀತಿಯ ಮುದ್ದು ಮಕ್ಕಳೇ ಪ್ರಾಮಾಣಿಕ ಪ್ರಯತ್ನಕ್ಕೆ ತಕ್ಕ ಫಲ ಯಾವತ್ತೂ ಸಿಕ್ಕೆ ಸಿಗುತ್ತದೆ .

ನಿಮ್ಮ ಪರಿಶ್ರಮಕ್ಕೆ ಖಂಡಿತ ಉತ್ತಮ ಫಲಿತಾಂಶ ಬರಲಿದೆ ಎಂದು ಮಾಜಿ ಶಾಸಕ ಹಾಗೂ ಸ್ನೇಹಜೀವಿ ಎಚ್ ಪಿ ಮಂಜುನಾಥ್ ತಿಳಿಸಿದ್ದಾರೆ

ನಂತರ ಸುದ್ದಿಗಾರರೊಂದಿಗೆ ಮಾತನಾಡಿ ಇಂದಿನಿಂದ ಎಸ್ ಎಸ್ ಎಲ್ ಸಿ ಪರೀಕ್ಷೆ ಪ್ರಾರಂಭಾಗಿರುವ ವಿದ್ಯಾರ್ಥಿಗಳಿಗೆ ಹೃದಯಪೂರ್ವಕವಾಗಿ ಶುಭ ಕೋರಿ

ಈ SSLC ಪರೀಕ್ಷೆಯು ನಿಮ್ಮ ಉಜ್ವಲ ಭವಿಷ್ಯ ನಿರ್ಮಾಣದ ಮೊದಲ ಘಟ್ಟ ದಾಟಿ, ಉನ್ನತ ಶಿಕ್ಷಣದ ರಹದಾರಿ ಪ್ರವೇಶಿಸಿ ಯಶಸ್ಸು ಸಾಧಿಸಿ.

ಸುಂದರ ಬದುಕು ಕಟ್ಟಿಕೊಳ್ಳವ ನಿಮ್ಮ ಪ್ರಯತ್ನ ಸುಗಮವಾಗಿ ನಿಮ್ಮ ಭವಿಷ್ಯ ಯಶಸ್ವಿಯಾಗಲಿ ಎಂದು ನಾನು ಶುಭ ಹಾರೈಸುವೆ ಮೂಲಕ ತಿಳಿಸುತ್ತೇನೆ. ಎಂದರು

# ಅಪಾಯ ಆಹ್ವಾನಿಸುತ್ತಿರುವ ರಸ್ತೆ, ಕುರುಡಾದ ಆಡಳಿತ



• ಮಲ್ಲಮ್ಮ ನುಡಿವಾರ್ತೆ ಕುಕನೂರ

ಪಟ್ಟಣದ ಪ್ರಮುಖ ಸಂಚಾರವಿರುವ ರಸ್ತೆ ಸಂಪೂರ್ಣ ಕಿತ್ತು ಹಾಕಿ ತಿಂಗಳುಗಳೆ ಕಳೆದರೂ ಸಹ ಸ್ಥಳೀಯ ಆಡಳಿತ ಕಣ್ಮುಚ್ಚಿ ಕುಳಿತ ಪರಿಣಾಮ ವಾಹನ ಸವಾರರು ಪರದಾಡುವ ಪರಿಸ್ಥಿತಿ ನಿರ್ಮಾಣಗೊಂಡಿರುತ್ತದೆ.

ಪಟ್ಟಣದ ಸ್ಥಳೀಯ ಆಡಳಿತ ವಾದ ಪಟ್ಟಣ ಪಂಚಾಯ್ತಿ ಕಾರ್ಯಾಲಯದಿಂದ ಕೇವಲ 150 ರಿಂದ 200 ಮೀಟರ್ ಗಳಷ್ಟು ಅಂತರದಲ್ಲಿ ಇರುವ ಹಳೆ ಪಟ್ಟಣ ಪಂಚಾಯತಿ ಕಾರ್ಯಾಲಯ ಮತ್ತು ಪೊಲೀಸ್ ಠಾಣೆ ರಸ್ತೆ ಅಭಿವೃದ್ಧಿಗೆಂದು ಕಿತ್ತು ಹಾಕಿದ್ದು ತಿಂಗಳುಗಳ ಕಳೆದರೂ ಸಹ ಅಧಿಕಾರಿಗಳು ತಮಗೂ ಈ ರಸ್ತೆಗೂ ಸಂಬಂಧವಿಲ್ಲ ಎಂಬ ರೀತಿಯಲ್ಲಿ ಜಾಣ ಕುರುಡುತನ ಪ್ರದರ್ಶಿಸುತ್ತಿದ್ದು ಇದರಿಂದ ವಾಹನ ಸಂಚಾರರು ಮಾತ್ರ ಪರದಾಡುವ ಪರಿಸ್ಥಿತಿ ನಿರ್ಮಾಣಗೊಂಡು ಅಧಿಕಾರಿಗಳ ವಿರುದ್ಧ ಇಡೀ ಶಾಪ ಹಾಕುವ ಪರಿಸ್ಥಿತಿ ನಿರ್ಮಾಣಗೊಂಡಿರುತ್ತದೆ.

ಕುಕನೂರು ಪಟ್ಟಣದ ಪೊಲೀಸ್ ಠಾಣೆಯ ಕಾಂಪೌಂಡ್ ಗೋಡೆಗೆ ಹೊಂದಿಕೊಂಡಿರುವ ಈ ರಸ್ತೆಯ ಸ್ಟೇಷನ್ ಕಾಂಪೌಂಡ್ ಪಕ್ಕದಲ್ಲಿಯೇ ನೀರು ಸರಬರಾಜಿನ ಪೈಪ್ ಲೈನ್ ಒಡೆದು ಹೋಗಿದ್ದು ಇದರಿಂದ ನೀರು ಸಂಪೂರ್ಣವಾಗಿ ರಸ್ತೆಗೆ ಬಂದು ರಸ್ತೆ ಸಂಪೂರ್ಣ ಹದಗೆಟ್ಟಿದ್ದು ಈ ರಸ್ತೆಯಲ್ಲಿ ಪಟ್ಟಣದ ಬಹುತೇಕ ಜನ ಓಡಾಡುವ ಹಾಗೂ ಪಟ್ಟಣದಲ್ಲಿರುವ ಎಲ್ಲಾ ಖಾಸಗಿ ಶಾಲೆಗಳ ಶಾಲಾ ವಾಹನಗಳು ಓಡಾಡುವ ರಸ್ತೆಯಾಗಿದ್ದು ಪೈಪ್ಲೈನ್ ಒಡೆದ ಜಾಗದಲ್ಲಿ ರಸ್ತೆ ಸಂಪೂರ್ಣ ಹದಗೆಟ್ಟಿದ್ದು ವಾಹನ ಸಂಚಲದಲ್ಲಿ ಸ್ವಲ್ಪ ನಿರ್ಲಕ್ಷ ತೋರಿದರು ಸಹ ನೀರಿನ ಗುಂಡಿಯಲ್ಲಿ ವಾಹನದ ಚಕ್ರ ಸಿಲುಕುವ ಸಾಧ್ಯತೆ-ಯೇ ಹೆಚ್ಚಾಗಿರುತ್ತದೆ ಹಾಗೂ ಸಣ್ಣ ಪುಟ್ಟ ತ್ರಿಚಕ್ರ ವಾಹನಗಳು ಈಗಾಗಲೇ ಸಿಲುಕಿಕೊಂಡು ಪರದಾಡಿ ಹೋಗಿರುವ ಎಷ್ಟೋ ಉದಾಹರಣೆಗಳು ಸಹ ಇದು ಇವೆಲ್ಲವೂ ಕಂಡರೂ ಸಹ ಕಾಣದಂತೆ ಜಾಣ ಕುರುಡುತನ ಪ್ರದರ್ಶನ ತೋರುತ್ತಿರುವ ಅಧಿಕಾರಿಗಳಿಗಂತೂ ಸಾರ್ವಜನಿಕರು ಹಿಗ್ಗಾಮುಗ್ಗ ಬೈದಾಡಿಕೊಂಡು ಓಡಾಡುತ್ತಿರುವ ದೃಶ್ಯಗಳು ಸಾಮಾನ್ಯವಾಗಿ ಕಂಡು ಬರುತ್ತಿವೆ.

ವಿಷಕ್ಕೆ ಸಂಬಂಧಿಸಿದಂತೆ ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿ ನಾಗೇಶ್ ವರದಿಗಾರರೊಂದಿಗೆ ಮಾತನಾಡುತ್ತಾ ರಸ್ತೆ ಅಭಿವೃದ್ಧಿಪಡಿಸುವ ಉದ್ದೇಶದಿಂದ ಕಿತ್ತುಹಾಕಿದ್ದು ಕಾಮಗಾರಿ ಸ್ವಲ್ಪ ವಿಳಂಬವಾಗಿದೆ ಅಲ್ಲಿ ಪೈಪ್ ಲೈನ್ ಹೊಡೆದಿದ್ದು ಮಾಹಿತಿ ಇತ್ತೀಚಿಗೆ ಅಷ್ಟೇ ನನಗೆ ಗೊತ್ತಾಗಿದ್ದು ಶೀಘ್ರದಲ್ಲಿ ಆ ಸಮಸ್ಯೆಯನ್ನು ಇತ್ಯರ್ಥಗೊಳಿಸಲು ಸಿಬ್ಬಂದಿಗಳಿಗೆ ಸೂಚನೆ ನೀಡುತ್ತೇನೆ ಮತ್ತು ತುರ್ತಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಒತ್ತಾಯಿಸುತ್ತೇನೆ ಎಂದು ತಿಳಿಸಿದರು.

# ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ವತಿಯಿಂದ ವಾತ್ಸಲ್ಯ ಮನೆ ಹಸ್ತಾಂತರ



• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ಜಿಲ್ಲೆಯ ಹೊಸಪೇಟೆ -2 ತಾಲೂಕಿನ ಹಂಪಿ ವಲಯದ ವೆಂಕಟಾಪುರ ಕ್ಯಾಂಪ್ ನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನ ವಿಕಾಸ ಕಾರ್ಯಕ್ರಮದ ಅಡಿಯಲ್ಲಿ ವಾತ್ಸಲ್ಯ ಫಲನುಭವಿ ಬಸಮ್ಮ ರವರಿಗೆ ಪೂಜ್ಯರು, ಅಮ್ಮನವರು ಮಂಜೂರು ಮಾಡಿದ ವಾತ್ಸಲ್ಯ ಮನೆ ಹಸ್ತಾಂತರ ಕಾರ್ಯಕ್ರಮವನ್ನು ಮಾಡಲಾಯಿತು. ಕೊಪ್ಪಳ ಪ್ರಾದೇಶಿಕ ನಿರ್ದೇಶಕರಾದ ಚಂದ್ರಶೇಖರ ಸರ್ ಅವರು ಹಸ್ತಾಂತರ ಮಾಡಿ ಯೋಜನೆಯಿಂದ ಸಮುದಾಯದ ಅಭಿವೃದ್ಧಿ ಕಾರ್ಯಕ್ರಮ, ವಾತ್ಸಲ್ಯ ಕಾರ್ಯಕ್ರಮ, ಜನ ಮಂಗಳ ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಿದರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಜನಜಾಗ್ರತಿ ವೇದಿಕೆ ಸದಸ್ಯರಾದ ಪ್ರಕಾಶ್ ಸರ್, ಪೂಜಾ ಐಲಿ, ಜಿಲ್ಲಾ ನಿರ್ದೇಶಕರಾದ ಸತೀಶ ಶೆಟ್ಟಿ ಸರ್, ಊರಿನ ಗಣ್ಯರಾದ ದೇವಪ್ಪ ಸರ್, ತಾಲೂಕಿನ ಯೋಜನಾಧಿಕಾರಿಗಳಾದ ರಾಘವೇಂದ್ರ ಸರ್, ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಒಕ್ಕೂಟಗಳ ಅಧ್ಯಕ್ಷರು ಗಳಾದ ರಾಮಾದೇವಿ, ಸರೋಜ ರವರು ಭಾಗವಹಿಸಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮೇಲ್ವಿಚಾರಕರು ನಾಗರಾಜ್, ರಿತಇ ಸಮನ್ವಯಾಧಿಕಾರಿ ಕವಿತಾ, ಸೇವಾಪ್ರತಿನಿಧಿ ಶಶಿಕಲಾ, ಸಂಘದ ಸದಸ್ಯರು, ಊರಿನ ನಾಗರೀಕರು ಉಪಸ್ಥಿತರಿದ್ದರು.

ಯೋಜನೆಯಿಂದ ರಚನೆಯಾಗಿರುವ ವಾತ್ಸಲ್ಯ ಮನೆ ವೀಕ್ಷಣೆ ಮಾಡಿ ಊರಿನ ಸಮಸ್ತ ಬಂದುಗಳು ಪೂಜ್ಯರಿಗೆ ಮತ್ತು ಅಮ್ಮನವರಿಗೆ ಹಾಗೂ ಯೋಜನೆಯ ಅಧಿಕಾರಿ ವರ್ಗದವರಿಗೆ ಊರಿನ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಿದರು.

# ಯುಗಾದಿ ಪಂಚಾಂಗ ಪಠಣ




• ಮಲಮ್ಮ ನುಡಿ ವಾರ್ತೆ ಹುಣಸಗಿ

ತಾಲೂಕಿನ ಕೊಡೇಕಲ ಗ್ರಾಮದಲ್ಲಿ ಗುರುವಾರ ಯುಗಾದಿ ಹಬ್ಬದ ಅಂಗವಾಗಿ ತಾಲೂಕಿನ ಕಾಲಜ್ಞಾನಿ ಕೊಡೇಕಲ್ ಸುಕ್ಷೇತ್ರದಲ್ಲಿ ಈ ವರ್ಷದ ಮೊದಲ ಪಂಚಾಂಗ ಪಠಣ ಭಕ್ತಿಭಾವದಿಂದ ನೆರವೇರಿತು.

ಸರ್ವಧರ್ಮ ಸಮನ್ವಯವನ್ನು ಸಾರಿದ ಶ್ರೀ ಬಸವಣ್ಣನವರ ತತ್ವದಂತೆ, ವಿವಿಧ

ಜಾತಿ-ಜನಾಂಗದವರು ಹಾಗೂ ರಾಜಮನೆತನದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು.

ಪಂಚಾಂಗದ ಪ್ರಕಾರ, ಈ ವರ್ಷ ಸಮರ್ಪಕ ಮಳೆಯಾಗುವ ಸಾಧ್ಯತೆ ಇದ್ದು, ನದಿಗಳು ತುಂಬಿ ಹರಿಯಲಿವೆ ಹಾಗೂ ಕೃಷಿ ಬೆಳೆಗಳು ಉತ್ತಮವಾಗಿ ಬೆಳೆಯಲಿವೆ ಎಂದು ತಿಳಿಸಲಾಯಿತು. ಜನರು ಆರೋಗ್ಯದಿಂದಿರಲಿದ್ದು, ಧಾನ್ಯ ಉತ್ಪಾದನೆ ಸಾಕಷ್ಟು ಇರುವ ನಿರೀಕ್ಷೆಯಿದೆ.

ಇದೇ ವೇಳೆ ಭತ್ತ, ಎಣ್ಣೆ, ಬೆಣ್ಣೆ, ತುಪ್ಪ ಸೇರಿದಂತೆ ಕೆಲವು ಅಗತ್ಯ ವಸ್ತುಗಳ ಬೆಲೆಯಲ್ಲಿ ಏರಿಕೆ ಸಂಭವಿಸಬಹುದು ಎಂದು ತಿಳಿಸಲಾಯಿತು. ಜೊತೆಗೆ ಎಳ್ಳು, ಉದ್ದು, ಸಾಸಿವೆ ಬೆಳೆಗಳು ಹೆಚ್ಚು ಪ್ರಮಾಣದಲ್ಲಿ ಬೆಳೆಯುವ ಸಾಧ್ಯತೆ ಇದೆ.

ಮುಂದಿನ ತಿಂಗಳ 14ರಂದು ಅಶ್ವಿನಿ ಮಳೆಯಾಗುವ ಸಾಧ್ಯತೆ ಇದ್ದು, ಈ ವರ್ಷ ಒಟ್ಟು ಮಳೆಯ ಪ್ರಮಾಣ ಉತ್ತಮವಾಗಿರಲಿದೆ ಎಂದು ಹೇಳಲಾಗಿದೆ.

ಈ ಸಂದರ್ಭದಲ್ಲಿ ಪೀಠಾಧಿಪತಿಗಳಾದ ವೃಷಭೇಂದ್ರ ಅಪ್ಪನವರು, ರಾಜಾ ಜಿತೇಂದ್ರ ನಾಯಕ, ರಾಜಾ ವೆಂಕಟಪ್ಪ ನಾಯಕ, ಕಾರ್ತಿಕ ನಾಯಕ,

ಶಾಮ್ ಸುಂದರ ಜೋಶಿ ಸೇರಿದಂತೆ ಮೀರಸ್ತೇದಾರರು, ಗುರುವರ್ಗ ಹಾಗೂ ಭಕ್ತರು ಉಪಸ್ಥಿತರಿದ್ದರು.

ಯುಗಾದಿ ಪ್ರಯುಕ್ತ ನಡೆದ ಈ ಪಂಚಾಂಗ ಪಠಣ ಕಾರ್ಯಕ್ರಮ ಭಕ್ತರಲ್ಲಿ ಹೊಸ ವರ್ಷದ ಆಶಾಭಾವನೆ ಮೂಡಿಸಿತು.

# ವಿಶ್ವಕರ್ಮರಿಂದ ಯುಗಾದಿ ಹಬ್ಬ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಪಟ್ಟಣದ ಕಿಲ್ಲದಲ್ಲಿರುವ ಐತಿಹಾಸಿಕ ಶ್ರೀ ಕಾಳಿಕಾ ದೇವಿ ದೇವಸ್ಥಾನದಲ್ಲಿ ಗುರುವಾರ ವಿಶ್ವಕರ್ಮ ಕುಲಬಾಂಧವರು ಧಾರ್ಮಿಕ ಶ್ರದ್ಧೆಯಿಂದ ಆಚರಣೆ ಮಾಡಿದರು.

ಪರಾಭವ ನಾಮ ಸಂವತ್ಸರ ಚೈತ್ರಮಾಸದ ಪ್ರಥಮ ಪಾಡ್ಯಮಿ ದಿನದಂದು ವಿಶ್ವಕರ್ಮರ ಆರಾಧ್ಯ ದೇವಿ ಶ್ರೀ ಕಾಳಿಕಾ ಮಾತೆಗೆ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಅಮ್ಮನವರಿಗೆ ವಿವಿಧ ಪುಷ್ಪಾಗಳಿಂದ ಅಲಂಕಾರ ಮಾಡಲಾಗಿತ್ತು. ದೇವಿಗೆ ಕ್ಷೀರಾಭಿಷೇಕ, ಪಂಚಮೃತ, ಉಡಿ ತುಂಬುವದು ಸೇರಿದಂತೆ ವಿವಿಧ ಧಾರ್ಮಿಕಚರಣೆಗಳು ಜರುಗಿದವು. ವಿವಿಧ ಬಡಾವಣೆಯ ವಿಶ್ವಕರ್ಮ ಸಮುದಾಯದ ಪ್ರತಿ ಮನೆಯವರು ಯುಗಾದಿ ಹಬ್ಬದಂದು ಬೆಳ್ಳಂಬೆಳಗ್ಗೆ ಅಭ್ಯಂಗ ಸ್ನಾನ ಮಾಡಿ. ಹೊಸ ಉಡುಗೆಗಳನ್ನು ತೊಟ್ಟು, ಹೊಸ ಗೋದಿ ಸಮರ್ಪಣೆ ಮಾಡಿ ಯುಗಾದಿ ಹಬ್ಬ ಆಚರಣೆ ಮಾಡಿದರು. ಪ್ರತಿ ಮನೆಯಲ್ಲೂ ತಳಿರು ತೋರಣ ಹಾಗೂ ವಿವಿಧ ಪುಷ್ಪಗಳಿಂದ ಸಿಂಗಾರ ಮಾಡಿ, ಆರಾಧ್ಯ ದೇವಿ ಕಾಳಿಕಾ ದೇವಿಗೆ ಬೇವು ಮತ್ತು ಬೆಲ್ಲ ನೈವೇದ್ಯ ಸಮರ್ಪಿಸಿದರು. ವಿಶ್ವಕರ್ಮರೆಲ್ಲರೂ ಕುಲದೇವತೆ ಶ್ರೀ ಕಾಳಿಕಾದೇವಿ ಗೋಧಿ ನಿಧಿ ಅರ್ಪಿಸಿದರು. ಪೌರಾಣಿಕ ಹಾಗೂ ಐತಿಹಾಸಿಕ ಮಹತ್ವ ಹೊಂದಿರುವ ಶ್ರೀ ಕಾಳಿಕಾ ದೇವಿ ದೇವಸ್ಥಾನದಲ್ಲಿ ಯುಗಾದಿ ಹಬ್ಬದ ಸಂಭ್ರಮ ಹಾಗೂ ಶಕ್ತಿಮಾತೆ ಕಾಳಿಕಾದೇವಿಯ ವಿಶೇಷ ಪೂಜಾ ಕೈಂಕರ್ಯಗಳ ಸಡಗರ ವಿಶ್ವಕರ್ಮರಲ್ಲಿ ಮನೆ ಮಾಡಿತ್ತು.

ಬೇವು ಬೆಲ್ಲದಂತೆ ನೋವು-ನಲಿವುಇ ಬೆರೆಯಲಿ, ಸುಖ, ಶಾಂತಿ, ಸಂತೋಷ ತುಂಬಿದ ಬದುಕು ನಿಮ್ಮದಾಗಲಿ

ಎಂದು ಪರಸ್ಪರ ಒಬ್ಬರಿಗೊಬ್ಬರು ಹೊಸ ವರ್ಷದ ಶುಭಾಶಯಗಳು ಹಂಚಿಕೊಂಡರು. ದೇವಾಲಯದಲ್ಲಿ ಭಕ್ತಾದಿಗಳಿಗೆ ಬೇವು ಬೆಲ್ಲ ಹಾಗೂ ಅನ್ನ ಸಂತರ್ಪಣೆ ವ್ಯವಸ್ಥೆ ಕಲ್ಪಿಸಲಾಗಿತ್ತು.

ಚನ್ನಕೇಶವ ಪುರೋಹಿತ, ವೆಂಕಣ್ಣ ಪತ್ತಾರ, ವಿರೂಪಾಕ್ಷಪ್ಪ ಪತ್ತಾರ ಕನಸಾವಿ, ಮಾನಪ್ಪ ಪತ್ತಾರ, ಸೂಗಪ್ಪ ಪತ್ತಾರ, ಶ್ರೀಧರ ಪತ್ತಾರ ಮಾಕಾಪುರ, ನೀಲಪ್ಪ ಕಮ್ಮಾರ, ಕಾಳಪ್ಪ ಬಡಿಗೇರ, ಕೃಷ್ಣ ಪತ್ತಾರ, ಸುರೇಶ ಕೆ.ವಿ, ಕಾಂತಕುಮಾರ ಪತ್ತಾರ, ಮೌನೇಶ ಕನ್ನಾಳ, ದೇವೇಂದ್ರಪ್ಪ ಬಡಿಗೇರ, ಶ್ರೀಧರ ಬಡಿಗೇರ, ಗಂಗಾಧರ, ದೇವರಾಜ, ರೇಣುಕಾ, ಗಂಗಮ್ಮ, ಸಹನಾ, ನಿವೇದಿತಾ, ಪ್ರಿಯಾ, ಕಾವೇರಿ, ಶ್ರುತಿ, ಛಾಯಾಮ್ಮ, ಸಿಂಧು ಸೇರಿದಂತೆ ಇತರರಿದ್ದರು.

# ಟಿವಿ ಮೊಬೈಲ್‌ನಿಂದ ಮಕ್ಕಳನ್ನು ದೂರವಿಡಿ: ಸೂರ್ಯಕಾಂತ ದಂಡಿ ಸಲಹೆ

ಮಲ್ಲಮ್ಮ ನುಡಿ ವಾರ್ತೆ

ಬೀದರ:- ಇತ್ತೀಚಿನ ದಿನಗಳಲ್ಲಿ ಶಾಲಾ ಮಕ್ಕಳು ಟಿವಿ ಮತ್ತು ಮೊಬೈಲ್‌ಗಳಿಗೆ ಅತಿಯಾಗಿ ಆಕರ್ಷಿತರಾಗಿ, ಅವುಗಳಿಂದ ದೂರವಾಗಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿರುವುದು ಕಳವಳಕಾರಿ ವಿಷಯವಾಗಿದೆ ಎಂದು ಸೂರ್ಯಕಾಂತ ದಂಡಿ ಅಭಿಪ್ರಾಯ ವ್ಯಕ್ತಪಡಿಸಿದರು.

ಬೀದರ ತಾಲೂಕಿನ ಕಾಡವಾದ ಗ್ರಾಮದಲ್ಲಿ ಮಾರುತಿ ಮಾಸ್ಟರ್ ಶಿಕ್ಷಣ ಸಂಸ್ಥೆಯ ವತಿಯಿಂದ ನಡೆಸಲಾಗುತ್ತಿರುವ ವಿದ್ಯಾಪೂರ್ವ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ-ಯಾಗಿ ಭಾಗವಹಿಸಿ ಅವರು ಮಾತನಾಡಿದರು. ಇಂದಿನ ಕಾಲದಲ್ಲಿ ಮಕ್ಕಳಲ್ಲಿ ಓದುವ ಅಭಿರುಚಿ ಕಡಿಮೆಯಾಗುತ್ತಿದ್ದು, ಹೆಚ್ಚಿನ ಸಮಯವನ್ನು ಟಿವಿ ಮತ್ತು ಮೊಬೈಲ್‌ಗಳಲ್ಲಿ ಕಳೆಯುತ್ತಿರುವುದರಿಂದ ಅವರ ಮನೋವಿಕಾಸ ಮತ್ತು ಶೈಕ್ಷಣಿಕ ಪ್ರಗತಿಗೆ ಹಾನಿಯಾಗುತ್ತಿದೆ ಎಂದು ಹೇಳಿದರು.

ಮಕ್ಕಳು ಟಿವಿ ಮತ್ತು ಮೊಬೈಲ್‌ಗಳ ದಾಸರಾಗುತ್ತಿರುವುದರಿಂದ, ಪಾಲಕರು ಹಾಗೂ ಶಿಕ್ಷಕರು ಈ ಕುರಿತು ಹೆಚ್ಚಿನ



ಜಾಗೃತಿ ವಹಿಸಬೇಕು. ಸರ್ಕಾರವು 16 ವರ್ಷದೊಳಗಿನ ಮಕ್ಕಳಿಗೆ ಮೊಬೈಲ್ ಬಳಕೆಗೆ ನಿರ್ಬಂಧ ವಿಧಿಸಿರುವ ವಿಷಯವನ್ನು ಎಲ್ಲರೂ ಅರಿತು, ಅದರ ಅನುಷ್ಠಾನಕ್ಕೆ ಸಹಕರಿಸಬೇಕು ಎಂದು ಅವರು ತಿಳಿಸಿದರು.

ಕಾರ್ಯಕ್ರಮವನ್ನು ಬಗದಲ ಪೊಲೀಸ್ ಠಾಣೆಯ ಎಎಸ್‌ಐ ಸುನೀಲಕುಮಾರ ಕೋರೆ ಉದ್ಘಾಟಿಸಿದರು. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮಾರುತಿ ಮಾಸ್ಟರ್ ಪ್ರಸ್ತಾವಿಕವಾಗಿ ಮಾತನಾಡಿ, ಶಾಲೆಯ ಬೆಳವಣಿಗೆ ಹಾಗೂ ವಿದ್ಯಾರ್ಥಿಗಳ ಸಾಧನೆಗಳ ಕುರಿತು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಲಕ್ಷ್ಮೀ ಮಾಸ್ಟರ್ ವಹಿಸಿಕೊಂಡರು. ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ಘಾಳೆಪ್ಪಾ ಗುಂಜಾಟಿ, ಫಾಯುಂ ಪಟೇಲ್, ಮಲ್ಲು ಬರೂರ್, ಶರಣಪ್ಪ ಖಾಸೆಪೂರ್, ಸನ್ಮುಖ ವಾಲಿಕರ, ರವೀಂದ್ರ ಜಾದವ, ವಿದ್ಯಾಸಾಗರ ಧಡೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಶಿಕ್ಷಕಿ ಸಂಗೀತಾ ಸ್ವಾಗತ ಕೋರಿದರು. ಶಿಕ್ಷಕಿ ಶ್ರೀದೇವಿ ವಂದಿಸಿದರು. ಬಳಿಕ ಶಾಲಾ ಮಕ್ಕಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಲಾಯಿತು, ಇದಕ್ಕೆ ಪೋಷಕರು ಹಾಗೂ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯರು, ಪೋಷಕರು, ಮಹಿಳೆಯರು ಹಾಗೂ ಸ್ಥಳೀಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಸಮಾಜದ ಜೊತೆಗೆ ಬೆರೆತು ಬದುಕು ರೂಪಿಸಿಕೊಳ್ಳಿ: ಮಹಾಂತೇಶ ದರಗದ



• **ಮಲ್ಲಮ್ಮ ನುಡಿವಾರ್ತೆ ಕೊಪ್ಪಳ**

ಸಮಾಜದಲ್ಲಿ ಶೋಷಣೆಗೆ ಒಳಗಾದ ಮಾಜಿ ದೇವದಾಸಿ ಮಹಿಳೆಯರು ಮತ್ತು ಲಿಂಗತ್ವ ಅಲ್ಪ ಸಂಖ್ಯಾತರು ಸರ್ಕಾರದ ಯೋಜನೆ ಮತ್ತು ಸೌಲಭ್ಯಗಳನ್ನು ಸದುಪಯೋಗ ಪಡೆದುಕೊಂಡು ಸಮಾಜದೊಂದಿಗೆ ಬೆರೆತು ಬದುಕು ರೂಪಿಸಿಕೊಳ್ಳಿ ಎಂದು ಹಿರಿಯ ಸಿವಿಲ್ ನ್ಯಾಯಾದೀಶರಾದ ಮಹಾಂತೇಶ್ ದರಗದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನಗರದ ಪಾನಘಂಟಿ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಬೆಂಗಳೂರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ದೇವದಾಸಿ ಪುನರ್ವಸತಿ ಯೋಜನೆ, ವೈದ್ಯಕೀಯ ವಿಜ್ಞಾನ ಸಂಸ್ಥೆ, ಪಾನಘಂಟಿ ಫೌಂಡೇಶನ್, ಮಹಿಳಾ ಧ್ವನಿ ಸಂಸ್ಥೆ, ಇನ್ನರ್ ವ್ಹೀಲ್ ಕ್ಲಬ್, ಹೊಂಗಿರಣ ಸಂಸ್ಥೆ ಕೊಪ್ಪಳ ಇವರುಗಳ ಸಂಯುಕ್ತ ಆಶ್ರಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮಾಜಿ ದೇವದಾಸಿ ಮಹಿಳೆಯರು ಮತ್ತು ಲಿಂಗತ್ವ ಅಲ್ಪ ಸಂಖ್ಯಾತರಿಗೆ ಜಿಲ್ಲಾ ಮಟ್ಟದ ಆರೋಗ್ಯ ತಪಾಸಣೆ ಮತ್ತು ಕಾನೂನು ಅರಿವು ಕಾರ್ಯಕ್ರಮ ಹಾಗೂ ವಿವಿಧ ಆಟೋಟಗಳ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಮಹಿಳೆಯರ ಮೇಲೆ ಇತ್ತಿಚಿನ ದಿನಗಳಲ್ಲಿ ಅಹಿತಕರ ಘಟನೆಗಳಂತಹ ಪ್ರಕರಣಗಳು ಹೆಚ್ಚಾಗುತ್ತಿದ್ದು, ಸ್ವಯಂ ರಕ್ಷಣೆ ಮತ್ತು ಕಾನೂನಿನ ನೆರವು ಪಡೆದು ಸ್ವಾವಲಂಬಿ ಬದುಕಿನತ್ತ ಹೊಸಮುಖ ಮಾಡಿ ಎಂದು ಜಾಗೃತಿ ಬಿತ್ತಿ ಚಿತ್ರಗಳನ್ನು ಬಿಡುಗಡೆಗೊಳಿಸಿ ಕಾರ್ಯಕ್ರಮ ಕುರಿತು ಮಾತನಾಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಪರಶುರಾಮ ಶೆಟ್ಟೆಪ್ಪನವರ ಮಾತನಾಡಿ ಮಹಿಳೆಯರ ಕಲ್ಯಾಣಕ್ಕಾಗಿ ಇಲಾಖೆಯು ಸಾಕಷ್ಟು ಯೋಜನೆಗಳನ್ನು ರೂಪಿಸಿದ್ದು ಅವುಗಳ ಸದುಪಯೋಗ ಪಡೆದುಕೊಳ್ಳಿ, ಎಲ್ಲರೂ ವಿವಿಧ ಆಟೋಟಗಳಲ್ಲಿ ಭಾಗವಹಿಸಿ

ಪ್ರತಿಭೆಗೆ ಸೂಕ್ತ ವೇದಿಕೆ ಕಲ್ಪಿಸಲಾಗಿದೆ ಎಂದು ಮಾತನಾಡಿದರು.

ಇದೇ ವೇಳೆ ಮಾಜಿ ದೇವದಾಸಿ ಮಹಿಳೆಯರು ಮತ್ತು ಲಿಂಗತ್ವ ಅಲ್ಪ ಸಂಖ್ಯಾತರಿಗೆ ಜಿಲ್ಲಾ ಮಟ್ಟದ ಆರೋಗ್ಯ ತಪಾಸಣೆ ಮತ್ತು ಕಾನೂನು ಅರಿವು ಕಾರ್ಯಕ್ರಮ ಹಾಗೂ ವಿವಿಧ ಆಟೋಟಗಳ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಯೋಜನಾಧಿಕಾರಿಗಳಾದ ಪೂರ್ಣಿಮಾ ಯೋಳಭಾವಿ, ಸಮಾಜಸೇವಕರಾದ ಶಾರದಾ ಪಾನಘಂಟಿ, ಮಹಿಳಾ ಧ್ವನಿ ಸಂಸ್ಥಾಪಕಿ ಪ್ರಿಯದರ್ಶಿನಿ ಮುಂಡರಗಿಮಠ, ರಮಾ, ವೈದ್ಯರಾದ ಕೈಲಾಸ್, ಡಾ. ಕವಿತಾ, ಲ್ಯಾಬ್ ಟೆಕ್ನಿಷಿಯನ್ ಸಂತೋಷ, ಹಿರಿಯ ಸಹಾಯಕರು ಉತ್ತಮ್ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು, ಕಾರ್ಯಕರ್ತರು, ಸಿಬ್ಬಂದಿ ವರ್ಗ ಉಪಸ್ಥಿತಿ ಇದ್ದರು.

# ಕಾರ್ಖಾನೆ ಸ್ಥಾಪಿಸದ ಎಲ್ಲಾ ಭೂಮಿ ರೈತರಿಗೆ ಮರಳಿಸಬೇಕು: ಗೊಂಡಬಾಳ

• **ಮಲ್ಲಮ್ಮ ನುಡಿವಾರ್ತೆ ಕೊಪ್ಪಳ**

ನಗರಸಭೆ ಆವರಣದಲ್ಲಿ ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಇದರ ಜಂಟಿ ಕ್ರಿಯಾ ವೇದಿಕೆಯಿಂದ ಬಲ್ಡೋಟ ಹಟಾವೋ, 20 ಕಾರ್ಖಾನೆ ಬಾಧಿತ ಹಳ್ಳಿಯ 50 ಸಾವಿರ ಜನರ ಜೀವ, ಆರೋಗ್ಯ ಉಳಿಸಿ, ಬಸಾಪುರ ಕೆರೆ ಸಾರ್ವಜನಿಕರಿಗೆ ಮುಕ್ತಗೊಳಿಸಿ, ತುಂಗಭದ್ರಾ ನದಿ ನೀರು ವಿಷಗೊಳಿಸಿದ ಕಾರ್ಖಾನೆಗಳನ್ನು ಮುಚ್ಚಲು ಆಗ್ರಹಿಸಿ ನಡೆದ 141ನೇ ದಿನದ ಧರಣಿ ಪೂರ್ಣಗೊಳಿಸಿತು.

ಧರಣಿ ನೇತೃತ್ವವಹಿಸಿ ಮಾತನಾಡಿದ ಜಂಟಿ ಕ್ರಿಯಾ ವೇದಿಕೆ ಸಂಚಾಲಕರಾದ ಮಂಜುನಾಥ ಜಿ. ಗೊಂಡಬಾಳ, ಕಳೆದ ಎರಡು ದಶಕಗಳಲ್ಲಿ ತುಂಗಭದ್ರಾ ತಟದ ಫಲವತ್ತಾದ ಸಾವಿರಾರು ಎಕರೆ ಭೂಮಿಯನ್ನು ಕೈಗಾರಿಕೆಗಳ ಹೆಸರಿನಲ್ಲಿ ಮುಗ್ಧ ಗ್ರಾಮೀಣ ರೈತರಿಂದ ಆಮಿಷ ಒಡ್ಡಿ ಕಾರ್ಖಾನೆಗಳ ಹೆಸರಿನಲ್ಲಿ ಕಿತ್ತುಕೊಂಡರು. ಇದು ಅತ್ಯಂತ ಆಯಾಕಟ್ಟಿನ ಜಾಗವೆಂದು ಗೊತ್ತಾಗಿ, ಹೆದ್ದಾರಿ, ರೈಲ್ವೆ, ವಿದ್ಯುತ್, ಮುಖ್ಯವಾಗಿ ಜಲಾಶಯದ ನೀರಿನ ಮೇಲೆ ಕಣ್ಣಿಟ್ಟು ಅಗತ್ಯಕ್ಕಿಂತ ಹೆಚ್ಚು ಭೂಮಿಯನ್ನು ಕಿತ್ತುಕೊಂಡ ಕಾರ್ಖಾನೆಗಳು ರೀಯಲ್ ಎಸ್ಟೇಟ್ ಮಾಡಿ, ಭೂ ಮಾಫೀಯಾ ನಡೆಸಿದವು. ಮಧ್ಯವರ್ತಿಗಳ ಮೂಲಕ ಭೂಮಿ ಖರೀದಿ ಮಾಡಿ ಭೂ ಬಾಧಿತ ರೈತ ಕುಟುಂಬಗಳಿಗೆ ಉದ್ಯೋಗ ಕೊಡುವಲ್ಲಿ ವಂಚನೆ ಮಾಡಿವೆ. ಅಗ್ಗದ ದರದಲ್ಲಿ ಭೂಮಿ ಕಬಳಿಸಿ ಇತ್ತ ಕೃಷಿ ಇಲ್ಲ, ಅತ್ತ ಉದ್ಯೋಗವಿಲ್ಲ. ಬಸಾಪುರದ ಸ್ಕ್ಯಾನ್ ಇಸ್ಪಾತ್ ಒಳಗೊಂಡು ಎಕ್ಸಿಂಡಿಯಾ 1800 ಎಕರೆ ಹೆಚ್ಚುವರಿ ಭೂಮಿ ಸೇರಿ ಎಲ್ಲಾ ಇಲ್ಲಿನ ಕಾರ್ಖಾನೆಗಳು ಪಡೆದಿರುವ ಹೆಚ್ಚುವರಿ ಭೂಮಿಯನ್ನು ಕೂಡಲೇ ಆಯಾ ರೈತರಿಗೆ ವಾಪಸ್ ಕೊಡಬೇಕು. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ರೈತರ ಬೆಂಬಲಕ್ಕೆ ಬರಬೇಕೆಂದರು. ಇದೂವರೆಗೆ ಇಲ್ಲಿನ ಕಾರ್ಖಾನೆಗಳು ಮಾಡಿರುವ ಕೃಷಿ ನಾಶಕ್ಕೆ ಅಷ್ಟು ವರ್ಷಗಳ ಪರಿಹಾರ ಕೊಡಬೇಕು. ರೈತರು ಒಂದಾದರೆ ಎಲ್ಲರೂ ಶ್ರೀಮಂತರಾಗುತ್ತೀರಿ, ಆ ಕಾರ್ಖಾನೆಗಳು ಕೊಡುವ ಅತ್ಯಂತ ಕಡಿಮೆ ಸಂಬಳದ ಕೆಲಸ ಯಾವುದಕ್ಕೂ ಬರುವದಿಲ್ಲ, ಅದರ ಬದಲಾಗಿ ಭೂಮಿ ಸಿಕ್ಕರೆ ಇವಥತಿನ ಮಾರುಕಟ್ಟೆ ಬೆಲೆ ಕೋಟ್ಯಾಂತರ ರುಪಾಯಿ ಆಗುತ್ತದೆ ಎಂದರು.

ವೇದಿಕೆಯ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ, ರವಿವಾರ ಹುಬ್ಬಳ್ಳಿಯಿಂದ ಕೊಪ್ಪಳ ಮಾರ್ಗವಾಗಿ ರಾತ್ರಿ 8 ಗಂಟೆಗೆ ವಿಶೇಷ ರೈಲು ಓಡುತ್ತಿದೆ. ಈ ರೈಲಿನಲ್ಲಿ ವಿಧಾನಸೌಧ ಚಲೋ ಹೋರಾಟಕ್ಕೆ ಬರುವವರು 8 ಗಂಟೆಗೆ ಮುಂಚೆ ಕೊಪ್ಪಳ ರೈಲ್ವೆ ನಿಲ್ದಾಣಕ್ಕೆ ಬರಬೇಕು. ಕೊಲ್ಲಿ ಯುದ್ಧದ ಕಾರಣ ಇಂಧನ ಕೊರತೆ-ಯಾಗಿ, ಗ್ಯಾಸ್ ಸಿಲಿಂಡರ್ ಪೂರೈಕೆ ಇಲ್ಲದ್ದರಿಂದ ಬೆಂಗಳೂರು ಕೆಲವು ಹೊಟೇಲ್ ಗಳು ಬಂದ್




ಆಗಿವೆ. ಹೋರಾಟಕ್ಕೆ ಬರುವವರು ರೊಟ್ಟಿ ಬುತ್ತಿ ಕಟ್ಟಿಕೊಂಡು ಸತ್ಯಾಗ್ರಹಕ್ಕೆ ಬನ್ನಿ ಎಂದರು.

ಧರಣಿಯಲ್ಲಿ ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ, ನಿವೃತ್ತ ಪ್ರಾಚಾರ್ಯರಾದ ಎಸ್.ಬಿ. ರಾಜೂರು, ಬಿ.ಜಿ. ಕರಿಗಾರ, ಡಾ. ಬಸವರಾಜ ಪೂಜಾರ, ನಿವೃತ್ತ ನ್ಯಾಯಾಂಗ ಅಧಿಕಾರಿ ಜಿ.ಬಿ.ಪಾಟೀಲ್, ನಿವೃತ್ತ ಉಪನ್ಯಾಸಕ ಶಂಭುಲಿಂಗಪ್ಪ ಹರಗೇರಿ, ಶರಣು ಶೆಟ್ಟರ್, ನಟರಾಜ ಸವಡಿ, ಡಿ. ಎಂ. ಬಡಿಗೇರ, ಚನ್ನವೀರಯ್ಯ ಹಿರೇಮಠ, ಯಮನೂರಪ್ಪ ಹಾಳಕೇರಿ, ಹುಲಗೇಶ ಭೋವಿ, ಭೀಮಪ್ಪ ಯಲಬುರ್ಗಿ, ಮಲ್ಲಪ್ಪ ಮಾದಿನೂರ,

ರಾಜಶೇಖರ ಏಳುಬಾವಿ, ಮಹಾದೇವಪ್ಪ ಮಾವಿನಮಡು, ಮಖ್ಬುಲ್ ರಾಯಚೂರು, ವಿಜಯಮಹಾಂತೇಶ ಹಟ್ಟಿ, ರೇವಣಸಿದ್ದಯ್ಯ ಚಿತ್ರಗಾರ, ನಾಗರಾಜ ಕುಷ್ಟಗಿ, ವಿನಯ್ ಸಜ್ಜನ್, ಶಿವಾನಂದಯ್ಯ ಬೀಳಗಿಮಠ, ಶಿವಪ್ಪ ಜಲ್ಲಿ, ಸುಭಾನಸಾಬ್ ನೀರಲಗಿ, ಗಂಗಾಧರ ಕಾನಾಪೂರ, ವೈ.ಸತ್ಯನಾರಾಯಣ, ಪಂಪಣ್ಣ ಚಿಂತಪಲ್ಲಿ, ಇತರರು ಪಾಲ್ಗೊಂಡಿದ್ದರು.

# ಕಡಲೆ ಖರೀದಿ ಕೇಂದ್ರ ಪ್ರಾರಂಭ



• **ಮಲ್ಲಮ್ಮ ನುಡಿವಾರ್ತೆ ಕುಕನೂರ**

ತಾಲೂಕಿನ ಮಂಗಳೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ಕರ್ನಾಟಕ ಸಹಕಾರ ಮಾರಾಟ ಮಹಾಮಂಡಳ ಇವರ ಸಹಯೋಗದಲ್ಲಿ ಕಡಲೆ ಖರೀದಿ ಕೇಂದ್ರ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಪ್ರಾರಂಭ ಮಾಡಲಾಯಿತು.

ವಿಶ್ವನಾಥ ಮರಿಬಸಪ್ಪನವರ ಮಾಜಿ ತಾಲೂಕು ಪಂಚಾಯತ ಉಪಾಧ್ಯಕ್ಷರು ಮಾತನಾಡಿ ರೈತರಿಗೆ ಅನುಕೂಲವಾಗಲು ಬೆಂಬಲ ಬೆಲೆಯಲ್ಲಿ ಕಡಲೆ ಖರೀದಿ ಕೇಂದ್ರ ಆರಂಭವಾಗಿದೆ ಇದರ ಸದುಪಯೋಗವನ್ನು ರೈತರು ಪಡೆದುಕೊಳ್ಳಬೇಕು ಎಂದು ಹೇಳಿದರು. ನಮ್ಮ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಶೇರು ಅಭಿಯಾನ, ಉಚಿತ ಆರೋಗ್ಯ ತಪಾಸಣಾ ಶಿಬಿರ ಇನ್ನು ಅನೇಕ ಕಾರ್ಯಕ್ರಮಗಳನ್ನು ಮಾಡಿರುವುದು ರೈತರಿಗೆ ತುಂಬಾ ಸಹಕಾರಿಯಾಗಿದೆ ಎಂದು ಹೇಳಿದರು. ಶರಣಪ್ಪ ಹ್ಯಾಟಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರು ಮಾತನಾಡಿ ನಮ್ಮ ಎಲ್ಲಾ ನಿರ್ದೇಶಕರ ಸಹಕಾರದಿಂದ ನಮ್ಮ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಕಡಲೆ ಖರೀದಿ ಕೇಂದ್ರ ಪ್ರಾರಂಭ ಮಾಡಲಾಗಿದೆ ಹಾಗೂ ಈ ಗ್ರಾಮದ ಹಾಗೂ ಸುತ್ತಮುತ್ತಲಿನ ರೈತರು ಕಡಲೆ ಬೆಳೆಯನ್ನು ಇಲ್ಲಿ ಬಂದು ಮಾರಾಟ ಮಾಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಿದರು. ಕರ್ನಾಟಕ ಸಹಕಾರ ಮಾರಾಟ ಮಹಾ ಮಂಡಳ ಕೊಪ್ಪಳ, ಮಹಾಂತೇಶ ಕೊಪ್ಪಳ, ವಿಶಾಲ ಹೊಸಮನಿ ಇವರ ಸಹಕಾರ ನಮ್ಮ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಸದಾ ಇರುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ರಾಮಣ್ಣ ಮ್ಯಾಗಳೇಶಿ ಉಪಾಧ್ಯಕ್ಷರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ನಿರ್ದೇಶಕರಾದ ಈರಣ್ಣ ಉಮಚಗಿ, ಮಂಜುನಾಥ ಬಂಡಿ, ಶಂಕ್ರಪ್ಪ ಉಳ್ಳಾಗಡ್ಡಿ, ಗಂಗಾಧರ ಬಡಿಗೇರ, ಶರಣಪ್ಪ ತೊದ್ಲ, ಸಿಇಓ ಹನುಮಗೌಡ್ರ ಈಳಗೇರ, ರುದ್ರಗೌಡ್ರ ಪಾಟೀಲ, ಮೃತ್ಯುಂಜಯ ಪಾಟೀಲ, ಶರಣಪ್ಪ ಎಮ್ಮಿ, ಮಂಗಳಪ್ಪ ಛಟ್ಟಿ, ಪ್ರಶಾಂತ ಅಳವಂಡಿ, ಇಂದ್ರಜ್ ರೋಣದ, ಪರಶುರಾಮ ಮೂಲಿಮನಿ, ವಿರುಪಾಕ್ಷಪ್ಪ ಗಿಣಿಗೇರಿ, ಮಂಗಳೇಶಪ್ಪ ತೋದ್ಲ, ಮುದಿಯಪ್ಪ ಎಮ್ಮಿ, ಗಟ್ಟೆಪ್ಪ ಉಮಚಗಿ, ನೀಲಪ್ಪ ವಕ್ರ, ಈರಪ್ಪ ಕುರಿ ಮುತ್ತಾಳ, ಶರಣಪ್ಪ ಬಿನ್ನಾಳ, ಶಿವನಗೌಡ್ರ ಕೀರ್ತಗೌಡ್ರು ಮಲ್ಲಪ್ಪ ಗಾಣಿಗೇರ ಜಗದೀಶಪ್ಪ ಉಮಚಗಿ, ರವಿ ಶೆಲೂಡಿ, ರವೀಂದ್ರನಾಥ ಕೊಟ್ರಪ್ಪ ತೋಟದ, ಪ್ರಭು ಇಲ್ಲಕಲ್, ಮುದಕಪ್ಪ ತೊದ್ಲ ಇತರರು ಹಾಜರಿದ್ದರು.


# CITATION

**IN THE COURT OF 111rd ADDL, SENIOR CIVIL JUDGE & CET AT KALABURAGI E C A NO. 43/ 2015**

SyedAllauddin, since deceased through his LR's

**1.Bilquis Bee w/o late syed Allauddin,**
age; 55 yrs, Occ; Household.

**2.Mohammadi d/o late syed Allauddin,**
age; 34 yrs, occu; Household

**3.Tamijuddin s/o late syed Allauddin**,
age 32 yrs. Occu; pvt sevice

**4.Mastanmiya s/o late syed Allauddin,**
age; 30 yrs.

**All arer/o Matala tQ; Basavakalyan Dist bidar.**
**LR's of petitioner.**

**.....V/S....**

1.Mohammed sujatuddin s/o Md shamshuddin,
Age ; major, occ; owner of lorry
Bearing No.Ap-13/x-2813,
R/o Husehsha Mohall opp shah Husain Darga Basavakalyan, Dist; Bidar
2.The Divisional Manager,
National Insurance Insurance co ltd,
Bilgundi complex, opp; Mini vidhan soudha,
Main Road, Kalaburagi.

**Respondents.**

***Claim Petition u/sec, 3,10 and 4-A of E C Act, 1923***

**Petition U/c V R 20of C.P.C**

The above named Respondent No.1,

Whereas, the LR's of petitioner above named have filed the above claim petition claiming compensation amount of Rs.5,00,000/- on account of death of LR's of petitioner in a Motor vehicle Accident occurred on 18.05.2008 at about 02;30 Hrs, by your lorry bearing No.AP-13 X-2813 and the summons sent to you several times were returned un-served as you are intentionally avoiding to receive them, therefore, you are hereby directed to appear before this court either in person or by a pleader duly instructed on 17/04/2026 at about 11;00 AM to answer the claim cetition, otherwise the matter will be decided in your absence,

Given under my hand and seal of the court on this the 13th day of march 2026

**// By order of the court//**
**Cfief Miniserial officer,**
**Sinior Civil Judge& CEC AT;**
**KALABURAGI**
**S.G. PATIL OKALY Advocate for LR's of petitioner.**


# ಒಳ ಮೀಸಲಾತಿ: 24 ರಂದು ಬೃಹತ್ ಪ್ರತಿಭಟನೆ




• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು**

ಈಗಾಗಲೇ ಒಳ ಮೀಸಲಾತಿ ವಿಚಾರವಾಗಿ ಹಿಂದುಳಿದ ವರ್ಗಗಳಲ್ಲಿ ಹೆಚ್ಚುತ್ತಿರುವ ಕೂಗು ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ಜನಸಂಖ್ಯೆ ಆಧಾರದ ಮೇಲೆ ನ್ಯಾ.ನಾಗಮಹಾನ್ ದಾಸ್ ವರದಿಯಾಗಿರುವುದು ಜಾತಿಗಳಲ್ಲಿ ಹಾಗೂ ರೋಸ್ಟರ್ ಪದ್ಧತಿಯಲ್ಲಿ ಅವೈಜ್ಞಾನಿಕವಾಗಿದೆ ಎಂದು ವರದಿಯನ್ನು ವಿರೋಧಿಸಿ ಮಾರ್ಚ್ 24 ರಂದು ಬೆಂಗಳೂರು ಫ್ರೀಡಮ್ ಪಾರ್ಕಿನಲ್ಲಿ ಭೋವಿ. ಕೊರಮ ಬಂಜಾರ ಸಮುದಾಯಗಳಿಂದ ಬೃಹತ್ ಪ್ರತಿಭಟನೆ ನಡೆಸಲಾಗುತ್ತದೆ ಆದ್ದರಿಂದ ನಮ್ಮ ಸಮುದಾಯದಿಂದ ಜಿಲ್ಲಾ ಹಾಗೂ ತಾಲೂಕು ಹೋಬಳಿ ಮಟ್ಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಚಿತ್ರದುರ್ಗ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಹೇಳಿದರು.

ನಗರದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಒಳಮೀಸಲಾತಿ ವಿಚಾರದಲ್ಲಿ ಯಾವುದೇ ಒಂದು ಸಮುದಾಯಕ್ಕೆ ಮಣಿಯದೆ ಹಾಗೂ ರಾಜಕೀಯ ಒತ್ತಡವನ್ನು ಹೇರಲು ಮುಂದಾಗಿದೆ ಸರ್ಕಾರ 151 ಜಾತಿಗಳು ಸಮಾನವಾಗಿ ಮೀಸಲಾತಿ ಜಾರಿಗೆ ಮುಂದಾಗಬೇಕು

ಮತ್ತು ಈಗಾಗಲೇ 56.432 ಉದ್ಯೋಗ ನೇಮಕ ಮಾಡುವುದಕ್ಕೆ ಹೊರಟಿರುವುದು ಸರಿಯಾದ ನಿರ್ಧಾರ ಅದನ್ನು ನಮ್ಮ ಸಮುದಾಯದ ಸಹಿಸಲ್ಲ ಮತ್ತು ಉಗ್ರಹೋರಾಟದ ಮೂಲಕ ಖಂಡಿಸುತ್ತೇವೆ ಎಂದು ಹೇಳಿದರು

ನಂತರ ಮಾತನಾಡಿದ ಬಂಜಾರ ಸಮುದಾಯದ ಸರ್ದಾರ್ ಸೇವಾಲಾಲ್ ಗುರುಪೀಠ ಚಿತ್ರದುರ್ಗ ನಮ್ಮ ಸಮುದಾಯದ ಮೊದಲು ನಿಂದು ಸಂಸ್ಕಾರ ಇದೆ ಅದನ್ನು ಕೆಲವು ರಾಜಕೀಯ ಮುಖಂಡರುಗಳು ಈ ಹಿಂದೆ ಬಸವರಾಜ ಬೊಮ್ಮಾಯಿ ಅವರ ನಮ್ಮ ಸಮುದಾಯದವರನ್ನು ಕಡೆಗಣಿಸಿದ್ದಕ್ಕೆ ಅವರಿಗೆ ತಕ್ಕ ಪಾಠ ನಮ್ಮ ಸಮುದಾಯದ ತೊರಿಸಿ ಕೊಟ್ಟಿದೆ. ಹಾಗಾಗಿ 27 ರಂದು ನಡೆಯಲಿರುವ ಸಂಪುಟ ಸಭೆಯಲ್ಲಿ ನಮ್ಮ ಹಿಂದುಳಿದ ವರ್ಗಗಳ ಗಣನೆಗೆ ತಿಳಿದುಕೊಳ್ಳಬೇಕೆಂದು ಹೇಳಿದರು

ಈಗಾಗಲೇ ಎ. ಬಿ .ಸಿ ಎಲ್ಲಾ ಸಮುದಾಯ ಗುರುತಿಸಿದ್ದು ಅದಲ್ಲದೆ ಭೋವಿ ಕೊರಮ ಬಂಜಾರ ಸಮುದಾಯಗಳಿಂದ ಸಿ ವರ್ಗಕ್ಕೆ ಸೇರಿದವರು ತಾವು. ಈಗ ಎ. ಬಿ. 56% ಉದ್ಯೋಗದಲ್ಲಿ ತೆಗೆದುಕೊಳ್ಳುವುದಕ್ಕೆ ಹೋದರೆ ನಮ್ಮ ಸಮುದಾಯಕ್ಕೆ ಉದ್ಯೋಗ ಸಿಗುವುದಿಲ್ಲ ಎಂದು ಹೇಳಿದರು

ಹಾಗಾಗಿ ಮುಂದಿನ ಪೀಳಿಗೆಗೆ ಅನುಗುಣವಾಗಿ ಮಾರ್ಚ್ 24 ರಂದು ಬೆಂಗಳೂರು ಫ್ರೀಡಮ್ ಪಾರ್ಕಿನಲ್ಲಿ ನಡೆಯುವ ಪ್ರತಿಭಟನೆಯಲ್ಲಿ ವಿವಿಧ ಜಿಲ್ಲೆಗಳ ಹಾಗೂ ತಾಲೂಕುಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿ ಈ ಹೋರಾಟವನ್ನು ಯಶಸ್ವಿಗೊಳಿಸಲು ಕರೆ ನೀಡಿದರು.

ಈ ಸಂದರ್ಭದಲ್ಲಿ. ಭೋವಿ ಸಮುದಾಯದ ಅಧ್ಯಕ್ಷ ಅಶೋಕ್ ಉಮಲೂಟಿ. ಭೋವಿ ಸಮುದಾಯದ ಮಾಜಿ ಅಧ್ಯಕ್ಷ ಲಕ್ಷ್ಮಣ ಭೋವಿ. ಶರಣಬಸವ ವಕೀಲರು. ಹಂಸರಾಜ ಆನಂದ ನಾರಾಯಣ ಸ್ವಾಮಿ ಯಲ್ಲಪ್ಪ ಈಶಪ್ಪ ಜಾಧವ್ ಹಾಗೂ ಜಯಶ್ರೀ ಭಾಗ್ಯಲಕ್ಷ್ಮಿ ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿ ಇದ್ದರು.

# ನಮ್ಮ ಸ್ವಾತಂತ್ರ್ಯ ನಮ್ಮ ಹೆಮ್ಮೆ ನಾಟಕ ಭಾನುವಾರ ಪ್ರಸಾರ



• **ಮಲ್ಲಮ್ಮ ನುಡಿ ವಾರ್ತೆ, ಹುಣಸಗಿ**

ತಾಲೂಕಿನ ಹೆಬ್ಬಾಳ(ಕೆ) ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾದ ವಿದ್ಯಾಕುಮಾರ್ ಮ. ಬಡಿಗೇರ್ ರಚಿಸಿರುವ 'ನಮ್ಮ ಸ್ವಾತಂತ್ರ್ಯ ನಮ್ಮ ಹೆಮ್ಮೆ' ಬಾನುಲಿ ನಾಟಕವು ಮಾರ್ಚ್ 22, 2026 ರಂದು ರವಿವಾರ ಬೆಳಿಗ್ಗೆ 9:00 ಗಂಟೆಗೆ ಕಲಬುರ್ಗಿ ಆಕಾಶವಾಣಿ ಕೇಂದ್ರದಿಂದ ಪ್ರಸಾರವಾಗಲಿದೆ.

ನಾಟಕವು ಸಾಮಾಜಿಕ ಸಂದೇಶವನ್ನು ಒಳಗೊಂಡಿದ್ದು, ದಲಿತ ಯುವಕನೊಬ್ಬ "ನಮ್ಮ ಸ್ವಾತಂತ್ರ್ಯ ನಮ್ಮ ಹೆಮ್ಮೆ" ಎಂಬ ಧ್ಯೇಯದೊಂದಿಗೆ ಹೋರಾಟ ನಡೆಸುವ ಕಥಾಹಂದರ ಹೊಂದಿದೆ. ತನ್ನ ಸ್ವಸಾಮರ್ಥ್ಯದಿಂದ ಊರಿನ ಜನರು ಅನುಭವಿಸುತ್ತಿದ್ದ ಗುಲಾಮಗಿರಿಯ ಸ್ಥಿತಿಯನ್ನು ಅರಿತು ಅದನ್ನು ನಿವಾರಿಸಲು ಮುಂದಾಗುವ ಯುವಕ, ಬಳಿಕ ಇನ್ಸ್ಪೆಕ್ಟರ್ ವಿಕ್ರಂ ಆಗಿ ಗ್ರಾಮಕ್ಕೆ ಆಗಮಿಸಿ ಸಾಹುಕಾರನ ದರ್ಪವನ್ನು ಹಿಮ್ಮೆಟ್ಟಿಸಿ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮನೋಜ್ಞ ಸನ್ನಿವೇಶಗಳು ನಾಟಕದ ಮುಖ್ಯ ಆಕರ್ಷಣೆಯಾಗಿವೆ.

ಈ ಹಿನ್ನೆಲೆಯಲ್ಲಿ ಹೆಬ್ಬಾಳ(ಕೆ) ಗ್ರಾಮದ ಹಳೆಯ ವಿದ್ಯಾರ್ಥಿಗಳು, ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಪಾಲಕರು ಈ ನಾಟಕವನ್ನು ಬಾನುಲಿಯಲ್ಲಿ ಆಲಿಸಿ ಪ್ರೋತ್ಸಾಹಿಸುವಂತೆ ಮನವಿ ಮಾಡಿದ್ದಾರೆ.

# ಭಕ್ತಿಯ ಸಂಭ್ರಮಕ್ಕೆ ಸಾಕ್ಷಿ: ಆಂಜನೇಯ ಜಾತ್ರೆ



ಆಂಜನೇಯ ಸ್ವಾಮಿಯ ಜಾತ್ರೆಯು ಭಕ್ತಿಗೆ ಸಾಕ್ಷಿಯಾಯಿತು. ಗಂಡನ ಮನೆಯಿಂದ ತೌರ ಮನೆಗೆ ಬಂದ ಮಹಿಳೆಯರು ನೂತನ ರಥೋತ್ಸವಕ್ಕೆ ಭಕ್ತಿಯ ಕಾಣಿಕೆ ಅರ್ಪಿಸಿದರು.

ಐಕ್ಯತಾ ಮನೋಭಾವದ ಮಾರುತೇಶ್ವರ ಸೇವಾ ಸಮಿತಿ ಮತ್ತು ಊರಿನ ಗುರುಹಿರಿಯರು ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತಿ ಇದ್ದರು.

ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಚಿಲವಾಡಗಿ ಗ್ರಾಮದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ನಿನ್ನೆ ಸಂಜೆ ಶ್ರೀ ಆಂಜನೇಯ ಸ್ವಾಮಿಯ ನೂತನ ರಥೋತ್ಸವ ಅದ್ದೂರಿಯಾಗಿ ಜರುಗಿತು. ಬೆಳಿಗ್ಗೆ ಆಂಜನೇಯ ಮೂರ್ತಿಗೆ ಬಿಲ್ವಾರ್ಚನೆ, ವಿಶೇಷ ಪೂಜೆ, ಅಭಿಷೇಕ ನೆರವೇರಿತು ಗ್ರಾಮದ ಭಕ್ತರೆಲ್ಲರೂ ಆಗಮಿಸಿ ಸ್ವಾಮೀಯ ಪೂಜೆಯಲ್ಲಿ ಪಾಲ್ಗೊಂಡು ಪುನೀತರಾದರು.

ಭಕ್ತಿಯ ಹರಕೆ, ನೂತನ ರಥೋತ್ಸವ:

ಬುಧವಾರ ಬೆಳಿಗ್ಗೆ ಉಚ್ಚಾಯ ಲಘುರಥೋತ್ಸವ ಜರುಗಿದ್ದು ಉತ್ತತ್ತಿ ಸಮರ್ಪಿಸಿ ಭಕ್ತಿಯ ಜಾತ್ರೆಗೆ ಚಾಲನೆ ನೀಡಲಾಯಿತು. ಬೇಡಿಕೊಂಡ ಭಕ್ತರು ದೀಡ ನಮಸ್ಕಾರ ಹಾಕಿದರು. ಸಂಜೆ ವೇಳೆಗೆ ಊರಿನ ಅನೇಕ ಯುವಕರ ಬಳಗ ನೂತನ ರಥೋತ್ಸವಕ್ಕೆ ವಿವಿಧ ಬಗೆಯ ಹೂವಿನ ಹಾರಗಳನ್ನು ಮೆರವಣಿಗೆಯ ಮೂಲಕ ತಂದು ನೂತನ ರಥೋತ್ಸವಕ್ಕೆ ಅಲಂಕರಿಸಿದರು. ಭಕ್ತ ಸಮೂಹದ ಮಧ್ಯ ಕೇಸರಿನಂದನ ಜೈ ಶ್ರೀ ರಾಮ್ ಘೋಷದೊಂದಿಗೆ ಪಲ್ಲಕ್ಕಿಯಲ್ಲಿ ಆಂಜನೇಯ ಸ್ವಾಮಿಯ ಮೂರ್ತಿ ಪ್ರತಿಷ್ಠಾಪಿಸಿ ಭಕ್ತರಿಗೆ ಸಾಮೂಹಿಕವಾಗಿ ದರ್ಶನ ಭಾಗ್ಯ ನೀಡಲಾಯಿತು. ಭಕ್ತಿ ಭಾವದಿ ಅದ್ದೂ-ರಿಯಾಗಿ ರಥೋತ್ಸವ ಜರುಗಿತು. ಭಜನೆ, ಡೊಳ್ಳು, ನಂದಿಕೋಲು, ಭಜಂತಿ ಮೇಳಗಳ ಮಂಗಳವಾದ್ಯದದಲ್ಲಿ

ಧಾರ್ಮಿಕ ಕಾರ್ಯಕ್ರಮದಲ್ಲಿ ಪೂಜ್ಯರು ಭಾಗಿ:

ಜಾತ್ರಾ ನಿಮಿತ್ತವಾಗಿ ಜರುಗಿದ ವಿವಿಧ ಧರ್ಮ ಸಭೆಯಲ್ಲಿ ಕೊಪ್ಪಳದ ಗವಿಸಿದ್ದೇಶ್ವರ ಮಹಾಸ್ವಾಮಿಗಳು, ಕುಕನೂರಿನ ಡಾ.ಮಹದೇವ ಮಹಾಸ್ವಾಮಿಗಳು, ಕಂಪ್ಲಿಯ ಪ್ರಭು ಮಹಾಸ್ವಾಮಿಗಳು ವಿವಿಧ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾಗಿ ಭಕ್ತರಿಗೆ ಆಶೀರ್ವಚನ ನೀಡಿದರು. ಇಂದು ಸಂಜೆ ದೇವಸ್ಥಾನದ ನೀರಿನಕೊಂಡದಲ್ಲಿ ವಿಶೇಷ ಪೂಜೆ ಸಲ್ಲಿಸಿ ಧಾರ್ಮಿಕ ಪರಂಪರೆಯ ವ್ಯಕ್ತಿಯೊಬ್ಬರು ನೀರಿನಲ್ಲಿ ಹಾರಿ ಕಾಯಿಕಿತ್ತ ನಂತರ ಜಾತ್ರೆಯು ಸಂಪನ್ನಗೊಳ್ಳುತ್ತದೆ ಎನ್ನುತ್ತಾರೆ ಹಿರಿಯರು.

# ಯುಗಾದಿ ಹಬ್ಬದ ಸಂಭ್ರಮ: ಮುಖ್ಯ ಬೀದಿಗಳಲ್ಲಿ ಹನುಮಾನ ಪಲ್ಲಕ್ಕಿ ಸೇವೆ



ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಯುಗಾದಿ ಹಬ್ಬದ ಅಂಗವಾಗಿ ಪ್ರತಿ ವರ್ಷದ ಸಂಪ್ರದಾಯದಂತೆ ಈ ವರ್ಷವೂ ಪಟ್ಟಣದ ಪ್ರಮುಖ ಬೀದಿಗಳ ಮುಖಾಂತರ ಪಂಚಾಯತ್ ಮೊಹಲ್ಲಾದ ಹನುಮಾನ ದೇವಸ್ಥಾನದ ಪಲ್ಲಕಿ ಸೇವೆ ಗುರುವಾರ ಭಕ್ತಿಭಾವದಿಂದ ಜರುಗಿತು.

ಬೆಳಗ್ಗಿನಿಂದಲೇ ಭಕ್ತರು ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಬಳಿಕ ಶ್ರೀ ಹನುಮಂತ ದೇವರ ಪಲ್ಲಕಿಯನ್ನು ಭಕ್ತರು ಹೊತ್ತುಕೊಂಡು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ಪಲ್ಲಕಿ ಸೇವೆ ವೇಳೆ ಯುವಕರಿಂದ ಭಜನೆ, ಕೀರ್ತನೆಗಳು ಕೇಳಿಬಂದವು. ಮೆರವಣಿಗೆಯಲ್ಲಿ ಮಹಿಳೆಯರು, ಯುವಕರು ಹಾಗೂ ಹಿರಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಹಬ್ಬದ ಉತ್ಸಾಹವನ್ನು ಮತ್ತಷ್ಟು ಹೆಚ್ಚಿಸಿದರು.

ಪ್ರತಿವರ್ಷದಂತೆ ನಾರಾಯಣಪುರ ಬಡಾವಣೆಯ ಅಂಜನೇಯ ದೇವಸ್ಥಾನದ ಆವರಣದಲ್ಲಿ ಭಕ್ತರಿಗೆ ಪಾನಕ ಸೇರಿದಂತೆ ಪ್ರಸಾದ ವಿತರಣೆ ಮಾಡಲಾಯಿತು.

ಪಲ್ಲಕಿ ಪುನಃ ದೇವಸ್ಥಾನಕ್ಕೆ ತಲುಪಿತು, ಪ್ರಸಾದದೊಂದಿಗೆ ಪಲ್ಲಕಿ ಸೇವೆ ಕಾರ್ಯಕ್ರಮ ಸಂಪನ್ನ ಗೊಂಡಿತು.

# ಮಾ, 23 ಕ್ಕೆ ಶ್ರೀ ದೇವರ ದಾಸಿಮಯ್ಯ ಜಯಂತ್ಯುತ್ಸವ

• ಮಲ್ಲಮ್ಮ ನುಡಿ ವಾರ್ತೆ, ಬೀದರ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ ಇವರ ಸಂಯುಕ್ತಾಶ್ರಯದಲ್ಲಿ ಮಾರ್ಚ್.23 ರಂದು ಮಧ್ಯಾಹ್ನ 12.30 ಗಂಟೆಗೆ ಪೂಜ್ಯ ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ಶ್ರೀ ದೇವರ ದಾಸಿಮಯ್ಯ ಜಯಂತ್ಯುತ್ಸವ ಕಾರ್ಯಕ್ರಮ ಜರುಗಲಿದೆ.

ಉದ್ಘಾಟನೆಯನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಮಾಡಲಿದ್ದಾರೆ.

ಅಧ್ಯಕ್ಷತೆ ಪೌರಾಡಳಿತ ಮತ್ತು ಹಜ್ ಸಚಿವರಾದ ರಹೀಂ ಖಾನ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೀದರ ಲೋಕಸಭಾ ಸದಸ್ಯರಾದ ಸಾಗರ ಈಶ್ವರ ಖಂಡ್ರೆ,

ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮಾಲಾ ನಾರಾಯಣರಾವ್, ಔರಾದ (ಬಿ) ಶಾಸಕ ಪ್ರಭು ಬಿ.ಚವ್ಹಾಣ್, ಬಸವಕಲ್ಯಾಣ ಶಾಸಕ ಶರಣು ಸಲಗರ, ಬೀದರ ದಕ್ಷಿಣ ಶಾಸಕ ಡಾ.ಶೈಲೇಂದ್ರ ಕೆ.ಬೆಲ್ದಾಳೆ, ಹುಮನಾಬಾದ ಶಾಸಕ ಡಾ.ಸಿದ್ದು ಪಾಟೀಲ, ವಿಧಾನ ಪರಿಷತ್ ಶಾಸಕರುಗಳಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ ಜಿ.ನಮೋಶಿ, ಭೀಮರಾವ ಬಿ.ಪಾಟೀಲ,

ಡಾ.ಎಂ.ಜಿ.ಮೂಳೆ ಹಾಗೂ ಅಧ್ಯಕ್ಷರು, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷ್ಣಾ ಮೇಲ್ದಂಡೆ ಯೋಜನೆ (ಕಾಡಾ) ಭೀಮರಾಯನಗುಡಿ, ಕಲಬುರಗಿಯ ಬಾಬು ಹೊನ್ನನಾಯ್ಕ, ಬೀದರ ನಗರಸಭೆ ಅಧ್ಯಕ್ಷ ಮಹಮ್ಮದ ಗೌಸ, ಬೀದರ ನಗರಾಭಿವರದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಹಾಗೂ ಅತಿಥಿ ಉಪನ್ಯಾಸವನ್ನು ಬೀದರ ಬಸವ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಪೂಜ್ಯ ಶ್ರೀ ಡಾ.ಗಂಗಾಂಬಿಕಾ ಅಕ್ಕ ನೀಡಲಿದ್ದಾರೆ.

# ಮಳೆಯಿಂದಾಗಿ ಹಾನಿಗೊಳಗಾದ ಮನೆಗಳಿಗೆ ಮಂಜುನಾಥ್ ಭೇಟಿ



ಹುಣಸೂರು ತಾಲೂಕಿನ ಹನಗೋಡು ಹೋಬಳಿಯ ವಿವಿಧ ಗ್ರಾಮಗಳಲ್ಲಿ ಬೀಸಿದ ಬಿರುಗಾಳಿ– ಮಳೆಯಿಂದ ಹಾನಿಯಾಗಿರುವ ಮನೆಗಳು ಹಾಗೂ ಶಾಲೆಗಳು ಗ್ರಾಮಗಳಿಗೆ ಮಾಜಿ ಶಾಸಕರಾದ ಹಾಗೂ ಸ್ನೇಹಜೀವಿ ಎಚ್ ಪಿ ಮಂಜುನಾಥ್ ರವರುಯುಗಾದಿ ಹಬ್ಬದ ದಿನವಾದ ಭೇಟಿ ನೀಡಿ ನೊಂದ ಜನತೆಗೆ ಆತ್ಮಸ್ಥೈರ್ಯ ತುಂಬಿ ಹಾನಿಗೀಡಾಗಿರುವ ವ್ಯಯಕ್ತಿಕ ವಾಗಿ ಸಹಾಯಧನ ನೀಡಿದ್ದಾರೆ ತಾಲೂಕಿನ ಮಾಜಿ ಶಾಸಕ ಹಾಗೂ ಸ್ನೇಹಜೀವಿ ಎಚ್ ಪಿ ಮಂಜುನಾಥ್ ತಿಳಿಸಿದ್ದಾರೆ

ನಂತರ ಸುದ್ದಿಗಾರೊಂದಿಗೆ ಮಾತನಾಡಿದಾಸನಪುರ ಗ್ರಾಮದ 23 ಮನೆಗಳು, ಕಿರಂಗೂರು ಗ್ರಾಮದ 2 ಮನೆಗಳು, ಕಾಮಗೌಡನಹಳ್ಳಿ ಯಲ್ಲಿ ಒಂದು ಮನೆ, ಹಾಗೂ ಹರಳಳ್ಳಿ ಯಲ್ಲಿ ಒಂದು ಮನೆ ಸೇರಿದಂತೆ ಒಟ್ಟು 27 ಮನೆಗಳಿಗೆ ಹೆಂಚು, ಕಲ್ನಾರು ಶೀಟು, ಮರಮುಟ್ಟುಗಳು ಹಾಗೂ ಧನಸಹಾಯ ನೀಡಿದರು. ಇದಲ್ಲದೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಎರಡು ಕೊಠಡಿ ಗಳನ್ನು ದುರಸ್ತಿ ಪಡಿಸಲು 50ಸಾವಿರ ರೂ ಹಾಗೂ ಅಗತ್ಯವಾಗಿರುವಷ್ಟು ಹೆಂಚುಗಳನ್ನು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರು ಹಾಗೂ ಗ್ರಾಮಸ್ಥರುಗಳಿಗೆ ಜವಾಬ್ದಾರಿ ನೀಡಿ ಕೂಡಲೇ ಶಾಲೆ ಕೊಠಡಿಗಳನ್ನು ದುರಸ್ತಿ ಪಡಿಸಲು ಸಹಕಾರ ನೀಡಿ ಶಾಲೆಗೆ ದುರ ಶಾಲಾ ಕೊಠಡಿ ದುರಸ್ತಿ ವೆಚ್ಚ ಹೆಚ್ಚಾದರೆ ಮತ್ತಷ್ಟು ಸಹಾಯ ಮಾಡುವೆನೆಂದು ಭರವಸೆ ನೀಡಿದರು.

ಗ್ರಾಮದ ಇಬ್ಬರು ಮಳೆ ಗಾಳಿ ಸಿಲುಕಿ ಗಾಯಗೊಂಡಿರುವರಿಗೆ ಆಸ್ಪತ್ರೆ ಖರ್ಚು ವೆಚ್ಚಕ್ಕೆ ಧನ ಸಹಾಯ ನೀಡಿದರು. ಇದಲ್ಲದೆ ದಾಸನಪುರ, ಹನಗೋಡು ಕಚುವಿನಹಳ್ಳಿ ಗ್ರಾಮಗಳಲ್ಲಿ ವಿದ್ಯುತ್ ಕಂಬಗಳು ಹಾನಿಯಾಗಿರುವ ಬಗ್ಗೆ ಚೆಸ್ಕಂ ನ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿ ಕೂಡಲೇ ವಿದ್ಯುತ್ ಕಂಬಗಳ ದುರಸ್ತಿಕಾರ್ಯ ಕೈಗೊಂಡು ಕಗ್ಗತ್ತಲಿಂದ ಕೂಡಿರುವ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮಕೈಗೊಳ್ಳಬೇಕೆಂದು ಮನವಿ ಮಾಡಿದರು.

ಹಾಗೆಯೇ ಈ ಭಾಗದಲ್ಲಿ ಆಲಿ ಕಲ್ ಮಳೆಯಿಂದಾಗಿ ತಂಬಾಕು ಮಡಿ ಸಸಿಗಳು ಹಾನಿಯಾಗಿದೆ ಹನಗೋಡಿನ ಶಿವಣ್ಣ, ಬಸವರಾಜ್ ರವರಿಗೆ ಬಾಳೆ ಬೆಳೆ ಹೆಮ್ಮಿಗೆ ಗ್ರಾಮದ ರಾಮೇಗೌಡರಿಗೆ ಸೇರಿದ ನಾಲ್ಕು ಎಕರೆ ಕಲ್ಲಂಗಡಿ ಬೆಳೆ ಹಾನಿಯಾಗಿರುವ ಬಗ್ಗೆ ಜಿಲ್ಲಾಧಿಕಾರಿಗಳಾದ ಲಕ್ಷ್ಮಿಕಾಂತ್ ರೆಡ್ಡಿ ಅವರಿಗೆ ದೂರವಾಣಿ ಮೂಲಕ ಮಾತನಾಡಿ ತಂಬಾಕು ಬಾಳೆ ಕಲ್ಲಂಗಡಿ ಬೆಳೆಗೆ ಹೆಚ್ಚಿನ ಪರಿಹಾರ ನೀಡಬೇಕೆಂದು ಮನವಿ ಮಾಡಿದರು. ಎಂದು ತಿಳಿಸಿದರು ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು ಗ್ರಾಮಸ್ಥರು ಕಾರ್ಯಕರ್ತರು ಅಭಿಮಾನಿಗಳು ಹಾಜರಿದ್ದರು

# ಮಳೆ, ಬೆಳೆ, ಸಂಪತ್ತು ಒದಗಿ ಬರುವುದು: ವೇದ ಮೂರ್ತಿ ಕೊಟ್ರಯ್ಯ ತಾತ



• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ

ತಾಲೂಕಿನ ಹೊಸ ನೆಲ್ಲೂಡಿ ಗ್ರಾಮದ ಶ್ರೀ ಈಶ್ವರ ದೇವಸ್ಥಾನದಲ್ಲಿ ಗುರುವಾರ ಸಂಜೆ ಪಂಚಾಂಗ ಪಠಣ ಕಾರ್ಯಕ್ರಮ ಜರುಗಿತು.

ಈ ಸಂದರ್ಭದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ವೇದ ಮೂರ್ತಿ ಎನ್.ಎಂ ಕೊಟ್ರಯ್ಯ ತಾತನವರ ದಿವ್ಯ ಸಾನ್ನಿಧ್ಯ ವಹಿಸಿ, ಶ್ರೀ ಈಶ್ವರ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಪಂಚಾಂಗ ಪಠಣ ಮಾಡಿದರು ನಂತರ ಪೂಜ್ಯರು ಮಾತನಾಡಿ ಈ ವರ್ಷವೂ ಮಳೆ–ಬೆಳೆ–ಸಂಪತ್ತು ಸಂಪೂರ್ಣವಾಗಿ ಚೆನ್ನಾಗಿದ್ದು,

ಎಲ್ಲ ಭಕ್ತರೂ ಬಸವಣ್ಣನವರು ಹೇಳಿದ ವಚನದಂತೆ ಕಾಯಕದಲ್ಲಿ ಕೈಲಾಸ ಕಂಡು, ನಿಮ್ಮ–ನಿಮ್ಮ ಕೆಲಸ ಕಾರ್ಯಗಳನ್ನು ನಿಷ್ಠೆಯಿಂದ, ಪ್ರಾಮಾಣಿಕವಾಗಿ ಮಾಡಿದರೆ ಖಂಡಿತ ಸರ್ವರಿಗೂ ಸಕಲ ಸಂಪತ್ತು ಒದಗಿ ಬರುತ್ತದೆ ಎಂದು ಭವಿಷ್ಯ ನುಡಿದರು.

ಈ ಸಂದರ್ಭದಲ್ಲಿ ಹೊಸ ನೆಲ್ಲೂಡಿ ಗ್ರಾಮದ ಎಲ್ಲ ಸಮುದಾಯದ ಗುರು–ಹಿರಿಯರು, ಯುವಕರು, ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಧರ್ಮಸ್ಥಳ: ವಾತ್ಸಲ್ಯ ಮನೆ ಹಸ್ತಾಂತರ



• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ

ತಾಲೂಕಿನ ವೆಂಕಟಾಪುರ ಕ್ಯಾಂಪ್ ನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿಯೋಜನೆಯವತಿಯಿಂದ ಜ್ಞಾನ ವಿಕಾಸ ಕಾರ್ಯಕ್ರಮದ ಅಡಿಯಲ್ಲಿ ವಾತ್ಸಲ್ಯ ಫಲಾನುಭವಿ ಬಸಮ್ಮ ರವರಿಗೆ ಪರಮಪೂಜ್ಯ ಡಾ. ವೀರೇಂದ್ರ ಹೆಗ್ಗಡೆ ಅವರು ಹಾಗೂ ಮಾತೋಶ್ರೀ ಹೇಮಾವತಿ ಅಮ್ಮನವರು ಮಂಜೂರು ಮಾಡಿದ ವಾತ್ಸಲ್ಯ ಮನೆಯನ್ನು ಹಸ್ತಾಂತರ ಕಾರ್ಯಕ್ರಮವನ್ನು ಮಾಡಲಾಯಿತು. ಸಂಸ್ಥೆಯ ಕೊಪ್ಪಳ ಪ್ರಾದೇಶಿಕ ನಿರ್ದೇಶಕರಾದ ಚಂದ್ರಶೇಖರ ಜೆ ಅವರು ಹಸ್ತಾಂತರ ಮಾಡಿ ಧರ್ಮಸ್ಥಳ ಗ್ರಾಮಭಿವೃದ್ಧಿ ಯೋಜನೆಯಿಂದ ಸಮುದಾಯದ ಅಭಿವೃದ್ಧಿ ಕಾರ್ಯಕ್ರಮ, ವಾತ್ಸಲ್ಯ ಕಾರ್ಯಕ್ರಮ, ಜನ ಮಂಗಳ ಕಾರ್ಯಕ್ರಮಗಳು ಹಾಗೂ ವಿವಿಧ ಸಮಾಜಮುಖಿ ಕಾರ್ಯಕ್ರಮಗಳು ಪೂಜ್ಯರ ನೆರಳಿನಲ್ಲಿ ನಡೆಯುತ್ತಿದ್ದು ಧರ್ಮಸ್ಥಳ ಸಂಸ್ಥೆ ಸಮಾಜದ ನಿಜವಾದ ಕಾಮದೇನು ಇದ್ದಂತೆ ಎಂದು ಹೇಳಿದರು

ಮುಖ್ಯ ಅತಿಥಿಗಳಾಗಿ ಜಿಲ್ಲಾ ಜನಜಾಗ್ರತಿ ವೇದಿಕೆ ಸದಸ್ಯರಾದ ಪ್ರಕಾಶ್ , ಪೂಜಾ ಐಲಿ, ಸಂಸ್ಥೆಯ ಜಿಲ್ಲಾ ನಿರ್ದೇಶಕರಾದ ಸತೀಶ ಶೆಟ್ಟಿ , ಊರಿನ ಗಣ್ಯರಾದ ದೇವಪ್ಪ , ತಾಲೂಕಿನ ಯೋಜನಾಧಿಕಾರಿಗಳಾದ ರಾಘವೇಂದ್ರ, ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಒಕ್ಕೂಟ ಅಧ್ಯಕ್ಷರು ಗಳಾದ ರಾಮಾದೇವಿ, ಸರೋಜ ರವರು ಭಾಗವಹಿಸಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮೇಲ್ವಿಚಾರಕ ನಾಗರಾಜ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಕವಿತಾ, ಸೇವಾಪ್ರತಿನಿಧಿ ಶಶಿಕಲಾ, ಸಂಘದ ಸದಸ್ಯರು, ಊರಿನ ನಾಗರೀಕರು ಉಪಸ್ಥಿತರಿದ್ದರು.

# ರಂಜನಿ ರಾಘವನ್ ನಿರ್ದೇಶನದ ಡಿ ಡಿ ಢಿಕ್ಕಿ



• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ

ರೆಗ್ಯುಲೇಟರ್ ಕ್ಯಾಂಪ್ ನ ಜಡೇಶ್ ಕೆ. ಹಂಪಿರವರ ನಿರ್ಮಾಣ

ಬಳ್ಳಾರಿ /ಕಂಪ್ಲಿ: ಗುರು ಶಿಷ್ಯರು", "ಲ್ಯಾಂಡ್ ಲಾರ್ಡ್" ಚಿತ್ರಗಳ ನಿರ್ದೇಶಕ ಹಾಗೂ "ಕಾಟೇರ" ಚಿತ್ರದ ಲೇಖಕ ಜಡೇಶ್ ಹಂಪಿ ಅವರ ಹಂಪಿ ಪಿಕ್ಚರ್ಸ್ ಹಾಗೂ ರಾಮಕೃಷ್ಣ ಹಾಗೂ ಆನಂದ್ ಕುಮಾರ್ ನೇತೃತ್ವದ ಖ ಏ & ೦ ಇ ಎಂಟರ್ಟೈನ್ಮೆಂಟ್ ಸಂಸ್ಥೆ ನಿರ್ಮಾಣದ, ಕಲಾವಿದೆಯಾಗಿ ಜನಪ್ರಿಯರಾಗಿರುವ ರಂಜನಿ ರಾಘವನ್ ಮೊದಲ ಬಾರಿಗೆ ನಿರ್ದೇಶನ ಮಾಡುತ್ತಿರುವ ಹಾಗೂ "ನೆನಪಿರಲಿ" ಪ್ರೇಮ್ ನಾಯಕರಾಗಿ ನಟಿಸುತ್ತಿರುವ ಚಿತ್ರ "ಡಿಡಿ ಢಿಕ್ಕಿ".

ಗೋಲ್ಡನ್ ಸ್ಟಾರ್ ಗಣೇಶ್ ಅವರ ಪುತ್ರ ಮಾಸ್ಟರ್ ವಿಹಾನ್ ಕೂಡ ಈ ಚಿತ್ರದ ಪ್ರಮುಖಪಾತ್ರದಲ್ಲಿ ನಟಿಸುತ್ತಿದ್ದಾರೆ. ಪ್ರಸ್ತುತ ಈ ಚಿತ್ರದ ಚಿತ್ರೀಕರಣ ಬಿರುಸಿನಿಂದ ಸಾಗಿದೆ.

ಲೆಜೆಂಡ್ ಇಳಯರಾಜ ಅವರ ಸಂಗೀತ

ನಿರ್ದೇಶನವಿರುವ ಈ ಚಿತ್ರಕ್ಕೆ ಸುಧಾಕರ್ ಅವರ ಛಾಯಾಗ್ರಹಣವಿದೆ. ಕೆ.ಎಂ.ಪ್ರಕಾಶ್ ಸಂಕಲನವಿರುವ "ಡಿಡಿ ಢಿಕ್ಕಿ" ಚಿತ್ರಕ್ಕೆ ತರುಣ್ ಸುಧೀರ್ ಕ್ರಿಯೇಟಿವ್ ಹೆಡ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮೇ ತಿಂಗಳಲ್ಲಿ ಬಿಡುಗಡೆ ಸಾಧ್ಯತೆ.

# ಅಗತ್ಯ ಇರುವವರಿಗೆ ಮಾತ್ರ ಮೀಸಲಾತಿ ಸೌಲಭ್ಯಗಳಿರಬೇಕು

• ಮಲ್ಲಮ್ಮ ನುಡಿ ವಾರ್ತೆ, ಹುಣಸೂರು

ವಿಶ್ವ ಸಮಾಜ ಕಾರ್ಯಕರ್ತರ ದಿನಾಚರಣೆ ಅಂಗವಾಗಿ ಮೈಸೂರು ವಿಶ್ವ ವಿದ್ಯಾಲಯದ ಸಮಾಜ ಕಾರ್ಯ ಸ್ನಾತಕೋತ್ತರ ಪದವಿ ವಿಭಾಗ ತನ್ನ ಮೊದಲ ಮುಖ್ಯಸ್ಥರು, ಸುಪ್ರಸಿದ್ಧ ಶಿಕ್ಷಣ ತಜ್ಞೆ ಪ್ರೊ. ಸಿ. ಪಾರ್ವತಮ್ಮ ರವರ ಸ್ಮರ ಣಾರ್ಥ ಅವರ ಪರಿಚಯ ಉಪನ್ಯಾಸ ಮಾಲೆ ಕಾರ್ಯಕ್ರಮ ವನ್ನು ವಿಭಾಗದ ಮುಖ್ಯಸ್ಥರಾದ ಪ್ರೊ. ಶಿವಪ್ಪ ರವರ ಮುಂದಾಳತ್ವದಲ್ಲಿ ಮಾರ್ಚ್ 17 ರಂದು ಏರ್ಪಡಿಸಲಾಗಿತ್ತು. ಉದ್ಘಾಟನೆಯನ್ನು ಬಂಜಗೆರೆ ಜಯಪ್ರಕಾಶ್ ನೆರವೇರಿಸಿದರು.

ಸ್ಮರಣೆ ಉಪನ್ಯಾಸ ಮಾಡಿದ ಡೀಡ್ ನಿರ್ದೇಶಕ, 46 ವರ್ಷಗಳಿಂದ ಆದಿವಾಸಿ ಕ್ಷೇತ್ರದಲ್ಲಿ ಸಮಾಜ ಕಾರ್ಯಮಾಡಿರುವ ಹಾಗು ಪ್ರೊ. ಸಿ ಪಾರ್ವತಮ್ಮ ರವರ ಅಭಿಮಾನಿ, ಅವರ ಮೀಸಲಾತಿ :ಒಂದು ಗಗನ ಕುಸುಮ, ರೆಸೆರ್ವೇಶನ್: ಎ ಪೈ ಇನ್ ದಿ ಸ್ಕೈ ಪುಸ್ತಕ ಪ್ರಕಟಣೆ ಮಾಡಿದ ಡೀಡ್ ನಿರ್ದೇಶಕ ಡಾ.ಎಸ್ ಶ್ರೀಕಾಂತ್ ಮಾತನಾಡಿ ನಿಜವಾಗಿ ಅಗತ್ಯ ಇರುವವರಿಗೆ ಮಾತ್ರ ಮೀಸಲಾತಿ ಸೌಲಭ್ಯಗಳಿರಬೇಕು. ಖಾಯಂ ಆಗಿ ಮೀಸಲಾತಿ ಅವಲಂಬಿಸಿದರೆ ವ್ಯಕ್ತಿಗಳ ಕ್ರಿಯಾ ಶೀಲತೆ ಹಾಳುಮಾಡಿ ವ್ಯಕ್ತಿಯ ಆತ್ಮಗೌರವವನ್ನು ಸಾಯಿಸಿಬಿಡುತ್ತದೆ. ಅಸಮಾನರು ಸಮಾನಸ್ಥಿತಿಗೆ ಬರಲು ಮೀಸಲಾತಿ ಬೇಕೆಂದು ಡಾ. ಬಿ. ಆರ್. ಅಂಬೇಡ್ಕರ್ ತನ್ನ ಸಂರಕ್ಷಿತಾ ತಾರತಮ್ಯ ತತ್ವ ಪ್ರತಿಪಾದಿಸಿದನ್ನು ತಾನೂ ಕೆಲಕಾಲ ಮಾತ್ರಮೀಸಲಾತಿ ಇರಲಿ ಎಂದು ತನ್ನ ಪುಸ್ತಕ ಮೀಸಲಾತಿ ಒಂದು ಗಗನ ಕುಸುಮ ಪುಸ್ತಕದಲ್ಲಿ ಹೇಳಿದ್ದಾರೆ. ಅಲ್ಲದೆ ಜಾತಿಗಳು ಬುಡಕಟ್ಟು ಗಳಾಗಲು ನಾಗಲೋಟದ ಸ್ಪರ್ಧೆ ಏರ್ಪಟ್ಟಿದೆ. ನಿಜವಾದ ಬುಡಕಟ್ಟು ಗಳಿಗೆ ಮೀಸಲಾತಿ ಗಗನ ಕುಸುಮವಾಗಿದೆ. ಜಾತಿ ಸಮುದಾಯಗಳ ಈ ಹಿಂಮ್ಮುಖ ಚಲನೆ ಸಾಮಾಜಿಕ ನ್ಯಾಯಕ್ಕೆ ಅಡ್ಡಿಯಾಗಿದೆ. ರಾಜಕೀಯ ಶಕ್ತಿ ಬಳಸಿ ಮೀಸಲಾತಿ ದುರುಯೋಗ ವಾಗುತ್ತಿದೆ ಎಂದು ಆಪಾದಿಸಿದ್ದಾರೆ ಎಂದರು. ಇಂತ ನಡವಳಿಕೆ ಯಿಂದಾಗಿ ಆದಿವಾಸಿಗಳಿಗೆ 15 ಎಸ್ಟಿ ಮೀಸಲು ವಿಧಾನ ಸಭಾ ಕ್ಷೇತ್ರ ಗಳಿದ್ದರೂ ಒಬ್ಬರದಾರೂ ವಿಧಾನಸಭೆಗೆ ಪ್ರವೇಶಿಸಿ ಅಧಿಕಾರ ಹಿಡಿಯಲು ಆಗುತ್ತಿಲ್ಲ. ಇದಕ್ಕೆ ಕಾರಣ ಬಲಿಷ್ಠ ಸಮುದಾಯಗಳ ಹಿಂಮ್ಮುಖ ಚಲನೆಯ ಪ್ರಭಾವ ಹಾಗು ಅವರೆಲ್ಲರಿಗೆ ಮೀಸಲಾತಿ ಪಟ್ಟಿಯಲ್ಲಿ ಸ್ಥಾನಸಿಕ್ಕಿರುವುದು ಎಂದು ಪ್ರತಿ ಪಾ ದಿ ಸಿದ್ದನ್ನು ಶ್ರೀಕಾಂತ್ ಸ್ಮರಿಸಿದರು. ಇನ್ನೊಬ್ಬತಜ್ಞ ಪ್ರೊ ಶಿವಣ್ಣನವರ ಸಂಶೋಧನ ವರದಿ ಪ್ರಕಾರ ಎಸ್ಟಿ ಯಲ್ಲಿನ 52 ಪಂಗಡಗಳಲ್ಲಿ ಜಾತಿ ಸಮುದಾಯದಿಂದ ಬಂದ ಎರಡು ಜಾತಿಗಳು ಮಾತ್ರ ಬಹುಭಾಗ ಮೀಸಲಾತಿ ಬಳಸಿವೆ. ಅಂತೆಯೇ ಎಸ್ ಸಿ ಮೀಸಲಿನಲ್ಲಿ 101 ಜಾತಿ ಪೈಕಿ 4ಜಾತಿ ಗಳು ಮಾತ್ರ ಬಹುಭಾಗ ಮೀಸಲು ತಮ್ಮ ದಾಗಿಸಿಕೊಂಡಿದ್ದಾರೆ ಎಂದು ವರದಿ ಮಾಡಿದ್ದಾರೆ ಎಂದು ವಿವರಿಸಿದರು. ಇದರ ಅರ್ಥ ಮೀಸಲಿದ್ದರೆ ಮಾತ್ರ ಸಾಲದು ಒಳ ಮೀಸಲಾತಿ ಇರಲೇಬೇಕು. ಇಲ್ಲವಾದರೆ ಸಾಮಾಜಿಕ ನ್ಯಾಯ ಮರೀಚಿಕೆ ಎಂದು ಅರಿಯಬೇಕು ಎಂದ ಶ್ರೀಕಾಂತ್ ಪ್ರೊ. ಸಿ ಪಾರ್ವತಮ್ಮ 38 ವರ್ಷ ಶಿಕ್ಷಣ ಕ್ಷೇತ್ರ ದಲ್ಲಿ, ಸಂಶೋಧನೆ ಯಲ್ಲಿ, ಸೇವೆಸಲ್ಲಿಸಿ 14 ಪುಸ್ತಕಗಳನ್ನು, 72 ಸಂಶೋಧನ ಲೇಖನಗನ್ನು ಬರೆದಿರುವರಲ್ಲದೇ 12 ಸಂಶೋಧನ ಯೋಜನೆಗಳನ್ನು ತನ್ನ ಮಾರ್ಗದರ್ಶನದಲ್ಲಿ ಕೈಗೊಂಡಿದ್ದರು ಎಂದರು. ಇವರಿಗೆ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಅಂಬೇಡ್ಕರ್ ಪ್ರಶಸ್ತಿ, ಗಾರ್ಗಿ ಪ್ರಶಸ್ತಿ, ನಾಡೋಜಾ ಪ್ರಶಸ್ತಿ ಲಭಿಸಿ ದವಲ್ಲದೆ. ಸಮಾಜ ಶಾಸ್ತ್ರ, ಮಾನವಶಾಸ್ತ್ರ, ಸಮಾಜ ಕಾರ್ಯ ಕ್ಷೇತದಲ್ಲಿ ಅಂತಾರಾಷ್ಟ್ರೀಯ ಮಟ್ಟದ ವೇದಿಕೆ ಗಳಲ್ಲಿ ಅಜೀವ ಸದಸ್ಯತ್ವ ಹೊಂದಿದ್ದರು. ಇವರೊಬ್ಬ ದಾರ್ಶನಿಕ, ದೂರ ದೃಷ್ಟಿ ಉಳ್ಳ ಸಮಾಜ ಶಾಸ್ತ್ರಜೆ. ಇಂದಿನ ತಲೆಮಾರಿಗೆ ಇವರು ಬಹುದೊಡ್ಡ ಪ್ರೇರಣೆ ಎಂದರು. ಪ್ರೊ.ಚಂದ್ರಮೌಳಿ ಉಪನ್ಯಾಸಮಾಲೆಯ ಅಧ್ಯಕ್ಷತೆ ವಹಿಸಿದ್ದರು. ಪ್ರೊ ಕಾಳಚನ್ನೇಗೌಡ, ಪ್ರೊ. ಸುಧಾ, ಪ್ರೊ ವನಜ, ಪ್ರೊ. ಜ್ಯೋತಿ, ಉಪನ್ಯಾಸಕ ಮುಖೇಶ್, ಎಂ ಎಸ್ ಚಂದ್ರ, ಅಹಿಂದ ಜವರಪ್ಪ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಭಕ್ತಿಭಾವದ ಹರಿನಾಮ ಸಪ್ತಾಹಕ್ಕೆ ಚಾಲನೆ

# ಗುರುವಿನ ಭಕ್ತಿಯೇ ಜೀವನದ ಪರಮ ಬೆಳಕು: ಕುಲಕರ್ಣಿ



• ವರದಿ:ಪರಮೇಶ ರಾಂಪುರೆ, ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ತಾಲೂಕಿನ ಮುಧೋಳ (ಬಿ) ಗ್ರಾಮದ ಶ್ರೀ ಮಹಾದೇವ ದೇವಸ್ಥಾನದಲ್ಲಿ 14 ದಿನಗಳ ಕಾಲ ನಡೆಯಲಿರುವ 'ಶ್ರೀ ಮಹಾದೇವ ಜಾತ್ರಾ ಮಹೋತ್ಸವ' ಹಾಗೂ 'ಅಖಂಡ ಹರಿನಾಮ ಸಪ್ತಾಹ' ಕ್ಕೆ ಶುಕ್ರವಾರ ಅದ್ದೂರಿ ಚಾಲನೆ ನೀಡಲಾಯಿತು.

ಸಪ್ತಾಹದ ಮೊದಲ ದಿನದಂದು ಪ್ರವಚನ ನೀಡಿದ ತೋರಣ ಗ್ರಾಮದ ಖ್ಯಾತ ಪ್ರವಚನಕಾರ ಶ್ರೀ ಮಹೇಶ ಕುಲಕರ್ಣಿ, "ಮಾನವನ ಜೀವನದಲ್ಲಿ ಭಕ್ತಿ ಎಂಬುದು ಕೇವಲ ಆಚರಣೆಯಲ್ಲ, ಅದು ಬದುಕಿನ ಸಂಸ್ಕಾರ. ಗುರು ಮತ್ತು ದೇವರ ಮೇಲಿನ ನಿಷ್ಕಲ್ಮಶ ಭಕ್ತಿಯು ಮನುಷ್ಯನನ್ನು ಅಂಧಕಾರದಿಂದ ಬೆಳಕಿನೆಡೆಗೆ ನಡೆಸುತ್ತದೆ. ಆಧುನಿಕ ಯುಗದಲ್ಲಿ ಶಾಂತಿ ಮತ್ತು ನೆಮ್ಮದಿಗಾಗಿ ಹರಿನಾಮ ಸ್ಮರಣೆ ಅತ್ಯಗತ್ಯ," ಎಂದು ಮಾರ್ಮಿಕವಾಗಿ ನುಡಿದರು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯರು, ದೇವಸ್ಥಾನ ಸಮಿತಿಯ ಪದಾಧಿಕಾರಿಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳ ನೂರಾರು ಭಕ್ತಾಧಿಗಳು ಉಪಸ್ಥಿತರಿದ್ದರು. ಮುಧೋಳ (ಬಿ) ಗ್ರಾಮವು ಸಂಪೂರ್ಣ ಕೇಸರಿ ಮಯವಾಗಿದ್ದು, ಭಕ್ತಿ ಗೀತೆಗಳು ಹಾಗೂ ಮಂತ್ರಘೋಷಗಳಿಂದ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ.

**ಸಂಭ್ರಮ ಸಡಗರದಲ್ಲಿ ಮುಧೋಳ ಗ್ರಾಮ**

“ ವೈವಿಧ್ಯಮಯ ಧಾರ್ಮಿಕ ವಿಧಿಗಳು: ಮಾರ್ಚ್ 20 ರಿಂದ ಪ್ರಾರಂಭವಾಗಿರುವ ಈ ಸಪ್ತಾಹವು ಮಾರ್ಚ್ 27 ಕಾಲ ಕೀರ್ತನೆದೊಂದಿಗೆ ಸಂಪನ್ನವಾಗಲಿದೆ. ನಂತರ ಮಾರ್ಚ್ 28 ರಿಂದ ಏಪ್ರಿಲ್ 2 ರವರೆಗೆ ಸತತವಾಗಿ ನಡೆಯಲಿದೆ.

ಮಾರ್ಚ್ 21 ರಂದು ಶನಿವಾರ ಸಂಜೆ ತಮಲೂರಿನ ಶ್ರೀ ಶಾ.ಬ್ರ. ಶಿವಾನಂದ ಶಿವಾಚಾರ್ಯರಿಂದ ವಿಶೇಷ ಪ್ರವಚನ ಜರುಗಲಿದೆ ಈ ಕಾರ್ಯಕ್ರಮದ ಲಾಭ ಪಡೆದು ಕೊಳ್ಳವೇಕೆಂದು ಎಂದು ಸಂಘಟಕರು ತಿಳಿಸಿದ್ದಾರೆ.

## ಉಪ ಚುನಾವಣೆ : ನೀತಿ ಸಂಹಿತೆ ಉಲ್ಲಂಘನೆ

# ಚೆಕ್ ಪೋಸ್ಟ್‌ನಲ್ಲಿ ಹಣ ಜಪ್ತಿ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಯ ಹಿನ್ನಲೆಯಲ್ಲಿ ಕಟ್ಟುನಿಟ್ಟಿನ ತಪಾಸಣೆ ನಡೆಸುತ್ತಿರುವ ಅಧಿಕಾರಿಗಳು ನಾಯನೇಗಲಿ ಚೆಕ್‌ಪೋಸ್ಟನಲ್ಲಿ ದಾಖಲೆ ಇಲ್ಲದೇ ಸಾಗಿಸುತ್ತಿದ್ದ 15.50 ಲಕ್ಷ ರೂ.ಗಳ ಹಣವನ್ನು ಜಪ್ತಿ ಮಾಡಲಾಗಿದೆ.

ಉಪ ಚುನಾವಣೆ ಹಿನ್ನಲೆಯಲ್ಲಿ ಜಿಲ್ಲೆಯಾದ್ಯಂತ ನೀತಿ ಸಂಹಿತೆ ಜಾರಿಯಲ್ಲಿದ್ದು, ಪಿಎಂಜಿಎಸ್‌ವಾಯ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಆಕಾಶಕುಮಾರ ಜಾದವ ನೇತೃತ್ವದ ಎಫ್‌ಎಸ್‌ಟಿ ತಂಡ ಚೆಕ್‌ಪೋಸ್ಟನಲ್ಲಿ ವಾಹನಗಳ ಪರಿಶೀಲನೆ ನಡೆಸುತ್ತಿದ್ದು, ಈ ವೇಳೆ ಅನುಮಾನಾಸ್ಪದವಾಗಿ ಸಾಗಿಸಲಾಗುತ್ತಿದ್ದ ಕಾರನಲ್ಲಿ ನಗದು ಪತ್ತೆಯಾಗಿದೆ.

ಬಬಲೇಶ್ವರದಿಂದ ಕುಷ್ಟಗಿ ಕಡೆ ಹೊರಟಿದ್ದ ಕೆಎ–28, ಎಎ–4833 ನಂಬರಿನ ಮಾರುತಿ ಸುಜುಕಿ ಸಿಪ್ಪ ಡಿಸೈಯರ್ ಕಾರನ್ನು ಬುಧವಾರ ಸಂಜೆ ವೇಳೆ ತಪಾಸಣೆಗೆ ಮಾಡಿದಾಗ ದಾಖಲೆ ಇಲ್ಲದ 15.50 ಲಕ್ಷ ರೂ.ಗಳ ಹಣವನ್ನು ಜಪ್ತಿ ಮಾಡಲಾಗಿದೆ. ದಾಖಲೆಗಳ ಕೊರತೆಯಿಂದ ಹಣವನ್ನು ವಶಕ್ಕೆ ಪಡೆಯಲಾಗಿದ್ದು, ಈ ಕುರಿತು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

# ದತ್ತಿ ಉಪನ್ಯಾಸಗಳಿಂದಲೆ ಕನ್ನಡ ಬೆಳವಣಿಗೆ: ವಲಿಭಾಷ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ದತ್ತಿ ಉಪನ್ಯಾಸಗಳು ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಪರಿಚಯಿಸುವುದರೊಂದಿಗೆ ಹೊಸ ವಿಚಾರಗಳನ್ನು ತಿಳಿಸಿ ಕನ್ನಡತನವನ್ನು ಬೆಳೆಸುವ ಕಾರ್ಯ ಮಾಡುತ್ತದೆ ಎಂದು ಕರ್ನಾಟಕ ಪತ್ರಕರ್ತರ ಸಂಘದ ಬಳ್ಳಾರಿ ಜಿಲ್ಲಾಧ್ಯಕ್ಷ ಯಾಳ್ಪಿ ವಲಿಭಾಷ ಅಭಿಪ್ರಾಯಪಟ್ಟರು.

ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬಳ್ಳಾರಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಬಳ್ಳಾರಿರವರ ಸಂಯುಕ್ತಾಶ್ರಯದಲ್ಲಿ ಇಂದು ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಪ್ರೋ.ಕೆ.ಬಿ.ಹನುಮಂತರಾಯ, ಲಿಂ.ಟಿ.ಸಾವಿತ್ರಮ್ಮ ಸ್ಮಾರಕ, ಲಿಂ.ಕೆ .ಲಿಂಗನಗೌಡ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾ[illegible]ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕನ್ನಡ ಭಾಷೆ ಇಂದು ಜಾತಿ, ಧರ್ಮ ಹಾಗೂ ಗಡಿಯನ್ನು ಮೀರಿ ಬೆಳೆದಿದೆ. ಇದಕ್ಕೆ ಒಂದು ಮುಖ್ಯ ಕಾರಣವೆಂದರೆ ಕನ್ನಡ ಸಾಹಿತ್ಯ ಪರಿಷತ್ತು. ತನ್ಮೂಲಕ ಕನ್ನಡ ನಾಡು, ನುಡಿ, ಸಂಸ್ಕೃತಿ, ಕಲೆ, ಸಾಹಿತ್ಯವನ್ನು ನಿರಂತರವಾಗಿ ಪೋಷಿಸುತ್ತ ವಿವಿಧ ಕಾರ್ಯಕ್ರಮ ಮೂಲಕ ಮುಂದಿನ ತಲೆಮಾರಿಗೆ ಕನ್ನಡದ ಶ್ರೇಷ್ಠತೆಯನ್ನು ಪರಿಚಿಸುವ ಕೆಲಸವನ್ನು ಮಾಡುತ್ತಿದೆ. ಕನ್ನಡ ಸಾಹಿತ್ಯ ಸಮ್ಮೇಳನಗಳು, ಕವಿಗೋಷ್ಠಿ ಇನ್ನಿತರ ಕಾರ್ಯಕ್ರಮಗಳು ನಡೆದು ಕನ್ನಡ ಭಾಷೆ ಇನ್ನೂ ಬೆಳವಣಿಗೆ ಕಾಣುವುದರೊಂದಿಗೆ ಕನ್ನಡ ಭಾಷೆ ತನ್ನ ಅಸ್ಮಿತೆಯನ್ನು ಕನ್ನಡಿಗರಿಗೆ ತೋರಿಸಲಿ ಎಂದರಲ್ಲದೇ,

ವಿದ್ಯಾರ್ಥಿಗಳು ಬಾಲ್ಯದಿಂದಲೇ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ಪುಸ್ತಕಗಳು, ವೃತ್ತ ಪತ್ರಿಕೆಗಳನ್ನು ಓದುವುದರಿಂದ ಹೊಸ ವಿಚಾರಗಳನ್ನು ತಿಳಿದುಕೊಳ್ಳಲು ಸಾಧ್ಯ. ಯಾವುದೇ ಕಾರ್ಯಕ್ರಮ, ಸ್ಪರ್ಧೆಯಾದರೂ ಅದರಲ್ಲಿ ಭಾಗವಹಿಸುವ ಗುಣವನ್ನು ಬೆಳೆಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ನಿಷ್ಠಿರುದ್ರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ನೈತಿಕಮೌಲ್ಯಗಳನ್ನು ರೂಢಿಸಿಕೊಳ್ಳುವಲ್ಲಿ ವಚನಗಳ ಪಾತ್ರ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅಖಂಡ ಬಳ್ಳಾರಿ ಜಿಲ್ಲೆಯ ಅಧ್ಯಕ್ಷರಾದ ಡಾ.ನಿಷ್ಠಿರುದ್ರಪ್ಪ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಚಾರ್ಯರಾದ ಡಾ.ಕೆ.ವಿ.ಪ್ರಜ್ಞಾ, ಕೆಪಿಎಸ್ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಡಾ.ಶ್ರೀನಿವಾಸಮೂರ್ತಿ, ದತ್ತಿ ದಾನಿಗಳಾದ ಕೆ.ಬಿ.ಸಂಜೀವಪ್ರಸಾದ್, ಟಿ.ಸಿ.ಗೌಡ, ಕೆ.ಸಿದ್ಧರಾಮಪ್ಪ, ಡಾ.ಕೆ. ಮಲ್ಲಿಕಾರ್ಜುನ, ಡಾ.ಲೋಕೇಶ್, ಕೆ.ವಿ.ಚಂದ್ರಹಾಸ, ಮುಂಡಾಸದ ಮಲ್ಲಿಕಾರ್ಜುನ, ಎಮ್ಮಿಗನೂರು ಜಡೇಶ, ಕಪ್ಪಗಲ್ಲು ಚಂದ್ರಶೇಖರ್ ಆಚಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ನೀರಾವರಿ ಸಭೆಯಲ್ಲಿ ರಾಜ್ಯಸಭಾ ಸದಸ್ಯರು ಭಾಗಿ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ರಾಜ್ಯಸಭಾ ಸದಸ್ಯರಾದ ಡಾ. ಸೈಯದ್ ನಾಸೀರ್ ಹುಸೇನ್ ಅವರು ಕರ್ನಾಟಕ ಭವನದಲ್ಲಿ ನಡೆದ ಮಹತ್ವದ ನೀರಾವರಿ ಯೋಜನೆಗಳ ಕುರಿತು ಆಯೋಜಿಸಿದ್ದ ಸಭೆಯಲ್ಲಿ ಭಾಗವಹಿಸಿದರು. ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಈ ಸಭೆ ನಡೆಯಿತು.

ಈ ಸಭೆಯಲ್ಲಿ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸ್ ರಾಜು, ನವದೆಹಲಿಯಲ್ಲಿ ಕರ್ನಾಟಕದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ ಹಾಗೂ ಕಾನೂನು ತಜ್ಞರ ತಂಡ ಭಾಗವಹಿಸಿದ್ದರು.

ಯುಕೆಪಿ–3, ಮೇಕೆದಾಟು ಮತ್ತು ಮಹಾದಾಯಿ ಸೇರಿದಂತೆ ಪ್ರಮುಖ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಅನುಮೋದನೆಗಳನ್ನು ಪಡೆಯುವ ಬಗ್ಗೆ ಚರ್ಚೆಗಳು ಗಮನಹರಿಸಿದವು. ಈ ಸರ್ವಪಕ್ಷ ನಿಯೋಗವು ಗೌರವಾನ್ವಿತ ಪ್ರಧಾನ ಮಂತ್ರಿ ಮತ್ತು ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಿ ಅಗತ್ಯ ಅನುಮೋದನೆಗಳಿಗಾಗಿ ಒತ್ತಾಯಿಸಲು ಸಜ್ಜಾಗಿದ್ದು, ಒಗ್ಗಟ್ಟಿನ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು.

# ಸಾಮ್ರಾಜ್ಯಶಾಹಿ ಧೋರಣೆಯೇ ಯುದ್ಧಕ್ಕೆ ಕಾರಣ: ರವಿ




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಇಂದಿನ ಜಗತ್ತಿನಲ್ಲಿ ಸಾಮ್ರಾಜ್ಯಶಾಹಿ ಧೋರಣೆ ಹಾಗೂ ವಸಾಹತುಶಾಹಿಗಳು ವ್ಯಾಪಾರ ಮತ್ತು ಸಂಪತ್ತಿನ ಲೂಟಿಗಾಗಿ ಯುದ್ಧಕ್ಕೆ ಕಾರಣವಾಗುತ್ತಿದ್ದಾರೆ. ಯುದ್ಧದ ಮೂಲಕ ಅಪಾರ ಜೀವ ಸಂಕುಲದ ನಾಶಕ್ಕೆ ನಾಂದಿಯಾಡುತಿದ್ದಾರೆ ಎಂದು ( ಸಿಪಿಡಿಆರ್ ಎಸ್) ಜನತಾಂತ್ರಿಕ ಹಕ್ಕುಗಳು ಮತ್ತು ಧರ್ಮಾತೀತ ರಕ್ಷಣಾ ಕೇಂದ್ರದ ರಾಜ್ಯ ಸಂಚಾಲಕ ಎನ್. ರವಿ ಅಭಿಪ್ರಾಯ ಪಟ್ಟರು.

ನಗರದ ಸರಳಾದೇವಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜನತಾಂತ್ರಿಕ ಹಕ್ಕುಗಳು ಮತ್ತು ಧರ್ಮಾತೀತ ರಕ್ಷಣಾ ಕೇಂದ್ರ ಹಾಗೂ ರಾಜ್ಯಶಾಸ್ತ್ರ ಸ್ನಾತಕೋತ್ತರ ವಿಭಾಗದ ಆಶ್ರಯದಲ್ಲಿ ಆಯೋಜಿಸಿದ್ದ

'ಯುದ್ಧ ಮತ್ತು ಶಾಂತಿ ' ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಳೆದ ಒಂದುವರೆ ದಶಕದಿಂದ ವಿಶ್ವದಲ್ಲೆಡೆ ಯುದ್ಧವು ಸಾಮಾನ್ಯ ಸಂಗತಿಯಾಗಿದೆ. ಇದಕ್ಕೆ ಶ್ರೀಮಂತ ರಾಷ್ಟಗಳಲ್ಲಿರುವ ಅತೀ ಹೆಚ್ಚು ಯುದ್ಧೋಪಕರಣಗಳ ಸಂಗ್ರಹವು ಆಧಾರವಾಗಿದ್ದು, ಲಕ್ಷಾಂತರ ಮುಗ್ಧ ಮಕ್ಕಳು ಸೇರಿದಂತೆ ಸಾಮಾನ್ಯ ಜನರ ಜೀವಕ್ಕೆ ಬೆಲೆಯೇ ಇಲ್ಲದಾಗಿದೆ. ಇದಕ್ಕೆ ಸಾಮ್ರಾಜ್ಯಶಾಹಿ ಧೋರಣೆ ಹಾಗೂ ಬಂಡವಾಳಶಾಹಿಗಳ ದುರಾಸೆಯೇ ಬಲವಾದ ಕಾರಣವೆಂದು ಬೇಸರ ವ್ಯಕ್ತಪಡಿಸಿದರು.

ಅಮೇರಿಕಾದ ಅಧ್ಯಕ್ಷ ಟ್ರಂಪ್ ಇತ್ತೀಚೆಗೆ ಬೌದ್ಧಿಕ ಸ್ಥಿಮಿತತೆ ಕಳೆದುಕೊಂಡಿದ್ದು ಇರಾನ್ ಯುದ್ಧಕ್ಕೆ ದಿನಕ್ಕೊಂದ್ದು ಕಾರಣ ಕೊಡುತ್ತಿರುವುದು ವಿಷಾದನೀಯ. ಹೀಗಾಗಿ ವಿಶ್ವದ ಯಾವುದೇ ದೇಶ ಟ್ರಂಪ್ ಗೆ ಬೆಂಬಲ ನೀಡುತ್ತಿಲ್ಲ. ಸ್ವ ಹಿತಾರಕ್ಷಣೆಗೆ ನಡೆಯುತ್ತಿರುವ ಯುದ್ಧದ ದುಷ್ಪರಿಣಾಮ ಅಪಾರವಾಗಿದ್ದು, ಜೀವವಿರೋಧಿ ನೀತಿ ಮಾನವ ವಿನಾಶಕ್ಕೆ ಮೂಲವಾಗುತ್ತಿದೆ. ಬಹಳ ಮುಖ್ಯವಾಗಿ ಅಮೇರಿಕಾದ ವ್ಯಾಪಾರ ಸಾಮ್ರಾಜ್ಯಶಾಹಿ ನೀತಿಯನ್ನು ಪ್ರತಿಯೊಂದು ದೇಶ ತೀವ್ರವಾಗಿ ವಿರೋಧಿಸಬೇಕಾದ ಅಗತ್ಯವಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಹೊನ್ನೂರಾಲಿ ಜನಸಾಮಾನ್ಯರಿಗೆ ಯುದ್ಧದ ದುಷ್ಪರಿಣಾಮಗಳ ಬಗೆಗೆ ಅರಿವಿಲ್ಲ. ದಿನಬಳಕೆಯ ವಸ್ತುಗಳ ಬೆಲೆ ಹೇರಿಕೆಯ ಬಿಸಿ ತಟ್ಟಿದಾಗ ಜನರು ಯುದ್ಧ ಬೇಡ ಎನ್ನುತ್ತಾರೆ. ಹೊಸ ತಲೆಮಾರಿಗೆ ಜಾಗೃತಿ ಮೂಡಿಸುವ ಕೆಲಸ ಜರೂರಿದೆ. ಮಾನವ ವಿರೋಧಿ ಸಾಮಾಜಿಕ ಜಾಲ ತಾಣಗಳ ತಪ್ಪು ಮಾಹಿತಿಗಳನ್ನು ನಂಬಿ ಯುದ್ಧೋನ್ಮಾದ ಅನುಭವಿಸಿದ್ದು ತಪ್ಪು. ಹೀಗಾಗಿ ಯುದ್ಧ ಪಿಪಾಸೆಗಳಿಗೆ ರಾಜಾತಿಥ್ಯ ದೊರೆಯುತ್ತಿರುವುದು ವಿಷಾದನೀಯ ಎಂದರು. ಕಾರ್ಯಕ್ರಮದಲ್ಲಿ ವಕೀಲರಾದ ಸೋಮಶೇಖರ್ ಗೌಡ ಪ್ರಸ್ತಾವಿಕವಾಗಿ ಮಾತನಾಡಿದರು.

ವೇದಿಕೆಯ ಮೇಲೆ ಪ್ರಾಧ್ಯಾಪಕರಾದ ಡಾ. ಹುಚ್ಚೂಸಾಬ್, ಬಸವರಾಜ್, ಅತಿಥಿ

ಉಪನ್ಯಾಸಕರಾದ ಡಾ.ದುರುಗಪ್ಪ, ಗೋವಿಂದಪ್ಪ, ಶ್ರೀನಿವಾಸ್ ಇದ್ದರು.

# ಕೇಶವ್ ಬಲಿರಾಮ್ ಹೆಡ್ಗೆವಾರ್ ಜಯಂತಿ



• ಮಲ್ಲಮ್ಮನ ನುಡಿ, ಹಗರಿಬೊಮ್ಮನಹಳ್ಳಿ

ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಸಿಬಿಎ ಹಗರಿಬೊಮ್ಮನಹಳ್ಳಿಯಲ್ಲಿ ದಿನಾಂಕ 20.03.2026ರಂದು ಕೇಶವ ಬಲಿರಾಮ ಹೆಡ್ಗೇವಾರ್ ಜಯಂತಿಯನ್ನು ಆಚರಿಸಲಾಯಿತು. ಶಾಲೆಯ ದೈಹಿಕ ಶಿಕ್ಷಕರಾದ ಶ್ರೀ ಮಧುಕರ್ ಅವರು ಡಾಕ್ಟರ್ ಕೇಶವ ಬಲಿರಾಮ್ ಹೆಡ್ಗೆವಾರ ಬಗ್ಗೆ ಮಾತನಾಡುತ್ತಾ " ಅವರು ಭಾರತದ ಮಹಾನ್ ದೇಶಭಕ್ತರು ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಸ್ಥಾಪಕರಾಗಿದ್ದರು. ಅವರು 1889ರ ಏಪ್ರಿಲ್ 1ರಂದು ಮಹಾರಾಷ್ಟ್ರದ ನಾಗಪುರದಲ್ಲಿ ಜನಿಸಿದರು.

ಹೆಡ್ಗೇವಾರ್ ಅವರು ಬಾಲ್ಯದಿಂದಲೇ ದೇಶಭಕ್ತಿಯ ಮನೋಭಾವವನ್ನು ಹೊಂದಿದ್ದರು. ಭಾರತದ ಸ್ವಾತಂತ್ರ್ಯಕ್ಕಾಗಿ ಅವರು ತಮ್ಮ ಜೀವನವನ್ನು ಸಮರ್ಪಿಸಿಕೊಂಡರು. ಸಮಾಜದಲ್ಲಿ ಏಕತೆ, ಶಿಸ್ತು ಮತ್ತು ದೇಶಪ್ರೇಮವನ್ನು ಬೆಳೆಸುವ ಉದ್ದೇಶದಿಂದ 1925ರಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಸ್ಥಾಪಿಸಿದರು.ಅವರ ಆದರ್ಶಗಳು ಯುವಜನತೆಗೆ ಪ್ರೇರಣೆಯಾಗಿದೆ " ಎಂದರು. ದೇಶದ ಅಭಿವೃದ್ಧಿಗೆ ಶಿಸ್ತಿನ ಜೀವನ ಮತ್ತು ಸೇವಾ ಮನೋಭಾವ ಅತ್ಯವಶ್ಯಕ ಎಂಬ ಸಂದೇಶವನ್ನು ಸಾರಿದರು.

# ಕಾಲೇಜ್ ಮಾನ್ಯತೆ ರದ್ದಿಗೆ ರಾಜ್ಯಪಾಲರಿಗೆ ಎಬಿವಿಪಿ ಮನವಿ



ಬಳ್ಳಾರಿ: ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವಿದ್ಯಾರ್ಥಿ ಸ್ನೇಹಿ ಕ್ಯಾಂಪಸ್ ನಿರ್ಮಾಣ ಮಾಡುವ ಮಹತ್ತರ ಆಶಯವನ್ನು ಹೊಂದಿ ಆ ದಿಶೆಯಲ್ಲಿ ಸ್ವಚ್ಛ ಹಾಗೂ ಸ್ವಸ್ಥ ಸಮಾಜ ನಿರ್ಮಾಣಕ್ಕಾಗಿ ನಶಾಮುಕ್ತ ಕ್ಯಾಂಪಸ್ ಎನ್ನುವ ಜಾಗೃತಿ ಅಭಿಯಾನವನ್ನು ಕಳೆದ ಅನೇಕ ವರ್ಷಗಳಿಂದ ಮಾಡುತ್ತಾ ಬಂದಿದೆ.ಆದರೆ ಹಲವು ದಿನಗಳ ಹಿಂದೆ ಬಳ್ಳಾರಿಯ ಪ್ಯುಪಿಲ್ ಟ್ರೀ ಪಿ.ಯು ಕಾಲೇಜಿನ ಆವರಣದಲ್ಲಿ ವಿದ್ಯಾರ್ಥಿನಿಯರು ಮಾದಕ ದ್ರವ್ಯ ಸೇವನೆ ಮಾಡುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ವಿದ್ಯಾರ್ಥಿ ಪರಿಷತ್ ಎರಡು –ಮೂರು ಬಾರಿ ಕಾಲೇಜಿನ ಆಡಳಿತ ಮಂಡಳಿ ಗಮನಕ್ಕೆ ತಂದರು ಎಚ್ಚೆತ್ತುಕೊಳ್ಳದ ಕಾರಣ ಆಡಳಿತ ಮಂಡಳಿ ವಿರುದ್ಧ ಪ್ರತಿಭಟನೆ ಮಾಡಿದ್ದೇವೆ.ಆ ಸಂದರ್ಭದಲ್ಲಿ ಎಬಿವಿಪಿ ಕಾರ್ಯಕರ್ತರನ್ನು ನಿಂದಿಸಿ ಹಲ್ಲೆಯನ್ನು ಮಾಡಿದ್ದಾರೆ.ಹಾಗಾದರೆ ಆ ವಿದ್ಯಾರ್ಥಿಗಳಿಗೆ ಹೇರಳವಾಗಿ ಹೇಗೆ ಮಾದಕ ವಸ್ತುಗಳ ಪೂರೈಕೆಯಾಗುತ್ತಿದೆ ? ಈ ಹಿಂದೆಯೂ ಆ ಕಾಲೇಜಿನಲ್ಲಿ ಗಾಂಜಾ ಹಾಗೂ ಮಾದಕ ವಸ್ತುಗಳ ಪೂರೈಕೆಯಾಗಿರುವ ಬಗ್ಗೆ ಮಾಹಿತಿ ಇತ್ತು. ವಿದ್ಯಾರ್ಥಿನಿಯರು ಮದ್ಯೆ ಸೇವನೆ ಮಾಡಿ ಬಾಟಲ್ ಶೌಚಾಲಯದಲ್ಲಿ ಎಸೆದಿರುವ ಪ್ರಕರಣ,ಅದೆ ಕಾಲೇಜಿನ ವಿದ್ಯಾರ್ಥಿಗಳು ಸಹಪಾಠಿ ವಿದ್ಯಾರ್ಥಿನಿಗೆ ಪಾನಿಯದಲ್ಲಿ ಮಾದಕ ವಸ್ತು ಮಿಶ್ರಣ ಮಾಡಿ ಸೇವಿಸಲು ಒತ್ತಾಯಿಸಿ ಅತ್ಯಾಚಾರ ಮಾಡಲು ಪ್ರಯತ್ನಿಸಿದ್ದಾರೆ.ಈ ರೀತಿ ಅನೇಕ ವಿದ್ಯಾರ್ಥಿ ವಿರೋಧಿ ಚಟುವಟಿಕೆಗಳು ಆ ಕಾಲೇಜಿನಲ್ಲಿ ನಡೆಯುತ್ತಿದ್ದರು ಆಡಳಿತ ಮಂಡಳಿ ಎಚ್ಚೆತ್ತುಕೊಳ್ಳತ್ತಿಲ್ಲ.ಹೀಗಾಗಿ ಆ ಕಾಲೇಜಿನ ಮಾನ್ಯತೆಯನ್ನು ರದ್ದು ಮಾಡಿ ಒಂದು ಮಾದರಿ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು. ಕಾಲೇಜುಗಳಲ್ಲಿ ಮಾದಕ ವಸ್ತುಗಳ ಬಳಕೆಗೆ ಕಡಿವಾಣ ಹಾಕಲು ಹಾಗೂ ಜಾಗೃತಿ ಮೂಡಿಸಲು ವೈದ್ಯರನ್ನೊಳಗೊಂಡ ಸಮಿತಿ ರಚಿಸಿ ನಶಾಮುಕ್ತ ಕ್ಯಾಂಪಸ್ ಮಾಡಲು ಮುನ್ನುಡಿಯನ್ನು ಬರೆಯಬೇಕೆಂದು ರಾಜ್ಯಪಾಲ ಥಾವರಚಂದ್ ಗೆಹ್ಲೋಟ ಅವರಿಗೆ ಮನವಿ ಮಾಡಿದೆ.

# ದತ್ತಿ ಉಪನ್ಯಾಸದಿಂದ ಕನ್ನಡ ಬೆಳವಣಿಗೆ: ಯಾಳ್ಪಿ ವಲಿಭಾಷ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ದತ್ತಿ ಉಪನ್ಯಾಸಗಳು ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಪರಿಚಯಿಸುವುದರೊಂದಿಗೆ ಹೊಸ ವಿಚಾರಗಳನ್ನು ತಿಳಿಸಿ ಕನ್ನಡತನವನ್ನು ಬೆಳೆಸುವ ಕಾರ್ಯ ಮಾಡುತ್ತದೆ ಎಂದು ಕರ್ನಾಟಕ ಪತ್ರಕರ್ತರ ಸಂಘದ ಬಳ್ಳಾರಿ ಜಿಲ್ಲಾಧ್ಯಕ್ಷ ಯಾಳ್ಪಿ ವಲಿಭಾಷ ಅಭಿಪ್ರಾಯಪಟ್ಟರು.

ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬಳ್ಳಾರಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಬಳ್ಳಾರಿರವರ ಸಂಯುಕ್ತಾಶ್ರಯದಲ್ಲಿ ಇಂದು ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಪ್ರೋ.ಕೆ.ಬಿ.ಹನುಮಂತರಾಯ, ಲಿಂ.ಟಿ.ಸಾವಿತ್ರಮ್ಮ ಸ್ಮಾರಕ, ಲಿಂ.ಕೆ.ಲಿಂಗನಗೌಡ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಭಾಷೆ ಇಂದು ಜಾತಿ, ಧರ್ಮ ಹಾಗೂ ಗಡಿಯನ್ನು ಮೀರಿ ಬೆಳೆದಿದೆ. ಇದಕ್ಕೆ ಒಂದು ಮುಖ್ಯ ಕಾರಣವೆಂದರೆ ಕನ್ನಡ ಸಾಹಿತ್ಯ ಪರಿಷತ್ತು. ತನ್ಮೂಲಕ ಕನ್ನಡ ನಾಡು, ನುಡಿ, ಸಂಸ್ಕೃತಿ, ಕಲೆ, ಸಾಹಿತ್ಯವನ್ನು ನಿರಂತರವಾಗಿ ಪೋಷಿಸುತ್ತ ವಿವಿಧ ಕಾರ್ಯಕ್ರಮ ಮೂಲಕ ಮುಂದಿನ ತಲೆಮಾರಿಗೆ ಕನ್ನಡದ ಶ್ರೇಷ್ಠತೆಯನ್ನು ಪರಿಚಿಸುವ ಕೆಲಸವನ್ನು ಮಾಡುತ್ತಿದೆ.

ಕನ್ನಡ ಸಾಹಿತ್ಯ ಸಮ್ಮೇಳನಗಳು, ಕವಿಗೋಷ್ಠಿ ಇನ್ನಿತರ ಕಾರ್ಯಕ್ರಮಗಳು ನಡೆದು ಕನ್ನಡ ಭಾಷೆ ಇನ್ನೂ ಬೆಳವಣಿಗೆ ಕಾಣುವುದರೊಂದಿಗೆ ಕನ್ನಡ ಭಾಷೆ ತನ್ನ ಅಸ್ಮಿತೆಯನ್ನು ಕನ್ನಡಿಗರಿಗೆ ತೋರಿಸಲಿ ಎಂದರಲ್ಲದೇ, ವಿದ್ಯಾರ್ಥಿಗಳು ಬಾಲ್ಯದಿಂದಲೇ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ಪುಸ್ತಕಗಳು,

ವೃತ್ತಪತ್ರಿಕೆಗಳನ್ನು ಓದುವುದರಿಂದ ಹೊಸ ವಿಚಾರಗಳನ್ನು ತಿಳಿದುಕೊಳ್ಳಲು ಸಾಧ್ಯ. ಯಾವುದೇ ಕಾರ್ಯಕ್ರಮ, ಸ್ಪರ್ಧೆಯಾದರೂ ಅದರಲ್ಲಿ ಭಾಗವಹಿಸುವ ಗುಣವನ್ನು ಬೆಳೆಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ನಿಷ್ಠಿರುದ್ರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ನೈತಿಕ ಮೌಲ್ಯಗಳನ್ನು ರೂಢಿಸಿಕೊಳ್ಳುವಲ್ಲಿ ವಚನಗಳ ಪಾತ್ರ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅಖಂಡ ಬಳ್ಳಾರಿ ಜಿಲ್ಲೆಯ ಅಧ್ಯಕ್ಷರಾದ ಡಾ.ನಿಷ್ಠಿರುದ್ರಪ್ಪ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಚಾರ್ಯರಾದ ಡಾ.ಕೆ.ವಿ.ಪ್ರಜ್ಞಾ, ಕೆಪಿಎಸ್ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಡಾ.ಶ್ರೀನಿವಾಸಮೂರ್ತಿ,

ದತ್ತಿದಾನಿಗಳಾದ ಕೆ.ಬಿ.ಸಂಜೀವಪ್ರಸಾದ್, ಟಿ.ಸಿ.ಗೌಡ, ಕೆ.ಸಿದ್ಧರಾಮಪ್ಪ, ಡಾ.ಕೆ. ಮಲ್ಲಿಕಾರ್ಜುನ, ಡಾ.ಲೋಕೇಶ್, ಕೆ.ವಿ.ಚಂದ್ರಹಾಸ, ಮುಂಡಾಸದ ಮಲ್ಲಿಕಾರ್ಜುನ, ಎಮ್ಮಿಗನೂರು ಜಡೇಶ, ಕಪ್ಪಗಲ್ಲು ಚಂದ್ರಶೇಖರ್ ಆಚಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಒಳ ಮೀಸಲಾತಿ ರದ್ದಿಗೆ ಆಗ್ರಹಿಸಿ ಮಾ.24 ರಂದು ಬೃಹತ್ ಪ್ರತಿಭಟನೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಎಸ್ಸಿ ಒಳ ಮೀಸಲಾತಿಯಲ್ಲಿ ಸಿ.ಕೆಟಗೆರಿಯಿಂದ ಕೊರಚ–ಕೊರಮ, ಲಂಬಾಣಿ, ಭೋವಿ ಸಮಾಜಗಳನ್ನು ಒಳಗೊಂಡ 65 ಜಾತಿಗಳಿಗೆ ತೀವ್ರ ಅನ್ಯಾಯವಾಗುತ್ತಿದೆ. ಅದಕ್ಕಾಗಿ ಒಳಮೀಸಲಾತಿ ರದ್ದುಮಾಡಿ ಈ ಹಿಂದಿನ ಮೀಸಲಾತಿಯಂತೆ ನೇಮಕಾತಿ ಮಾಡಬೇಕೆಂದು ಮಾ.24 ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ.

ಈ ಕುರಿತು ಕರ್ನಾಟಕ ರಾಜ್ಯ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಜಿಲ್ಲಾ ಘಟಕ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ತಿಳಿಸಿದೆ. ಎ.ಬಿ.ಸಿ ವರ್ಗೀಕರಣದಲ್ಲಿ ನಡೆಯುವ ನೇಮಕಾತಿಯಿಂದ ನಮ್ಮ ಸಮಾಜಕ್ಕೆ ಮೀಸಲಾತಿ ದೊರೆಯುವುದೇ ದುರ್ಲಬ ಆಗುತ್ತದೆ. ಇತ್ತೀಚೆಗೆ ಧಾರವಾಡ ವಿವಿ. ಅರೋಗ್ಯ ವಿಶ್ವವಿದ್ಯಾಲಯ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಆರೋಗ್ಯ ಇಲಾಖೆಗಳಲ್ಲಿ ನಡೆಸಲಾದ ನೇಮಕಾತಿಗಳಲ್ಲಿ ಸಿಗುಂಪಿಗೆ ಅನ್ಯಾಯ ಆಗಲಿದೆಂದು ಹೇಳಿದಾಗ ಸರ್ಕಾರ ತನ್ನ ನಿರ್ಧಾರ ಬದಲಿಸಿದೆ.

ಒಳ ಮೀಸಲಾತಿಯನ್ನು ಜಾರಿಗೊಳಿಸಲು ರೂಪಿಸಿದ ರೋಸ್ಟರ್ ಕೋಷ್ಟಕ ದೋಷಪೂರ್ಣವಾಗಿದ್ದು, ಅದನ್ನು ರದ್ದು ಮಾಡಿ ಮೂರು ಪ್ರವರ್ಗಗಳಿಗೂ ಸಮಾನವಾಗಿ ನ್ಯಾಯ ಸಿಗುವ ರೀತಿಯಲ್ಲಿ ಪರಿಷ್ಕೃತ ಆದೇಶವನ್ನು ಹೊರಡಿಸಬೇಕು. ಅಲ್ಲಿಯವರೆಗೆ ಎಲ್ಲಾ ಹುದ್ದೆಗಳ ನೇಮಕಾತಿ ಮಾಡಲು ಹಳೆಯ ಮೀಸಲಾತಿಯ ಜಾರಿಗೊಳಿಸಲು ಆಳವಡಿಸಿಕೊಂಡಿದ್ದ ರೊಸ್ಟರ್ ಪದ್ಧತಿಯನ್ನೇ ಮುಂದುವರಿಸಬೇಕು.

ಒಳಮೀಸಲಾತಿ ರದ್ದುಪಡಿಸಿ ಹಿಂದೆ ಇರುವಂತಹ ವ್ಯವಸ್ಥೆಯನ್ನು ಮುಂದುವರೆಸಿ, ನೇಮಕಾತಿಯನ್ನು ಮಾಡಬೇಕು. ಎಬಿಸಿ ವರ್ಗಗಳನ್ನು ರದ್ದುಗೊಳಿಸಿ ಈ ಹಿಂದೆ ಇರುವಂತ ವ್ಯವಸ್ಥೆಯಲ್ಲಿ ನೇಮಕಾತಿಯನ್ನು ಮಾಡಬೇಕು. ಕೇಂದ್ರ ಸರ್ಕಾರ ಜನಗಣತಿಯನ್ನು ಪ್ರಾರಂಭ ಮಾಡಿದೆ. ಜನಗಣತಿ ಸಂಪೂರ್ಣ ಮುಗಿಯುವವರೆಗೂ ಅವೈಜ್ಞಾನಿಕವಾಗಿ ಮಾಡಿದ ಒಳ ಮೀಸಲಾತಿಯನ್ನು ರದ್ದುಪಡಿಸಿ, ಕೇಂದ್ರ ಜನಗಣತಿ ಅಂಕಿ–ಅಂಶಗಳು ಬಂದ ನಂತರ ಸಂಖ್ಯೆಗನುಗುಣವಾಗಿ ಮೀಸಲಾತಿಯ ವಿಂಗಡಣೆ ಮಾಡಿದರೆ ಸಮಾಜಕ್ಕೆ ನ್ಯಾಯ ದೊರಕಿದಂತಾಗುತ್ತದೆ.

ದೇಶವ್ಯಾಪಿ ನಡೆಯಲಿರುವ ಜನಗಣತಿಯ ದತ್ತಾಂಶ ಬರುವವರಿಗೆ ಏಕಪಕ್ಷೀಯ ನಿರ್ಧಾರ ಮಾಡಬಾರದು. ರಾಜ್ಯದಲ್ಲಿ ಒಳ ಮೀಸಲಾತಿ ಹಂಚಿಕೆಯ ಪ್ರಕ್ರಿಯೆ ನಡೆಸುವ ಮುನ್ನ ಸಮುದಾಯಗಳ ಮುಖಂಡರೊಂದಿಗೆ ಸಮಾಲೋಚನೆ ನಡೆಸಬೇಕು. ಶೈಕ್ಷಣಿಕ, ವಸತಿ ನಿಲಯ ಪ್ರವೇಶ, ನೇಮಕಾತಿಗೆ ರೋಸ್ಟರ್ ಹಂಚಿಕೆ ಮಾಡಿ ಹೊರಡಿಸಿರುವ ಎಲ್ಲಾ ಆದೇಶಗಳನ್ನು, ಸುತ್ತೋಲೆಗಳನ್ನು ಹಿಂಪಡೆಯಬೇಕ ಈಗಾಗಲೇ ಹೊರಡಿಸಿರುವ ವಿವಿಧ ನೇಮಕಾತಿ ಅಧಿಸೂಚನೆಗಳನ್ನು ರದ್ದುಗೊಳಿಸಬೇಕು. ಹಳೆಯ ಜಾತಿ ಪ್ರಮಾಣ ಪತ್ರಗಳನ್ನು ಪರಿಗಣಿಸಬೇಕು ಎಂದು ಆಗ್ರಹಿಸಲಿದೆ.ಪ್ರತಿಭಟನೆಗೆ ಬಳ್ಳಾರಿ ಜಿಲ್ಲಾ ಕೊಲಂಭೋ ಸಮಾಜದಿಂದ 2 ಸಾವಿರಕ್ಕೂ ಹೆಚ್ಚು ಜನ ತೆರಳಲಿದೆಂದು ಒಕ್ಕೂಟದ ಗೌರವ ಅಧ್ಯಕ್ಷ ಡಾ.ಹನುಮಂತಪ್ಪ, ಅಧ್ಯಕ್ಷ ರಾಮುನಾಯ್ಕ, ಕಾರ್ಯದರ್ಶಿ ಮಹೇಶ್, ಭೋವಿ ಸಮಾಜದ ಜಿಲ್ಲಾ ಅಧ್ಯಕ್ಷ ವಿ.ರಾಮಾಂಜನೇಯಲು, ಲಂಬಾಣಿ ಸಮಾಜದ ಗೋಪಿನಾಯ್ಕ, ಡಾ.ಎಂ.ಟಿ.ಮಲ್ಲೇಶ್, ದೇವಣ್ಣ, ರಂಗಸ್ವಾಮಿ, ಪ್ರಕಾಶ್, ಹುಲುಗಪ್ಪ, ಸಂತೋಷ್ ಮೊದಲಾದವರು ಇದ್ದರು.

# ಒಳ ಮೀಸಲಾತಿ ಜಾರಿ ವಿರೋಧಿಸಿ ಪ್ರತಿಭಟನೆ



• ಮಲ್ಲಮ್ಮ ನುಡಿ ವಾರ್ತೆ ಬೀದರ್

ಈ ತಿಂಗಳ 27ರಂದು ರಾಜ್ಯ ಸಚಿವ ಸಂಪುಟವು ಒಳ ಮೀಸಲಾತಿ ಜಾರಿ ಮಾಡಲು ಹೊರಟಿರುವ ವಿಷಯ ನಮ್ಮ ಗಮನಕ್ಕೆ ಬಂದಿದ್ದು, ಇದನ್ನು ವಿರೋಧಿಸಿ ಮಾ.24ರಂದು ಮಂಗಳವಾರ ರಾಜ್ಯ ರಾಜ್ಯಧಾನಿ ಬೆಂಗಳೂರಿನ ಫ್ರಿಡಮ್ ಪಾರ್ಕ್ನಲ್ಲಿ ಬಂಜಾರಾ, ಭೋವಿ ವಡ್ಡರ್, ಕೊರವ ಹಾಗೂ ಕೊರಚ ಸಮುದಾಯಗಳಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಬಂಜಾರಾ ಸಮಾಜದ ಅಧ್ಯಕ್ಷರಾದ ಬಸವರಾಜ ಪವಾರ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಬಾಗಲಕೋಟೆ ಪೂಜ್ಯ ಸಿದ್ರಾಮೇಶ್ವರ ಸ್ವಾಮಿಜಿ ಹಾಗೂ ಚಿತ್ರದುರ್ಗದ ಪೂಜ್ಯ ಬಸವ ಸರ್ದಾರ ಸೇವಾಲಾಲ ಮಹಾರಾಜರ ನೇತೃತ್ವದಲ್ಲಿ ಮೇಲಿನ ನಾಲ್ಕು ಸಮುದಾಯಗಳ ಬಾಂಧವರು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸುವರು ಎಂದರು.

ರಾಜ್ಯ ಸರ್ಕಾರ ಈಗಾಗಲೇ ನಿವೃತ್ತ ನ್ಯಾಯಮೂರ್ತಿ ನಾಗಮೊಹನದಾಸ ಅವರ ವರದಿ ಆಧರಿಸಿ ಒಳ ಮೀಸಲಾತಿ ಜಾರಿ ಮಾಡಲು ಹೊರಟಿರುವುದು ದೊಡ್ಡ ದುರಂತ. ನಿಜ ಹೇಳಬೇಕೆಂದರೆ ನಾಗಮೊಹನದಾಸ ವರದಿ ಜಾರಿ ಮಾಡಿದರೆ ನಮ್ಮೆಲ್ಲರಿಗೆ ರಾಜ್ಯ ಸರ್ಕಾರ ಮರಣ ಶಾಸನ ಮಾಡಿದಂತೆ. ಏಕೆಂದರೆ ನಾಗಮೊಹನದಾಸ ಅವರು ಯಾವೊಂದು ಲಂಬಾಣಿ, ವಡ್ಡರ್, ಕೊವ ಓಣಿಗೆ ಹೋಗದೆ ಕೂತಲ್ಲಿಯೆ ತಪ್ಪು ಡಾಟಾ ಸಂಗ್ರಹಿಸಿ ಈ ನಾಲ್ಕು ಸಮುದಾಯಗಳ ಕಡಿಮೆ ಜನಸಂಖ್ಯೆ ತೋರಿಸಿರುವರು. ಇದೊಂದು ಕಡೆಯಾದರೆ ರಾಜ್ಯ ಸರ್ಕಾರ 6+6+5=17 ಪ್ರತಿಶತ ಮೀಸಲಾತಿ ಹೆಚ್ಚಿಸಿದಲ್ಲದೆ ಎ, ಬಿ ಹಾಗೂ ಸಿ ಎಂದು ಮೂರು ವಿಧದಲ್ಲಿ ವರ್ಗಿಕರಣ ಮಾಡಿ ಒಂದು ಜಾತಿ ಬಿಟ್ಟು ಪರಿಶಿಷ್ಟ ಯಾದಿಯ 100 ಜಾತಿಗಳಿಗೆ ಅನ್ಯಾಯ ಮಾಡಲು ಹೊರಟಿದೆ ಎಂದರು.

ಇದೆ ಮೊದಲ ಬಾರಿಗೆ ರಾಜ್ಯ ಸಚಿವ ಸಂಪೂಟದಲ್ಲಿ ನಮ್ಮ ಸಮಾಜದ ಯಾರೊಬ್ಬರು ಸಚಿವರು ಇರದೆ ಇರುವುದು ಘೋರ ಅನ್ಯಾಯವಾಗಿದೆ. ಈಗಾಗಲೇ ಸರ್ವೊಚ್ಚ ನ್ಯಾಯಾಲಯದಲ್ಲಿ ನಾಗಮೊಹನದಾಸ ವರದಿಯಿಂದ ಆಗುತ್ತಿರುವ ಅನ್ಯಾಯದ ವಿರೂದ್ಧ ದಾವೆ ಹೂಡಲಾಗಿದೆ. ಆದರೂ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಯಾರನ್ನೊ ಸಮಾಧಾನಪಡಿಸಲು ಇನ್ಯಾರಿಗೋ ಬಲಿ ಕೊಡಲು ಹೊರಟಿದ್ದಾರೆ. ಈ ಹಿಂದೆ ದೇವರಾಜ ಅರಸರು ಮುಖ್ಯಮಂತ್ರಿಗಳಾಗಿದ್ದಾಗ ನಮ್ಮ ಈ ನಾಲ್ಕು ಸಮುದಾಯಗಳಿಗೆ ರಿಜರ್ವೆಶನ್ ಕೊಡುವ ಮೂಲಕ ನ್ಯಾಯ ದೊರಕಿಸಿ ಕೊಟ್ಟಿದ್ದರು. ಆದರೆ ಸಾಮಾಜಿಕ ಹರಿಕಾರರು ಎಂದು ಬಿಂಬಿಸಿಕೊಳ್ಳುವ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಅವೈಜ್ಞಾನಿಕ ಹಾಗೂ ದೋಷಪೂರಿತವುಳ್ಳ ಒಳ ಮೀಸಲಾತಿ ಜಾರಿ ಮಾಡಿ ನಮ್ಮನ್ನು ಚೆನ್ನಾಗಿ ತುಳಿಯಲು ಹೊರಟಿರುವರು ಎಂದು ದೂರಿದರು.

ಈ ತಿಂಗಳ 24ರಂದು ನಡೆಯುವ ಹೋರಾಟ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆಯ ಗಂಟೆಯಾಗಿದ್ದು, ಮಾ.27ರಂದು ಒಂದು ವೇಳೆ 15 ಪ್ರತಿಶತವಿರುವ ಹಳೆ ಮೀಸಲಾತಿ ಜಾರಿ ಮಾಡದೆ,

ನಾಮೊಹನದಾಸ ವರದಿ ಪ್ರಕಾರ ಒಳ ಮೀಸಲಾತಿ ಜಾರಿ ಮಾಡಿದ್ದೆ ಆದಲ್ಲಿ ಮುಂದಿನ ದಿನಗಳಲ್ಲಿ ಲಕ್ಷಾವಧಿ ಸಂಖ್ಯೆಯಲ್ಲಿ ಈ ನಾಲ್ಕು ಸಮುದಾಯಗಳ ಜನರು ಬೀದಿಗಿಳಿದು ಉಗ್ರ ಹೋರಾಟ ನಡೆಸಲಾಗುತ್ತದೆ. ಮುಂದೆ ಆಗುವ ಅನಾಹುತಗಳಿಗೆ ರಾಜ್ಯ ಸರ್ಕಾರವೇ ನೇರಹೊಣೆಗಾರರನ್ನಾಗಿಸಬೇಕಾಗುತ್ತದೆ ಎಂದು ಪವಾರ ಎಚ್ಚರಿಸಿದರು.

ಭೋವಿ ವಡ್ಡರ ಸಮಾಜದ ಅಧ್ಯಕ್ಷರಾದ ಮಾಣಿಕರಾವ ವಾಡೇಕರ್ ಮಾತನಾಡಿ, ನಮ್ಮ ಸಮಾಜ ವರ್ಷದ 12 ತಿಂಗಳು ಪರಿವಾರ, ಮನೆ, ಮಠ ಬಿಟ್ಟು ಹೊರಗಡೆ ಉಳಿದು ಕಟ್ಟಡಗಳು, ಕಟ್ಟಿ ಎಲ್ಲ ಸಮಾಜಗಳಿಗೆ ನೆರಳು ಮಾಡುವ ನಮಗೆ ಈ ಸರ್ಕಾರ ಅನ್ಯಾಯ ಮಾಡಲು ಹೊರಟಿದೆ. ದೇವರು ಕೊಟ್ಟರೂ ಪೂಜಾರಿ ಕೊಡುತ್ತಿಲ್ಲ ಎನ್ನುವ ಹಾಗೆ ಈ ಹಿಂದೆ ದೇವರಾಜ ಅರಸರು ನಮ್ಮ ಸಮಾಜಕ್ಕೆ ಮೀಸಲಾತಿ ನೀಡಿ ನ್ಯಾಯ ಕೊಟ್ಟಿದ್ದರು. ಆದರೆ ಹಾಲಿ ಸಿದ್ಧರಾಮಯ್ಯ ಸರ್ಕಾರ ಒಳ ಮೀಸಲಾತಿ ಜಾರಿ ಮಾಡಿ ಅನ್ಯಾಯ ಮಾಡಲು ಮುಂದಾಗಿದೆ. ಇದನ್ನು ವಿರೋಧಿಸಿ ಈ ತಿಂಗಳ 24ರಂದು ನಡೆಯಲಿರುವ ಬೃಹತ್ ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ವಾಡೇಕರ್ ಕರೆ ಕೊಟ್ಟರು. ಕೊರವ ಸಮಾಜದ ರಾಜ್ಯ ಕಾರ್ಯದರ್ಶಿ ಸೂರ್ಯಕಾಂತ

ಕಮತಾಣ ಹಾಗೂ ಬಂಜಾರಾ ಸಮಾಜದ ಮುಖಂಡರಾದ ಗೋವರ್ಧನ ರಾಠೋಡ ಮಾತನಾಡಿದರು. ಮೇಲಿನ ನಾಲ್ಕು ಸಮುದಾಯಗಳ ಮುಖಂಡರಾದ ರಮೇಶ ಜಾಧವ, ಗೋಪಾಲಸಿಂಗ್ ರಾಠೋಡ, ರವಿಂದ್ರ ಭಾಂಗೆ, ಪುಂಡಲಿಕರಾವ ಲಿಂಗದಳ್ಳಿ, ವೆಂಕಟ ಶಿಂಧೆ, ಸಂಜುಕುಮಾರ ಕೊರವ, ದಯಾನಂದ ಜಾಧವ, ದಿನೇಶ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಮೇ ಅಂತ್ಯಕ್ಕೆ ತುಂಗಭದ್ರಾ ಡ್ಯಾಂ 33 ಕ್ರೆಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಪೂರ್ಣ : ಬೋಸರಾಜು

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ



ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ಅವರು ಶುಕ್ರವಾರ ತುಂಗಭದ್ರಾ ಜಲಾಶಯದ ಮೇಲ್ಭಾಗಕ್ಕೆ ತೆರಳಿ, ತಾಂತ್ರಿಕ ತಂಡವು ನಡೆಸುತ್ತಿರುವ ಜಲಾಶಯದ ಕ್ರೆಸ್ಟ್ ಗೇಟ್ ಅಳವಡಿಕೆ ಕಾರ್ಯಗಳನ್ನು ಖುದ್ದು ವೀಕ್ಷಿಸಿದರು.

ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಸಚಿವರು, ಈಗಾಗಲೇ ತುಂಗಭದ್ರಾ ಜಲಾಶಯದ 18 ನೂತನ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಪೂರ್ಣಗೊಂಡಿದ್ದು, 5 ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ. ಮಾರ್ಚ್ ಅಂತ್ಯದ ವೇಳೆಗೆ ಒಟ್ಟು 23 ಗೇಟ್‌ಗಳ ಕೆಲಸ ಮುಗಿಯುವ ನಿರೀಕ್ಷೆಯಿದೆ.

ಎಕ್ಸ್‌ಪರ್ಟ್ ಟೀಮ್ ಮತ್ತು ಚೀಫ್ ಎಂಜಿನಿಯರ್‌ಗಳ ಪ್ರಕಾರ, ಗೇಟ್ ಬದಲಾವಣೆಯ ಸಮಯದಲ್ಲಿ ಹಳೆಯ ಅಣೆಕಟ್ಟಿನ ರಚನೆಗೆ ಯಾವುದೇ ತೊಂದರೆಯಾಗಿಲ್ಲ. ಏಪ್ರಿಲ್ ತಿಂಗಳಿನಲ್ಲಿ ಉಳಿದ 10 ಗೇಟ್‌ಗಳನ್ನು ಅಳವಡಿಸಿ,

ಮೇ ಅಂತ್ಯದೊಳಗೆ ಎಲ್ಲಾ 33 ನೂತನ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾಮಗಾರಿ ಪೂರ್ಣಗೊಳ್ಳುವ ಭರವಸೆ ಇದೆ.

ಕಾಮಗಾರಿಯು ನಿರೀಕ್ಷಿತ ಸಮಯಕ್ಕಿಂತ ವೇಗವಾಗಿ ಸಾಗುತ್ತಿದ್ದು, ಜೂನ್‌ನಲ್ಲಿ ಆರಂಭವಾಗುವ ಮುಂಗಾರು ಮಳೆಗಾಲದ ವೇಳೆಗೆ ಜಲಾಶಯವು ಸಂಪೂರ್ಣವಾಗಿ ಸಿದ್ಧವಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ ಹೂಳಿನ ಸಮಸ್ಯೆಗೆ ಪರಿಹಾರವಾಗಿ 'ನವಲಿ' ಯೋಜನೆಯ ಪ್ರಸ್ತಾವನೆಯನ್ನು ಮಂಡಳಿ ಮತ್ತು ಸಂಬಂಧಿತ ರಾಜ್ಯ ಸರ್ಕಾರಗಳಿಗೆ ಕಳುಹಿಸಲಾಗಿದೆ. ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರೊಂದಿಗೂ ಸಹ ಪತ್ರ ವ್ಯವಹಾರ ನಡೆಸಲಾಗಿದೆ. ಸಂಬಂದಪಟ್ಟ ಅಧಿಕಾರಿಗಳ ಮಟ್ಟದಲ್ಲಿ ಮಾತುಕತೆ ನಡೆಯುತ್ತಿದೆ.

ತೆಲಂಗಾಣ ಸರ್ಕಾರದೊಂದಿಗೂ ಸಮನ್ವಯ ಸಾಧಿಸಲು ಪ್ರಯತ್ನಿಸಲಾಗುತ್ತಿದ್ದು, ವಿವಿಧ ತಾಂತ್ರಿಕ ಕಾರಣಗಳಿಂದ ವಿಳಂಬವಾಗುತ್ತಿದೆ. ಈ ತಾಂತ್ರಿಕ ಸಮಸ್ಯೆಗಳು ಬಗೆಹರಿದ ನಂತರ ಪೂರ್ಣ ಸಹಕಾರ ಸಿಗುವ ನಿರೀಕ್ಷೆಯಿದೆ. ಈ ಬಗ್ಗೆ ನಮ್ಮ ರಾಜ್ಯದ ವಿವಿಧ ಚುನಾಯಿತ ಪ್ರತಿನಿಧಿಗಳ ನಿಯೋಗವು ನವದೆಹಲಿಯಲ್ಲಿ ಜಲಶಕ್ತಿ ಸಚಿವಾಲಯದ ಅಧಿಕಾರಿಗಳು ಮತ್ತು ವಿವಿಧ ರಾಜ್ಯಗಳ ಸಂಸದರೊಂದಿಗೆ ಮಹತ್ವದ ಚರ್ಚೆ ನಡೆಸಲಾಗಿದೆ. ಕೇಂದ್ರ ಸಚಿವರು ಮತ್ತು ಅಧಿಕಾರಿಗಳು ಕರ್ನಾಟಕದ ನೀರಾವರಿ ಯೋಜನೆಗಳ ಬಗ್ಗೆ ಸಕಾರಾತ್ಮಕವಾಗಿ

ಸ್ಪಂದಿಸಿದ್ದು, ಚುನಾವಣಾ ನೀತಿ ಸಂಹಿತೆಯ ಪ್ರಕ್ರಿಯೆಗಳ ನಂತರ ಮತ್ತೊಂದು ಸುತ್ತಿನ ಸಭೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷರು ಹಾಗೂ ಮಸ್ಕಿ ಶಾಸಕರಾದ ಬಸವನಗೌಡ ತುರುವಿಹಾಳ, ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಂಜುನಾಥ್, ಕೊಪ್ಪಳ ಹೆಚ್ಚುವರಿ ಜಿಲ್ಲಾ ಪೋಲಿಸ್

ವರಿಷ್ಠಾಧಿಕಾರಿ ಆರ್.ಹೇಮಂತ್ ಕುಮಾರ್,

ಟಿಬಿ ಬೋರ್ಡ್ ಹಾಗೂ ಕೆ.ಎನ್.ಎನ್.ಎಲ್. ಅಧಿಕಾರಿಗಳಾದ ಮುಖ್ಯ ಇಂಜಿನಿಯರ್ ಶ್ರೀನಿವಾಸ ಮಲ್ಲಿಗಿವಾಡ, ಎಇಇ ಧರ್ಮರಾಜ್ ಹಾಗೂ ಜ್ಞಾನೇಶ್ವರ, ಸೆಕ್ಷನ್ ಅಧಿಕಾರಿಗಳಾದ ಜಿ. ಕಿರಣ, ಪಂಪಾಪತಿ ಡಿ.ಕೆ. ಮತ್ತು ಹುಲಿರಾಜ್ ಸೇರಿದಂತೆ ಇತರೆ ಜನಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಸಹಾಯವಾಣಿ



• ಮಲ್ಲಮ್ಮ ನುಡಿ ವಾರ್ತೆ ಔರಾದ್

ಬೇಸಿಗೆ ಹಿನ್ನೆಲೆ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಮುಂಜಾಗೃತಾ ಕ್ರಮವಾಗಿ ತಾಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಸಹಾಯವಾಣಿ ಸ್ಥಾಪಿಸಲಾಗಿದೆ ಎಂದು ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಕಿರಣ ಪಾಟೀಲ್ ಅವರು ತಿಳಿಸಿದ್ದಾರೆ. ತಾಪಂ ಸಹಾಯವಾಣಿ ಕೇಂದ್ರದ ರಾಜಶೇಖರ ಮೊಬೈಲ್ ಸಂಖ್ಯೆ 9448196200 ಗೆ ಸಂಪರ್ಕಿಸಬಹುದಾಗಿದೆ.

**21 ಗ್ರಾಮ ಪಂಚಾಯತಿ ಸಹಾಯವಾಣಿ ವಿವರ**

ತಾಲೂಕಿನ ಎಲ್ಲಾ 21 ಗ್ರಾಮ ಪಂಚಾಯತಿ ವ್ಯಾಪ್ತಿಗಳಲ್ಲಿ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಎಚ್ಚರಿಕೆ ವಹಿಸಲು ಹಾಗೂ ಸಮಸ್ಯೆಯಾದರೆ ಸಂಪರ್ಕಿಸಲು ಸಹಾಯವಾಣಿ ಕೇಂದ್ರಗಳ ನಂಬರ್ ಈ ಕೆಳಗಿನಂತಿವೆ.

**ಕುಡಿಯುವ ನೀರಿನ ಸಮಸ್ಯೆಗಳಿದ್ದಲ್ಲಿ**

ಬಾದಲಗಾಂವ ಗ್ರಾಪಂ ಪಿಡಿಒ ಸಂಗಾರೆಡ್ಡಿ–9731175395

ಬೆಳಕೂಣಿ(ಚೌ) ಆತ್ಮಾರಾಮ ಪಾಟೀಲ್–7676140609

ಭಂಡಾರಕಮಟಾ ಮಲ್ಲಿಕಾರ್ಜುನ–9611810466 ,ಬೋಂತಿ ರಮೇಶಕುಮಾರ–9591585111, ಚಿಕ್ಲಿ(ಜೆ) ದತ್ತಾತ್ರಿ ಪಾಟೀಲ–9620308566, ಚಿಂತಾಕಿ ನಿರ್ಮಾಲಾ–8861232759, ಧೂಪತಮಹಾಗಾಂವ ನಂದಕೀಶೋರ–8553169547, ಎಕಂಬಾ ಶಶಿಕಪೂರ–9739748009, ಎಕಲಾರ ವಿಜಯಲಕ್ಷ್ಮೀ–9740507520, ಹೆಡಗಾಪೂರ ಶರಣಪ್ಪಾ–9008066658, ಹೊಕ್ರಣಾ ಕೃಷ್ಣಪ್ಪಾ–8951547396, ಜಂಬಗಿ ದಿನೇಶ ರೆಡ್ಡಿ–7760170003, ಜೋಜನಾ ನರಸಿಂಗ ಮಾನೆ–9611111738, ಕೌಠಾ(ಬಿ) ಸವಿತಾ ಹಿರೇಮಠ–8970859789, ಲಾಧಾ ಅನೀಲಕುಮಾರ –9986177790, ನಾಗಮಾರಪಳ್ಳಿ ಶರಣಪ್ಪಾ–9241209992, ಸಂತಪೂರ ಸಂತೋಷಕುಮಾರ ಪಾಟೀಲ–9972881307, ಶೆಂಬೆಳ್ಳಿ ನಾಗೇಶ ಮುಕ್ರಂಬೆ–9902715674, ಸುಂಧಾಳ ಶ್ರೀಪತರಾವ ಚಿಟಗೀರೆ–9900417110, ವಡಗಾಂವ(ದೇ) ಸುಭಾಷ ಬುಯ್ಯಾ–9945572293, ಗುಡಪಳ್ಳಿ ಸುರೇಖಾ– 9035167776 ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ದೂರವಾಣಿಗೆ ಸಂಪರ್ಕಿಸುವಂತೆ ತಿಳಿಸಿದ್ದಾರೆ.

# ಆಲಿಕಲ್ಲು ಮಳೆಯಿಂದ ಹಾನಿಯಾದ ಭತ್ತ: ಜಿಲ್ಲಾಧಿಕಾರಿ ಭೇಟಿ



• ಮಲ್ಲಮ್ಮ ನುಡಿ ವಾರ್ತೆ ಕುರುಗೋಡು

ಸಮೀಪದ ಮುಷ್ಠಗಟ್ಟೆ ,ಗೆಣಿಕೆಹಾಳು ಬಾದನಹಟ್ಟಿ ,ಬೈಲೂರು ಹಾಗೂ ತಾಲೂಕಿನ ಕೆಲವು ಗ್ರಾಮದ ರೈತರ ಸಾಕಷ್ಟು ಪ್ರದೇಶದಲ್ಲಿ ಬೆಳೆದ ಭತ್ತ ಮಂಗಳವಾರ ರಾತ್ರಿ ಸುರಿದ ಆಲಿಕಲ್ಲು ಸಹಿತ ಭಾರಿ ಮಳೆಯಿಂದ ನೆಲಕ್ಕೆ ಬಿದ್ದು ಹಾನಿಯಾದ ಹಿನ್ನೆಲೆಯಲ್ಲಿ ಜಮೀನುಗಳಿಗೆ ಜಿಲ್ಲಾಧಿಕಾರಿ ಕೆ ನಾಗೇಂದ್ರ ಪ್ರಸಾದ್ ಹಾಗೂ ತಹಸೀಲ್ದಾರ್ ನರಸಪ್ಪ, ಕೃಷಿ ಅಧಿಕಾರಿ ಎಂ ದೇವರಾಜ್ ವಿಎ ಕೋಟ್ರೇಶ ಹಾಗೂ ಆರ್ ಐ ಸುರೇಶ್ ಶುಕ್ರವಾರ ಭೇಟಿ ನೀಡಿ ಪರಿಶೀಲಿಸಿದರು.

# ಬಣ್ಣದ ಹಬ್ಬ ಆಚರಣೆ



ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಯುಗಾದಿ ಹಬ್ಬದ ನಿಮಿತ್ಯ ಗ್ರಾಮೀಣ ಪ್ರದೇಶದಲ್ಲಿ ಯುವಕರು ಸಡಗರ ಸಂಭ್ರಮದಿಂದ ಬಣ್ಣದ ಹಬ್ಬ ಶುಕ್ರವಾರ ಆಚರಣೆ ಮಾಡಿದರು.

ಕೆಲವು ಪ್ರದೇಶಗಳಲ್ಲಿ ಯುಗಾದಿ ಹಬ್ಬದಂದು ಬಣ್ಣ ಆಡೋ ಪದ್ಧತಿ ಇದೆ ಯುಗಾದಿ ಅಂದ್ರೆ ಹೊಸ ವರ್ಷ (ವಸಂತ ಋತು ಆರಂಭ * ಹಳೆಯದನ್ನು ಬಿಟ್ಟು ಹೊಸತನ ಸ್ವಾಗತಿಸುವ ಸಂಕೇತ ಸಂತೋಷ, ಒಗ್ಗಟ್ಟು, ಹಬ್ಬದ ಉತ್ಸಾಹದಿಂದ ಸ್ವಾಗತ ಮಾಡಲು ಪಟ್ಟಣ ಸಮೀಪದ ಹೂನೂರು ಬನ್ನಿಗೋಳ, ಮೇಗಳಪೇಟೆ, ನಾಗಲಾಪುರು, ನಾಗರಹಾಳ,ಜಾನತಾಪುರು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಜಾತಿ ಭೇದ ಮರೆತು ಯುವಕರು, ಮುದ್ದು ಮಕ್ಕಳು, ಮಹಿಳೆಯರು,ಪರಸ್ಪರ ಬಣ್ಣ ಎರಚುವ ಮೂಲಕ ಸಡಗರ ಸಂಭ್ರಮದಿಂದ ಶುಕ್ರವಾರ ಬಣ್ಣದ ಹಬ್ಬ ಆಚರಣೆ ಮಾಡಿದರು ಇದೆ ವೇಳೆ ಸ್ಥಳೀಯ ಆರಕ್ಷಕ ಠಾಣೆಯ ಸಿಬ್ಬಂದಿಗಳು ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಿ ಶಾಂತಿ ಸುವ್ಯವಸ್ಥೆ ಕಾಪಾಡಿದರು.

# ಹಿಂದುತ್ವದ ಗೆಲುವಾಗಲಿ: ವೀರಣ್ಣ ಚರಂತಿಮಠ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಬಾಗಲಕೋಟೆ ಉಪಚುನಾವಣೆಯಲ್ಲಿ ನಾನು ಗೆದ್ದರೆ ಅದು ನನ್ನ ಗೆಲುವಲ್ಲ ಬಿಜೆಪಿ, ಹಿಂದುತ್ವದ ಗೆಲುವು ಎಂದು ಮಾಜಿ ಶಾಸಕ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಹೇಳಿದರು. ನಗರದ ಶಿವಾನಂದ ಜೀನನಲ್ಲಿರುವ ಭಾರತೀಯ ಜನತಾ ಪಾರ್ಟಿ ಜಿಲ್ಲಾ ಕಾರ್ಯಾಲಯದಲ್ಲಿ ಗುರುವಾರ ಚುನಾವಣಾ ಪ್ರಚಾರ ಕಾರ್ಯಾಲಯದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ತಮ್ಮನ್ನು ಪಕ್ಷದ ಅಭ್ಯರ್ಥಿಯನ್ನಾಗಿ ಘೋಷಣೆ ಮಾಡಿದ ಪಕ್ಷದ ಕೇಂದ್ರ ಹಾಗೂ ರಾಜ್ಯದ ಮುಖಂಡರಿಗೆ ಅಭಿನಂದನೆಗಳನ್ನು ಹೇಳಿದರು.

ಬಾಗಲಕೋಟೆ ಭಾರತೀಯ ಜನತಾ ಪಕ್ಷದ ಭದ್ರಕೋಟೆ. 2023 ರಲ್ಲಿ ಪಕ್ಷದಲ್ಲಿನ ಗೊಂದಲ ಹಾಗೂ ಕಾಂಗ್ರೆಸ್ಸಿನ ಗ್ಯಾರಂಟಿಗಳಿಂದಾಗಿ ಸೋಲಾಯಿತು. ಆದರೆ ಮತ್ತೆ ಲೋಕಸಭೆ ಚುನಾವಣೆಯಲ್ಲಿ ಗೆಲುವು ಸಾಧಿಸಿದೆವು. ಈಗ ಅನಿವಾರ್ಯವಾಗಿ ಚುನಾವಣೆ ಬಂದಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಇರುವುದರಿಂದ ಸರಕಾರವೇ ಇಲ್ಲಿ ಬಂದು ಕುಳಿತರೂ ಸಹಿತ ಬಿಜೆಪಿ ಕಾರ್ಯಕರ್ತರು ನಿರ್ಭಿಡೆಯಿಂದ ಕೆಲಸ ಮಾಡಿ ಚುನಾವಣೆಯನ್ನು ಹಬ್ಬದಂತೆ ಆಚರಣೆ ಮಾಡೋಣ. ಇಲ್ಲಿ ಧರ್ಮ ಹಾಗೂ ಹಿಂದುತ್ವ ಗೆಲ್ಲಬೇಕು. ಇದು ಕಾರ್ಯಕರ್ತರ ಪಕ್ಷದ ಗೆಲುವಾಗಲಿ ಎಂದರು. ಪ್ರಚಾರ ಕಾರ್ಯಾಲಯ ಉದ್ಘಾಟಿಸಿ ಮಾತನಾಡಿದ

ರಾಜ್ಯ ಪ್ರಧಾನ ಕಾರ್ಯದರ್ಶಿ ಶರಣು ತಳ್ಳಿಕೇರಿ, ಭಾರತೀಯ ಜನತಾ ಪಾರ್ಟಿ ಅಧಿಕಾರ ಅವಧಿಯಲ್ಲಿನ ಅಭಿವೃದ್ಧಿ ಕೆಲಸಗಳೆ ನಮಗೆ ಮಾನದಂಡವಾಗಿದ್ದು ಈ ಚುನಾವಣೆಯಲ್ಲಿ ಅತ್ಯಧಿಕ ಮತಗಳಿಂದ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಗೆಲುವು ಪಡೆಯುವುದು ನಿಶ್ಚಿತ. ಯದ್ದೋಪಹಾದಿಯಲ್ಲಿ ಪ್ರಚಾರ ಮಾಡಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸೋಣ ಎಂದರು.

ಚುನಾವಣಾ ಉಸ್ತುವಾರಿ ಅರುಣ ಶಹಾಪುರ ಮಾತನಾಡಿ, ಬಾಗಲಕೋಟೆ ಅಭಿವೃದ್ಧಿ ಕಂಡಿದ್ದು ಬಿಜೆಪಿ ಸರಕಾರದ ಅವಧಿ ವೀರಣ್ಣ ಚರಂತಿಮಠ ಶಾಸಕರಾದ ಅವಧಿಯಲ್ಲಿ ಎಂಬುವುದು ಜನಜನಿತ. ಅಭಿವೃದ್ಧಿಯ ಆಧಾರ ಮೇಲೆ ಮನೆ ಮನೆ ಪ್ರಚಾರ ಮಾಡಿ ಬೂತ ಗೆಲ್ಲುವ ಮೂಲಕ ಬಾಗಲಕೋಟೆ ಮತಕ್ಷೇತ್ರವನ್ನು ಗೆದ್ದು ಹೊಸ ವರ್ಷ ಯುಗಾದಿಯ ಶುಭ ಸಂದೇಶವನ್ನು ಸಾರೋಣ ಎಂದರು.

ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ, ಅಭಿವೃದ್ಧಿ ಶೂನ್ಯ ಕಾಂಗ್ರೆಸ್ ಆಡಳಿತದಿಂದ ಜನ ಕಂಗಾಲಾಗಿದ್ದಾರೆ, ಬಿಜೆಪಿಯನ್ನು ಗೆಲ್ಲಿಸುವ ಮೂಲಕ ಬಾಗಲಕೋಟೆ ಜನ ಹೊಸ ಸಂದೇಶ ಸಾರಲಿದ್ದಾರೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಸಂಸದ ಪಿ.ಸಿ.ಗದ್ದಿಗೌಡರ, ಡಾ.ಎಂ.ಎಸ್.ದಡ್ಡೆನ್ನವರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ನಗರ ಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೋಣ್ಣೂರ ವೇದಿಕೆ ಮೇಲೆ ಉಪಸ್ಥಿತರಿದ್ದರು.

# ಯುಗಾದಿ ಹೊಸತನದೊಂದಿಗೆ ಬಣ್ಣದಲ್ಲಿ ಮಿಂದೆದ್ದ ಜನತೆ



• ಮಲ್ಲಮ್ಮ ನುಡಿ ವಾರ್ತೆ ಮಸ್ಕಿ

ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ಹಳ್ಳಿಗಳಲ್ಲಿ, ಯುಗಾದಿ ಹೊಸತನದೊಂದಿಗೆ ಹೋಳಿ ಹಬ್ಬವನ್ನು ಶುಕ್ರವಾರ ಸಂಭ್ರಮ ಸಡಗರದಿಂದ ಆಚರಿಸಲಾಯಿತು.

ಬೆಳಿಗ್ಗೆಯಿಂದಲೇ ಮಕ್ಕಳು, ಯುವಕರೆನ್ನದೇ ಎಲ್ಲಾ ವಯೋಮಾನದವರು ಪರಸ್ಪರ ಬಣ್ಣ ಎರಚಿ, ಯುಗಾದಿ ಹೊಸ ವರ್ಷದ ಶುಭಾಶಯ ಹಂಚಿಕೊಂಡು ಬಣ್ಣದ ಓಕುಳಿಯಲ್ಲಿ ಮಿಂದೆದ್ದರು.

ಪಟ್ಟಣದ ಗ್ರೀನ್ ಸಿಟಿ, ಬಸವೇಶ್ವರ ನಗರ, ಪಾರ್ವತಿನಗರ, ತೇರಬಜಾರ, ಸಂತೇಬಜಾರ ಸೇರಿದಂತೆ ಪ್ರಮುಖ ಓಣಿಗಳಲ್ಲಿ ಯುವಕ□ಯುವತಿಯರು, ಮಹಿಳೆಯರು, ಪರಸ್ಪರ ಬಣ್ಣ ಬಳಿದು ಬಣ್ಣದಾಟದಲ್ಲಿ ಮಿಂದೆದ್ದರು. ಚಿಕ್ಕಮಕ್ಕಳು ಪಿಚಕಾರಿಯಿಂದ ದೊಡ್ಡವರಿಗೆ ಬಣ್ಣ ಎರಚಿ ಸಂಭ್ರಮಪಟ್ಟರು.

ಯುವಕರು ರಸ್ತೆ, ಬೀದಿಗಳಲ್ಲಿ ಹಾಗೂ ಹೋಟೆಲ್‌ಗಳು, ಅಂಗಡಿ ಮುಗ್ಗಟ್ಟುಗಳು ಬಂದ್ ಮಾಡಿ ಕುಟುಂಬದ ಜೊತೆ ಹೋಳಿ ಆಚರಿಸಿ ಖುಷಿ ಪಟ್ಟರು. ಮಸ್ಕಿ ಸಿಪಿಐ ಅವರ ನೇತೃತ್ವದಲ್ಲಿ ಬಿಗಿ ಪೋಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

# ಹಂಪಾದೇವನಹಳ್ಳಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ

ತಾಲೂಕಿನ ಹಂಪಾದೇವನಹಳ್ಳಿಯಲ್ಲಿ ಮಾವಿನಹಳ್ಳಿಯ ಶ್ರೀ ಸಿದ್ದೇಶ್ವರ ರಂಗ ಸಂಸ ಕಲ್ಚರಲ್ ಟ್ರಸ್ಟ್ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳಾದ ಭಾವಗೀತೆಗಳು ಮತ್ತು ಬಯಲಾಟದಲ್ಲಿ ಪಟ್ಟಾಭಿಷೇಕ ಸನ್ನಿವೇಶವನ್ನು ಹಮ್ಮಿಕೊಳ್ಳಲಾಗಿತ್ತು ಟ್ರಸ್ಟ್ ಮಕ್ಕಳಿಗೆ ಕಾರ್ಯಕ್ರಮದ ಹಮ್ಮಿಕೊಳ್ಳಲಾಗಿತ್ತು.

ಭಾವಗೀತೆಗಳು ವೈಯಕ್ತಿಕ ಭಾವನೆಗಳು, ಪ್ರೀತಿ, ಪ್ರಕೃತಿ ಮತ್ತು ತತ್ವಜ್ಞಾನವನ್ನು ವ್ಯಕ್ತಪಡಿಸುವ, ಸಂಗೀತಮಯವಾಗಿ ಹಾಡಬಹುದಾದ ಸಣ್ಣ ಕವಿತೆಗಳಾಗಿವೆ. ಇವು ಪ್ರಮುಖವಾಗಿ ಹರಿತವಾದ ರಾಗ/ಲಯವನ್ನು ಹೊಂದಿರುತ್ತವೆ ಮತ್ತು ತಂತಿವಾದ್ಯದ ಹಿನ್ನೆಲೆಯಲ್ಲಿ ಹಾಡಲು ಸೂಕ್ತವಾಗಿವೆ. ಕನ್ನಡದಲ್ಲಿ ಬೇಂದ್ರೆ, ಪುತಿನ, ಜಿ.ಎಸ್.ಶಿವರುದ್ರಪ್ಪ ಮುಂತಾದವರು ಭಾವಗೀತೆ ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ. ಬಯಲಾಟವು ಉತ್ತರ ಕರ್ನಾಟಕದ ಪ್ರಮುಖ ಸಾಂಪ್ರದಾಯಿಕ ಬಯಲು ರಂಗಭೂಮಿ ಕಲೆಯಾಗಿದ್ದು, ಇದು ಸುಮಾರು 150 ವರ್ಷಗಳ ಇತಿಹಾಸ ಹೊಂದಿದೆ. ಯಕ್ಷಗಾನದ ಶೈಲಿಯನ್ನು ಹೋಲುವ ಇದು, ಪುರಾಣ ಮತ್ತು ಮಹಾಕಾವ್ಯಗಳ ಕಥೆಗಳನ್ನು ಹಾಡು, ಕುಣಿತ ಮತ್ತು ವಿಶಿಷ್ಟ ವೇಷಭೂಷಣಗಳೊಂದಿಗೆ ತೆರೆದ ಮೈದಾನದಲ್ಲಿ ಪ್ರದರ್ಶಿಸುತ್ತದೆ. ದೊಡ್ಡಾಟ, ಸಣ್ಣಾಟ, ಪಾರಿಜಾತ ಮುಂತಾದ ಪ್ರಕಾರಗಳು ಇದರಲ್ಲಿವೆ ಈ ಕಲೆಗಳನ್ನು ಮಕ್ಕಳಿಗೆ ತಿಳಿಸುವ ಕೆಲಸ ಶ್ರೀ ಸಿದ್ದೇಶ್ವರ ರಂಗ ಸಂಸ ಕಲ್ಚರಲ್ ಟ್ರಸ್ಟ್ ಮಾವಿನಹಳ್ಳಿಯವರು ಮಾಡುತ್ತಿದ್ದಾರೆ ಎಂದು ಸಸಿಗೆ ನೀರು ಹಾಕುವುದರ ಮುಖಾಂತರ ಕಾರ್ಯಕ್ರಮ ಉದ್ಘಾಟಿಸಿದ ಬಯಲಾಟ ಹಾರ್ಮೋನಿಯಂ ಮಾಸ್ಟರ್ ಶ್ರೀ. ಡಿ.ಎಂ.ಮಂಜುನಾಥ ಉದ್ಘಾಟಕರ ನುಡಿಯನ್ನು ಪ್ರಸ್ತಾಪಿಸಿದರು. ಆಧುನಿಕ ಭಾವಗೀತೆ ಕಾವ್ಯವು ವೈಯಕ್ತಿಕ ಭಾವನೆಗಳು ಅಥವಾ ಭಾವನೆಗಳನ್ನು ವ್ಯಕ್ತಪಡಿಸುವ ಒಂದು ಔಪಚಾರಿಕ ಪ್ರಕಾರದ ಕಾವ್ಯವಾಗಿದೆ , ಇದನ್ನು ಸಾಮಾನ್ಯವಾಗಿ ಮೊದಲ ವ್ಯಕ್ತಿ ನಿರೂಪಣೆಯಲ್ಲಿ ಮಾತನಾಡಲಾಗುತ್ತದೆ . ಆಧುನಿಕ ಭಾವಗೀತೆ ಕಾವ್ಯ ಮತ್ತು ಆಧುನಿಕ ಗೀತೆ ಸಾಹಿತ್ಯ ಎರಡಕ್ಕೂ ಈ ಪದವು ಪ್ರಾಚೀನ ಗ್ರೀಕ್ ಸಾಹಿತ್ಯದ ಒಂದು ರೂಪವಾದ ಗ್ರೀಕ್ ಗೀತೆಯಿಂದ ಬಂದಿದೆ , ಇದನ್ನು ಅದರ ಸಂಗೀತದ ಪಕ್ಕವಾದ್ಯದಿಂದ ವ್ಯಾಖ್ಯಾನಿಸಲಾಗಿದೆ, ಸಾಮಾನ್ಯವಾಗಿ ಕಿತಾರಾ ಎಂದು ಕರೆಯಲ್ಪಡುವ ವಾದ್ಯದಲ್ಲಿ , ಏಳು–ತಂತಿಯ ಲೈರ್ ಆದ್ದರಿಂದ "ಭಾವಗೀತೆ". ಈ ಮೂರು ಸಮಾನವಾಗಿಲ್ಲ, ಆದರೂ ಹಾಡಿನ ಸಾಹಿತ್ಯವು ಹೆಚ್ಚಾಗಿ ಭಾವಗೀತೆಯ ವಿಧಾನದಲ್ಲಿರುತ್ತದೆ ಎಂದು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಶಾಲಾ ಎಸ್ ಡಿ ಎಂ.ಸಿ ಅಧ್ಯಕ್ಷರಾದ ಶ್ರೀ. ಗುರುಮೂರ್ತಿ ಹೇಳಿದರು. ಬಯಲಾಟದ ಪ್ರದರ್ಶನ ಸ್ಥಳ: ಸಾಮಾನ್ಯವಾಗಿ ಹಳ್ಳಿಗಳ ದೇವಸ್ಥಾನದ ಆವರಣ, ತೆರೆದ ಮೈದಾನ ಅಥವಾ ಮರಳು ಹಾಸಿನ ಮೇಲೆ ಸೂರ್ಯಾಸ್ತದ



ನಂತರ ಪ್ರದರ್ಶನ ನಡೆಯುತ್ತದೆ. ರೂಪಗಳು ಬಯಲಾಟದಲ್ಲಿ ಮುಖ್ಯವಾಗಿ ಐದು ವಿಧಗಳಿವೆ – ದಶರಥ, ಸಣ್ಣಾಟ, ದೊಡ್ಡಾಟ, ಪರಿಕಥೆ ಮತ್ತು ಯಕ್ಷಗಾನ. ವಿಷಯ.ಭಾರತೀಯ ಮಹಾಕಾವ್ಯಗಳು ಮತ್ತು ಪುರಾಣದ ಕಥೆಗಳನ್ನು ನೃತ್ಯ ಮತ್ತು ನಾಟಕದ ಮೂಲಕ ನಿರೂಪಿಸಲಾಗುತ್ತದೆ. ಸಂಗೀತ ಮತ್ತು ವೇಷಭೂಷಣ ಚಂಡೆಯ ಸದ್ದಿನೊಂದಿಗೆ ಆರಂಭವಾಗುವ ಈ ಕಲೆ, ಪಾತ್ರಗಳ ವಿಶಿಷ್ಟ ವೇಷಭೂಷಣ ಮತ್ತು ಗಾಯನದಿಂದಾಗಿ ಜನಪ್ರಿಯವಾಗಿದೆ. ಪ್ರಾಚೀನತೆ: ಬಯಲಾಟದ ಇತಿಹಾಸದಲ್ಲಿ "ಕುಮಾರರಾಮ" ಅತ್ಯಂತ ಪ್ರಾಚೀನವಾದ ಕೃತಿ ಎಂದು ಪರಿಗಣಿಸಲಾಗಿದೆ. ಉತ್ತರ ಕರ್ನಾಟಕದ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ಬಯಲಾಟ, ಸುಗ್ಗಿಯ ಮತ್ತು ಬೇಸಿಗೆ ಕಾಲದಲ್ಲಿ ಹಳ್ಳಿಗಳಲ್ಲಿ ಹೆಚ್ಚಿನ ಪ್ರದರ್ಶನಗಳನ್ನು ಕಾಣುತ್ತದೆ. ಎಂದು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಬಯಲಾಟ ಕಲಾವಿದರಾದ ಶ್ರೀ. ಕಂದಾರ್ ತಿಪ್ಪೇಸ್ವಾಮಿ ಹೇಳಿದರು. ಭಾವನಾತ್ಮಕತೆ ಕವಿಯ ಆತ್ಮನಿಷ್ಠ ಭಾವನೆಗಳಿಗೆ, ನೋವು–ನಲಿವುಗಳಿಗೆ ಒತ್ತು ನೀಡುತ್ತವೆ. ಸಂಗೀತಮಯತೆ ಇವು ಹಾಡಲು ಯೋಗ್ಯವಾಗಿರುತ್ತವೆ; ಸುಗಮ ಸಂಗೀತದ ಮೂಲಕ ಜನಪ್ರಿಯವಾಗಿವೆ. ಸಂಕ್ಷಿಪ್ತತೆ ಮಹಾಕಾವ್ಯಗಳಿಗೆ ವಿರುದ್ಧವಾಗಿ, ಇವು ಚಿಕ್ಕದಾಗಿ ಮತ್ತು ತೀವ್ರತೆಯಿಂದ ಕೂಡಿರುತ್ತವೆ. ವಿಷಯ: ಪ್ರೀತಿ, ಪ್ರಕೃತಿ, ಭಕ್ತಿ, ಸಾವು ಮತ್ತು ತತ್ವಜ್ಞಾನ ಪ್ರಮುಖ ವಿಷಯಗಳು ಮತ್ತು ಬಯಲಾಟ ಕರ್ನಾಟಕ ಜನಪದ ಕಲೆಗಳಲ್ಲಿ ಅತ್ಯಂತ ವೈವಿಧ್ಯದಿಂದ ಕೂಡಿದ ಗಂಡುಕಲೆ. ಇದರಲ್ಲಿ ಸಾಹಿತ್ಯ ಸಂಗೀತ, ನೃತ್ಯಗಳು ಮುಪ್ಪುರಿಗೊಂಡಿವೆ. ಪ್ರಾಚೀನ ಕಾಲದಿಂದಲೂ ಗ್ರಾಮೀಣರಿಗೆ ಮನರಂಜನೆ ಒದಗಿಸಿಕೊಂಡು ಬರುತ್ತಿರುವ ಹವ್ಯಾಸಿ ಕಲೆ ಬಯಲಾಟ. ಸಾಮಾನ್ಯವಾಗಿ ಸುಗ್ಗಿ ಕೆಲಸ ಮುಗಿದ ಮೇಲೆ 'ಬಯಲಾಟ'ಗಳ ಸುಗ್ಗಿ ಆರಂಭವಾಗುತ್ತದೆ. ಇದಕ್ಕೆ ಕಾರಣ ಕೆಲಸದ ಬಿಡುವು. ಬಯಲು ನಾಟಕದ ಪ್ರದರ್ಶನಕ್ಕೆ ಮುನ್ನ ಬಹಳ ಪರಿಶ್ರಮ ಬೇಕಾಗುತ್ತದೆ. ಬಯಲಾಟದ ಹುಚ್ಚು ಇರುವವರೆಲ್ಲ ಒಂದು ಕಡೆ ಸೇರಿ ತಾವು ಕಲಿಯಬೇಕೆಂದಿರುವ ಪ್ರಸಂಗವನ್ನು ಆಯ್ಕೆ ಮಾಡುತ್ತಾರೆ. ಪ್ರಸಂಗದ ಪಾತ್ರಗಳಿಗೆ ಆಯ್ಕೆಯಾದ ಕಲಾವಿದರು ಅನೇಕ ತಿಂಗಳ ಕಾಲ ಪ್ರತಿದಿನ ರಾತ್ರಿ ಸೇರಿ ಹಿರಿಯ ಕಲಾವಿದರ ಮಾರ್ಗದರ್ಶನದಲ್ಲಿ ಕಲಿಯುತ್ತಾರೆ. ಬಯಲಾಟ ಕಲಿಸುವವನಿಗೆ 'ಭಾಗವತ' ಎಂದು ಕರೆಯುತ್ತಾರೆ.

ಇಂದಿನ ಮಕ್ಕಳಿಗೆ ಪರಿಚಯಿಸುವ ಕೆಲಸ ಶ್ರೀ ಸಿದ್ದೇಶ್ವರ ರಂಗ ಸಂಸ ಕಲ್ಚರಲ್ ಟ್ರಸ್ಟಿನ ಕಾರ್ಯದರ್ಶಿ ಕೆ.ಹೇಮೇಶ್ವರ ಮಾಡುತ್ತಾರೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತಬಲಾ ವಾದಕರಾದ ಶ್ರೀ. ಚಾಗೆವರಬಸಪ್ಪ ಅಧ್ಯಕ್ಷ ನುಡಿಯನ್ನು ಪ್ರಸ್ತಾಪಿಸಿದರು. ಸಾಂಸ್ಕೃತಿಕ ಕಾರ್ಯಕ್ರಮಗಳು:– ಭಾವಗೀತೆಗಳು:– ಶ್ರೀ ಹೆಚ್.ಲೋಕರಾಜ್ ಮತ್ತು ತಂಡದವರು ನೇರವೇರಿಸಿದರು. ಬಯಲಾಟ ಪ್ರದರ್ಶನ:–ಕೆ.ಪಂಪಾಪತಿ ಪಾತ್ರ ಕೃತ್ಯವೀರ, ಕಾರ್ತ್ಯವೀರಾರ್ಜುನ ಎಚ್ ಆರ್ ಪ್ರವೀಣ್ ಕುಮಾರ್ ಮತ್ತು ರೇಣುಕಾ ರಾಜ ಬಿ.ಕೆ. ಸಿದ್ದಪ್ಪ ಧರ್ಮಪ್ಪ ತಂಡದವರು ಪ್ರದರ್ಶನ ನೀಡಿದರು.

ಕಾರ್ಯಕ್ರಮದಲ್ಲಿ:– ಶಾಲಾ ಶಿಕ್ಷಕರಾದ ಶ್ರೀಮತಿ ಪ್ಯಾರಿಜಾನ್, ಶ್ರೀ. ಮಂಜುನಾಥ, ಶ್ರೀ. ಕಂಠ್ಯಪ್ಪ, ಶಾರದಾ, ನಾಗವೇಣಿ, ಅನಿತಾ , ಬಯಲಾಟ ಕಲಾವಿದರು ಬಿ.ಸಿದ್ದಪ್ಪ ಧರ್ಮಪ್ಪ ಊರಿನ ಮುಖಂಡರು ಶ್ರೀ ಗಿರಿಯಪ್ಪ, ಸಿದ್ದಾಪುರ ವೆಂಕಟೇಶ್, ಮಲ್ಲಯ್ಯ, ಹೆಚ್ ಹುಲಗಪ್ಪ, ಆಂಜೀನಪ್ಪ, ಹನುಮಂತಪ್ಪ, ಎಸ್.ಡಿಎಂಸಿ ಉಪಾಧ್ಯಕ್ಷ ಶ್ರೀಮತಿ ಸುಮಲತಾ ತಿಪ್ಪಯ್ಯ ,ನಿಜಾಮುದ್ದೀನ್ ಔಲಿಯ ಹೊನ್ನಳ್ಳಿ, ಶಿಕ್ಷಕರ, ರಾಮು ಗೊಲ್ಲ ನಾಗೇನಹಳ್ಳಿ ಶ್ರೀ ಸಿದ್ದೇಶ್ವರ ರಂಗ ಸಂಸ ಕಲ್ಚರಲ್ ಟ್ರಸ್ಟಿನ ಅಧ್ಯಕ್ಷ ಗುರುಮಹಾಂತೇಶ. ಬಿ ಹಾಗೂ ಕಾರ್ಯದರ್ಶಿ ಕುರುಬರ ಹೇಮೇಶ್ವರ, ಪುರುಷೋತ್ತಮ ಡಿ. ನಿರೂಪಣೆ ಶ್ರೀ ಕಂಠ್ಯಪ್ಪ, ಸ್ವಾಗತ ಪುರುಷೋತ್ತಮ ಡಿ, ಶ್ರೀ ಕು.ನಾಗವೇಣಿ ವಂದಿಸಿದರು..

# ಸಿಡಿಲಿಂದ ರಕ್ಷಿಸಿಕೊಳ್ಳಲು ಅನುಸರಿಸಬೇಕಾದ ಮುನ್ನೆಚ್ಚರಿಕೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:

ಗುಡುಗು ಮತ್ತು ಸಿಡಿಲಿನ ಅಪಾಯಗಳನ್ನು ತಗ್ಗಿಸಲು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ನೀಡಿರುವ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸುವಂತೆ ಜಿಲ್ಲಾಧಿಕಾರಿ ಸಂಗಪ್ಪ ಅವರು ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆಯಲ್ಲಿ ತಿಳಿಸಿದ ಜಿಲ್ಲಾಧಿಕಾರಿಗಳು ಗುಡುಗು ಹಾಗೂ ಮಿಂಚಿನ ಸಂದರ್ಭದಲ್ಲಿ ಸಾರ್ವಜನಿಕರು ತೆರೆದ ಜಾಗಗಳಲ್ಲಿ, ಮರಗಳ ಕೆಳಗೆ, ವಿದ್ಯುತ್ ಕಂಬಗಳ ಸಮೀಪ ಅಥವಾ ನೀರಿನ ಮೂಲಗಳ ಬಳಿ ನಿಲ್ಲುವುದನ್ನು ಸಂಪೂರ್ಣವಾಗಿ ತಪ್ಪಿಸಿಕೊಳ್ಳಬೇಕು. ಗುಡುಗು ಮಿಂಚಿನ ಸಮಯದಲ್ಲಿ ಸುರಕ್ಷಿತ ಕಟ್ಟಡಗಳೊಳಗೆ ಅಥವಾ ಮುಚ್ಚಿದ ವಾಹನಗಳಲ್ಲಿ ಆಶ್ರಯ ಪಡೆಯಬೇಕು. ಈ ಅವಧಿಯಲ್ಲಿ ಮೊಬೈಲ್, ವಿದ್ಯುತ್ ಸಾಧನಗಳು ಹಾಗೂ ಲೋಹದ ವಸ್ತುಗಳ ಬಳಕೆಯನ್ನು ಕಡಿಮೆ ಮಾಡಬೇಕು ಮತ್ತು ಸಾಧ್ಯವಾದಷ್ಟು ದೂರ ಇರಬೇಕು.

ನೀರಿನಲ್ಲಿ ಈಜುವುದು, ಮೀನುಗಾರಿಕೆ ಅಥವಾ ಯಾವುದೇ ರೀತಿಯ ನೀರಿನ ಚಟುವಟಿಕೆಗಳನ್ನು ತಕ್ಷಣ ನಿಲ್ಲಿಸಬೇಕು. ಮನೆಯೊಳಗೆ



ಇರುವ ಸಂದರ್ಭದಲ್ಲಿ ಕಿಟಕಿಗಳು ಮತ್ತು ಬಾಗಿಲುಗಳನ್ನು ಮುಚ್ಚಿ, ಅನಾವಶ್ಯಕವಾಗಿ ವಿದ್ಯುತ್ ಸಾಧನಗಳನ್ನು ಬಳಸುವುದನ್ನು ತಪ್ಪಿಸಿಕೊಳ್ಳಬೇಕು. ಕೃಷಿಕರು ಮತ್ತು ಗ್ರಾಮೀಣ ಪ್ರದೇಶದ ಸಾರ್ವಜನಿಕರು ಗುಡುಗು ಮಿಂಚಿನ ಸಂದರ್ಭಗಳಲ್ಲಿ ಕೃಷಿ ಕಾರ್ಯಗಳನ್ನು ತಕ್ಷಣ ನಿಲ್ಲಿಸಿ, ಟ್ರಾಕ್ಟರ್ ಹಾಗೂ ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ತಪ್ಪಿಸಿಕೊಳ್ಳಬೇಕು. ಪಶುಗಳನ್ನು ಸುರಕ್ಷಿತ ಸ್ಥಳಗಳಿಗೆ ಕೊಂಡೊಯ್ಯಬೇಕು ಮತ್ತು ಹೊಲಗಳಲ್ಲಿ ಒಂಟಿಯಾಗಿ ಇರುವುದನ್ನು ತಪ್ಪಿಸಿಕೊಳ್ಳಬೇಕು.

ಮಕ್ಕಳು ಹೊರಗೆ ಆಟವಾಡುವುದನ್ನು ತಕ್ಷಣ ನಿಲ್ಲಿಸಬೇಕು ಮತ್ತು ಶಾಲೆಗಳು ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸಬೇಕು. ಮಹಿಳೆಯರು ಹಾಗೂ ಹಿರಿಯರು ಸುರಕ್ಷಿತ ಸ್ಥಳಗಳಲ್ಲಿ ಉಳಿಯಬೇಕು. ಪ್ರಯಾಣಿಕರು ಮತ್ತು ವಾಹನ ಸವಾರರು ಮಿಂಚಿನ ಸಮಯದಲ್ಲಿ ಅನಾವಶ್ಯಕ ಪ್ರಯಾಣವನ್ನು ತಪ್ಪಿಸಿಕೊಳ್ಳಬೇಕು ಮತ್ತು ವಾಹನಗಳನ್ನು ಸುರಕ್ಷಿತ ಸ್ಥಳಗಳಲ್ಲಿ ನಿಲ್ಲಿಸಬೇಕು. ಮರಗಳ ಕೆಳಗೆ ವಾಹನಗಳನ್ನು ನಿಲ್ಲಿಸಬಾರದು. ಅಪಘಾತ ಅಥವಾ ತುರ್ತು ಪರಿಸ್ಥಿತಿ ಉಂಟಾದಲ್ಲಿ ಗಾಯಗೊಂಡವರಿಗೆ ತಕ್ಷಣ ಪ್ರಥಮ ಚಿಕಿತ್ಸೆ ನೀಡಿ ಸಮೀಪದ ಆಸ್ಪತ್ರೆಗೆ ಸಂಪರ್ಕಿಸಬೇಕು.

ಅಗತ್ಯವಿದ್ದಲ್ಲಿ ತುರ್ತು ಸೇವೆಗಳನ್ನು ಸಂಪರ್ಕಿಸಬೇಕು ಮತ್ತು ಸ್ಥಳೀಯ ಆಡಳಿತದ ಸೂಚನೆಗಳನ್ನು ಪಾಲಿಸಬೇಕು. ಹವಾಮಾನ ಇಲಾಖೆಯಿಂದ ಹಾಗೂ ಎಖಓಆ–ಒಅ ಮೂಲಕ ನೀಡಲಾಗುವ ಮುನ್ನೆಚ್ಚರಿಕೆ ಸೂಚನೆಗಳನ್ನು ಸಾರ್ವಜನಿಕರು ಗಮನಿಸಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ವದಂತಿಗಳನ್ನು ನಂಬದೆ, ಅಧಿಕೃತ ಮೂಲಗಳಿಂದ ಮಾತ್ರ ಮಾಹಿತಿ ಪಡೆಯಬೇಕು.

ಜಿಲ್ಲೆಯ ಎಲ್ಲಾ ನಾಗರಿಕರು ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ತಮ್ಮ ಹಾಗೂ ತಮ್ಮ ಕುಟುಂಬದ ಸುರಕ್ಷತೆಯನ್ನು ಕಾಪಾಡಿಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ಮನವಿ ಮಾಡಿದ್ದಾರೆ.

# ಮತ ಎಣಿಕೆ ಸ್ಥಳ ಪರಿಶಿಲಿಸಿದ ವೀಕ್ಷಕರು



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:

ಬಾಗಲಕೋಟೆ ವಿಧಾನ ಸಭಾ ಉಪ ಚುನಾವಣೆ ಹಿನ್ನಲೆಯಲ್ಲಿ ಜಿಲ್ಲೆಗೆ ಆಗಮಿಸಿದ ಸಾಮಾನ್ಯ ವೀಕ್ಷಕರಾದ ಪಾರುಲ್ ಪಟವಾರಿ ಮತ್ತು ವೆಚ್ಚ ವೀಕ್ಷಕರಾದ ಡಾ.ಎಂ.ಅಮೀರ ಸಿದ್ದೀಕ್ ಅವರು ಭದ್ರತಾ ಕೊಠಡಿ ಹಾಗೂ ಮತ ಎಣಿಕೆ ಕೇಂದ್ರವನ್ನು ಪರಿಶೀಲಿಸಿದರು.

ಭದ್ರತಾ ಕೊಠಡಿಗೆ ಭೇಟಿ ನೀಡಿ ಇವಿಎಂ ಯಂತ್ರಗಳ ಭದ್ರತಾ ವ್ಯವಸ್ಥೆಯನ್ನು ಪರಿಶೀಲಿಸಿದರು. ಸಿಸಿಟಿವಿ ವ್ಯವಸ್ಥೆ, ಭದ್ರತಾ ಸಿಬ್ಬಂದಿ ನಿಯೋಜನೆ, ಪ್ರವೇಶ ನಿಯಂತ್ರಣ ಕ್ರಮಗಳು ಸಮರ್ಪಕವಾಗಿ ಆಗಬೇಕು ಎಂದರು. ನಂತರ ಮತ ಎಣಿಕೆ ದಿನದ ವ್ಯವಸ್ಥೆಗಳ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಿದ ವೀಕ್ಷಕರು, ಮತ ಎಣಿಕೆ ಪ್ರಕ್ರಿಯೆ ಪಾರದರ್ಶಕ ಹಾಘೂ ನಿಯಮಾನುಸಾರ ನಡೆಯುವಂತೆ ಎಲ್ಲ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದರು.

ಭೇಟಿ ವೇಳೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ಅವರು ಚುನಾವಣೆಗೆ ಸಂಬಂಧಿಸಿದ ಸಿದ್ಧತೆಗಳ ಕುರಿತು ಮಾಹಿತಿ ನೀಡಿದರು. ಸುಗಮ ಹಾಗೂ ನ್ಯಾಯಸಮ್ಮತವಾಗಿ ಚುನಾವಣೆ ನಡೆಸಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ನವನಗರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ಥಾಪಿಸಲಾದ ಮಸ್ಟರಿಂಗ ಮತ್ತು ಡಿಮಸ್ಟರಿಂಗ್ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವ ಸ್ವಾಮಿ, ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಶಂಕರಲಿಂಗ ಗೋಗಿ ಸೇರಿದಂತೆ ಇತರೆ ಅಧಿಕಾರಿ ವರ್ಗದವರು ಇದ್ದರು.

## ವಿದ್ಯಾರ್ಥಿನಿ ಆತ್ಮಹತ್ಯೆಗೆ ಪ್ರಯತ್ನ



**ಹಗರಿಬೊಮ್ಮನಹಳ್ಳಿ:** ತಾಲೂಕಿನ ಬಾಚಿಗೊಂಡನಹಳ್ಳಿ ಗ್ರಾಮದ ಕೌದಿ ಮಾಂತೇಶ್ವರ ಪ್ರೌಢಶಾಲೆ, ಬಾಚಿಗೊಂಡನಹಳ್ಳಿ ಅನುದಾನಿತ ಶಾಲೆಯ ವಿದ್ಯಾರ್ಥಿನಿ ಯಾದ ಚಂದ್ರಕಲಾ ರವರ ಹಾಲ್ ಟಿಕೆಟ್ ಬರದ ಕಾರಣ ಮನ ನೊಂದ ವಿದ್ಯಾರ್ಥಿನಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದ ಘಟನೆ ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ನಡೆದಿದೆ.

ವಿದ್ಯಾರ್ಥಿನಿಯನ್ನು ಆಸ್ಪತ್ರೆಯಲ್ಲಿ ದಾಖಲಿಸಿದ್ದು ಚಿಕಿತ್ಸೆ ಫಲಕಾರಿಯಾಗಿ ವಿದ್ಯಾರ್ಥಿನಿಯು ಆರೋಗ್ಯಕರವಾಗಿದ್ದಾರೆ, ಅವರೊಂದಿಗೆ ಮಾತನಾಡಿದ ಎಸ್ ಎಫ್ ಐ ಜಿಲ್ಲಾ ಅಧ್ಯಕ್ಷರಾದ ಜಯಸೂರ್ಯ ಅವರು ಕೆಲವು ವಿಷಯಗಳನ್ನು ಹಂಚಿಕೊಂಡಿದ್ದಾರೆ, ವಿದ್ಯಾರ್ಥಿನಿಗೆ ಹಾಲ್ ಟಿಕೆಟ್ ಬರದ ಕಾರಣ ಈ ಘಟನೆ ನಡೆಸಿರುವುದು ಎಲ್ಲಾರಿಗು ಕಾಣುವಂತ ವಿಷಯ ಆದರೆ ಯಾಕೆ ಇತರ ಸಂಭವಿಸಿತು ಎಂದು ಕಂಡಗಾ ಕೌದಿ ಮಹಂತೇಶ್ವರ ಪ್ರೌಡ ಶಾಲೆಯ ಮುಖ್ಯಗುರುಗಳ ನಿರ್ಲಕ್ಷ್ಯ ಕಾರಣ ಎಂಬುದು ಕಂಡು ಬರುತ್ತದೆ. ಶಾಲೆಗೆ ನಿರಂತರವಾಗಿ ಹಾಜರಾಗುತ್ತಿದ್ದ ಪೂರಕ ಪರೀಕ್ಷೆ 1& 3ರ ಪರೀಕ್ಷೆ ಬರೆದಿದ್ದು ಪೂರಕ ಪರೀಕ್ಷೆ 2 ಬರೆಯುವ ಸಂದರ್ಭದಲ್ಲಿ ಅನಾರೋಗ್ಯ ಕಾರಣದಿಂದ ಶಾಲೆಗೆ ಬಂದಿಲ್ಲಾ ಅದಕ್ಕೆ ಸೂಕ್ತವಾದ ಮೇಡಿಕಲ್ ದಾಖಲೆಗಳನ್ನು ಕೊಡಲಾಗಿದೆ. ಆದರೆ ಸರ್ಕಾರದ ನಿಯಮದಂತೆ 75% ಹಾಜರಾತಿ ಇಲ್ಲದ ವಿದ್ಯಾರ್ಥಿಗಳ ಪಟ್ಟಿಯನ್ನು ತೋರಿಸುವ ಪಟ್ಟಿಯಲ್ಲೆ ಈ ವಿದ್ಯಾರ್ಥಿನಿಯನ್ನು ಸೇರಿಸಿದ್ದಾರೆ , ಮತ್ತು ವಿದ್ಯಾರ್ಥಿನಿಯ ಎಕ್ಸಾಂ ಬರೆಯೋದಕ್ಕೆ ಅಪ್ಲಿಕೇಶನ್ ಸಹ ಹಾಕಿಲ್ಲಾ ಆದರೆ ಕೊನೆಯ ಘಳಿಗೆಯಲ್ಲಿ ಯತ್ನಿಸಿದ್ದಾರೆ. ಅವರ ತಪ್ಪಿನಿಂದ ಇಂದು ವಿದ್ಯಾರ್ಥಿನಿಗೆ ಅವಕಾಶ ವಂಚಿತಳಾಗಿದ್ದಾಳೆ ಮತ್ತು ಮುಂದಿನ ಅವಕಾಶದಲ್ಲಿ ಆಂತರಿಕ ಅಂಕಗಳು ಇಲ್ಲದೆ ಎಕ್ಸಾಂ ಬರೆಯಬೇಕಾಗುತ್ತದೆ ಇದರಿಂದ ಭಾರಿ ನಷ್ಟವಾಗುತ್ತದೆ ಎನ್ನುತ್ತಾರೆ ಪೋಷಕರು ಇದೇ ತರದ ವಿಷಯಗಳಿಂದ ಅನೇಕ ವಿದ್ಯಾರ್ಥಿಗಳ ಶೈಕ್ಷಣಿಕ ಜೀವನ ಅರ್ಧದಲ್ಲೆ ನಿಂತುಹೋಗುತ್ತದೆ ಮಕ್ಕಳ ಶಾಲೆಗೆ ಬರದೆ ಇದ್ದರೆ ಪೋಷಕರ ಗಮನಕ್ಕೆ ತಂದು ವಿದ್ಯಾರ್ಥಿ ಶೈಕ್ಷಣಿಕ ಜೀವನ ಉತ್ತಮಗೊಳಿಸುವ ಕೆಲಸ ಅಧಿಕಾರಿಗಳು ಮಾಡಬೇಕು ಸಂಬಂಧಿಸಿದ ನೂಡಲ್ ಅಧಿಕಾರಿಗಳು ಮುಖ್ಯಗುರುಗಳ ನಿರ್ಲಕ್ಷ್ಯ ಮನೋಭಾವದಿಂದ ಈ ಘಟನೆ ನಡೆದಿದೆ ಎನ್ನುತ್ತಿದ್ದರೆ ಅದುದರಿಂದ ಇದರ ಬಗ್ಗೆ ಸೂಕ್ತ ತನಿಖೆ ನಡೆಯಬೇಕು ಹಾಗೂ ಮುಂದೆಂದು ಇತರದ ಘಟನೆಗಳು ಹಗರಿಬೊಮ್ಮನಹಳ್ಳಿಯಲ್ಲಿ ಸೇರಿ ರಾಜ್ಯದಲ್ಲಿ ನಡೆಯದಂತೆ ಶಿಕ್ಷಣ ಇಲಾಖೆ ಕ್ರಮ ಕೈಗೊಳ್ಳಬೇಕು ಮತ್ತು 2025–2026 ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಗೆ 20243 ವಿದ್ಯಾರ್ಥಿಗಳು ನೋಂದಣಿ ಪಡೆದುಕೊಂಡಿದ್ದರು ಆದರೆ 19941 ಮಾತ್ರ ಪರೀಕ್ಷೆಗೆ ಹಾಜರು ಇನ್ನು ಉಳಿದಂತೆ 302 ವಿದ್ಯಾರ್ಥಿಗಳು ಗೈರು ಆಗಿದ್ದಾರೆ ಎಂದು ಪತ್ರಿಕೆ ಮಾಧ್ಯಮಗಳಲ್ಲಿ ಮಾಹಿತಿ ಪ್ರಕಟವಾಗಿದೆ, ಈ ವರ್ಷ ಯಾವದೇ ಅನಾಹುತ ಅಗಲಾರದಂತೆ ಪರೀಕ್ಷೆ ಯಶಸ್ವಿಯಾಗಿ ನಡೆಸಲಾಗಿದೆ ಇದಕ್ಕೆ ಜಿಲ್ಲಾಡಳಿತದ ಶ್ರಮಕ್ಕೆ ಇದಕ್ಕೆ ಎಸ್ ಎಫ್ ಐ ಸಂಘಟನೆಯು ಜಿಲ್ಲಾಡಳಿತಕ್ಕೆ ಅಭಿನಂದನೆಗಳುನ್ನು ಸಲ್ಲಿಸುತ್ತೇದೆ ಆದರೆ ಇನ್ನು ಉಳಿದಂತೆ 302 ವಿದ್ಯಾರ್ಥಿಗಳು ಗೈರು ಆಗಿರುವುದು ಅತ್ಯಂತ ವಿಷದಕರ ಸಂಗತಿಯಾಗಿದೆ, ಎಸ್ ಎಸ್ ಎಲ್ ಸಿ ಪರೀಕ್ಷೆಯು ವಿದ್ಯಾರ್ಥಿಗಳ ಮುಂದಿನ ಭವಿಷ್ಯದ ಪ್ರಮುಖ ಘಟ್ಟವಾಗಿದೆ ಆದರೆ ಕಳೆದ ಬಾರಿಗಿಂತ ಇಂದಿನ ವರ್ಷದಲ್ಲಿ ಅತೀ ಹೆಚ್ಚು ವಿದ್ಯಾರ್ಥಿಗಳು ಗೈರು ಆಗಿದ್ದಾರೆ, ವಿದ್ಯಾರ್ಥಿಗಳು ಗೈರು ಆಗಿರುವುದುರ ಬಗ್ಗೆ ಸೂಕ್ಷ್ಮವಾಗಿ ಗಮನಿಸಬೇಕಾದ ವಿಷಯವಾಗಿದೆ ತಾಲೂಕಿನ ಶಿಕ್ಷಣ ಅಧಿಕಾರಿಗಳು ಹಾಜರಿಪಡಿಸುವಂತೆ ಕ್ರಮವಹಿಸಬೇಕಾಗಿತ್ತು ಆದರೆ ಅವರ ಬೇಜವಾಬ್ದಾರಿಯೇ ಇದಕ್ಕೆ ನಿರ್ಲಕ್ಷ್ಯ ಕಾರಣವಾಗಿದೆ ಎಂಬವುದು ಸ್ಪಷ್ಟವಾಗಿ ಕಾಣುತ್ತಿದೆ ಅದರಲ್ಲಿ ಜಿಲ್ಲೆ ಕೇಂದ್ರವಾದ ಹೊಸಪೇಟೆಯಲ್ಲಿ ಅತೀ ಹೆಚ್ಚಾಗಿ 94 ವಿದ್ಯಾರ್ಥಿಗಳು ಗೈರು ಆಗಿದ್ದಾರೆ. ಹರಪನಹಳ್ಳಿ 67, ಹಗರಿಬೊಮ್ಮನಹಳ್ಳಿ 50, ಹೂವಿನಹಡಗಲಿ 22, ಕೂಡ್ಲಿಗಿ 69 ಒಟ್ಟು ಜಿಲ್ಲೆಯಲ್ಲಿ ಮೊದಲನೇ ಪರೀಕ್ಷೆಗೆ 302 ವಿದ್ಯಾರ್ಥಿಗಳು ಗೈರು ಅಗಿದ್ದು ಮುಂದಿನ ಪರೀಕ್ಷೆಗೆ ಹಾಜರಿ ಪಡಿಸುವಂತೆ ಜಿಲ್ಲಾ ಮತ್ತು ತಾಲೂಕಿನ ಶಿಕ್ಷಣ ಅಧಿಕಾರಿಗಳು ಕ್ರಮವಹಿಸಬೇಕೆಂದು ಒತ್ತಾಯಿಸುತ್ತದೆ.

# ಜಾಹಿರಾತು ಎಚ್ಚರ ಪಾಲಕರೇ ಎಚ್ಚರ

## ವಿಜಯಪುರದಲ್ಲಿ ಗಲ್ಲಿ ಗಲ್ಲಿಯಲ್ಲಿ ತಲೆ ಎತ್ತಿದೆ ಖಾಸಗಿ ಟ್ಯೂಷನ್ ಮಾಫಿಯಾ



**ಶಿಕ್ಷಣ-ಎಚ್ಚರ**
● ಮಧೂರ ತಿಳಗೂಳಕರ
ಜಿಲ್ಲಾ ವರದಿಗಾರರು

ಪ್ರತಿ ವರ್ಷ ಬೇಸಿಗೆಯಲ್ಲಿ ಶಾಲಾ ಮಕ್ಕಳಿಗೆ ರಜೆ ಸಿಗುತ್ತಿದ್ದಂತೆಯೆ ನೂರಾರು ಜಾಹಿರಾತುಗಳು ಪ್ಲೆಕ್ಸಗಳಲ್ಲಿ ಖಾಸಗಿ ಟ್ಯೂಷನ್ ಸೆಂಟರ್ ಗಳ ಜಾಹಿರಾತುಗಳು ಕಾಣಿಸಿಕೊಳ್ಳುತ್ತಿದ್ದು ಮಕ್ಕಳ ತರಬೇತಿ ಹೆಸರಿನಲ್ಲಿ ಪೋಚಕರಿಗೆ ದಿಕ್ಕು ತಪ್ಪಿಸಿ ಮಕ್ಮಲ್ ಟೋಪಿ ಹಾಕುವ ಕೆಲಸ ವಿಜಯಪುರ ಜಿಲ್ಲೆಯಾದ್ಯಂತ ಎಗ್ಗು ಸಿಗ್ಗಿಲ್ಲದೆ ನಡೆಯುತ್ತಿದೆ.

ವಿಜಯಪುರ ಪಟ್ಟಣದಲ್ಲಿ ಖಾಸಗಿ ಟ್ಯೂಷನ್ ಸೆಂಟರ್ಗಳ ಮಾಪಿಯಾ ನಡೆಸಲಾಗುತ್ತಿದೆ ಪ್ರತಿ ವರ್ಷ ಬೇಸಿಗೆ ರಜೆಯಲ್ಲಿ ಕೋಚಿಂಗ್ ಸೆಂಟರ್ ಎನ್ನುವ ಹೆಸರಿನಲ್ಲಿ ವಸತಿ ಶಾಲೆಗಳನ್ನು ನಡೆಸಲಾಗುತ್ತದೆ ಅನಧಿಕೃತವಾಗಿ ನಡೆಯುತ್ತಿರುವ ಈ ಖಾಸಗಿ ಕೋಚಿಂಗ್ ಸೆಂಟರ್ ಗಳಿಗೆ ಸರ್ಕಾರದಿಂದ ಯಾವುದೇ ಅನುಮತಿ ಇರುವುದಿಲ್ಲ ಆದ್ದರಿಂದ ಇಂತಹ ಅನಧಿಕೃತ ಕೋಚಿಂಗ್ ಸೆಂಟರ್ ಗಳ ಮೇಲೆ ನಿಗಾ



ವಹಿಸುವ ಮೂಲಕ ಕಡಿವಾಣ ಹಾಕಬೇಕೆಂದು ಸಾರ್ವಜನಿಕರ ಆಗ್ರಹ ಕೇಳಿ ಬರುತ್ತದೆ.

ಕಿತ್ತೂರು ರಾಣಿ ಚೆನ್ನಮ್ಮ, ಮುರಾರ್ಜಿ ವಸತಿ ಶಾಲೆ, ಸೈನಿಕ ಶಾಲೆಗಳ ಪರೀಕ್ಷೆಗೆ ಮಕ್ಕಳಿಗೆ ತರಬೇತಿ ನೀಡಿ ಸೇರಿಸಲಾಗುತ್ತದೆ ಎನ್ನುವ ನೆಪದಲ್ಲಿ ಟ್ಯೂಷನ್ ನಡೆಸಲಾಗುತ್ತಿದ್ದು ಅಲ್ಲಿ ಮಕ್ಕಳಿಗೆ ಯಾವುದೇ ಸುರಕ್ಷತೆ ಇರುವುದಿಲ್ಲ ಹಾಗೂ ಮೂಲಭೂತ ಸೌಲಭ್ಯಗಳು ಕೂಡ ಇರುವುದಿಲ್ಲ. ಆಟದ ಮೈದಾನ, ಸುಸಜ್ಜಿತ ಕಟ್ಟಡ,ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಸತಿ ಸೇರಿದಂತೆ ಶುದ್ಧ ಕುಡಿಯುವ ನೀರು ಮತ್ತು ಸ್ನಾನಕ್ಕೆ ಬಿಸಿನೀರು ಕೂಡ ಒದಗಿಸುವದಿಲ್ಲ. ಅಷ್ಟೇ ಅಲ್ಲದೆ ಖಾಸಗಿಯಾಗಿ ನಡೆಸುತ್ತಿರುವ ಕೋಚಿಂಗ್ ತರಬೇತಿ ಸೆಂಟರ್ ಗಳಿಗೆ ಯಾವುದೇ ಇಲಾಖೆ ಅನುಮತಿ ಇಲ್ಲದೆ ಇರುವುದು ಗಮನಾರ್ಹವಾಗಿದ್ದು ಅಮಾಯಕ ಪೋಷಕರನ್ನು ಮಕ್ಕಳ ತರಬೇತಿ ಹೆಸರಿನಲ್ಲಿ ವಂಚಿಸಲಾಗುತ್ತಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದಿವೆ.

ಇನ್ನು ಈ ಬಗ್ಗೆ ಶಿಕ್ಷಣ ಇಲಾಖೆ ಕೂಡ ಜಾಣ ಮೌನ ವಹಿಸಿದ್ದು ಬೇಸಿಗೆ ರಜೆಯಲ್ಲಿ ವಸತಿ ರಹಿತ ಟ್ಯೂಷನ್ ನಡೆಸುವುದಕ್ಕೆ ಬೇಕೆಂದರೆ ಅನುಮತಿ ನೀಡಲಿ ಆದರೆ ಮಕ್ಕಳಿಗೆ ಕೋಚಿಂಗ್ ಹೆಸರಿನಲ್ಲಿ ಹೆಚ್ಚಿನ ವಿದ್ಯಾಭ್ಯಾಸದ ಹೊರೆಯನ್ನು ಹೊರಿಸುವ ಮೂಲಕ ಮಾನಸಿಕ ಒತ್ತಡದ ಪರಿಸ್ಥಿತಿಯನ್ನು ನಿರ್ಮಿಸಲಾಗುತ್ತಿದ್ದು ಇದರಿಂದ ಮುಗ್ಧ ಮಕ್ಕಳು ಮಾನಸಿಕ ಒತ್ತಡಕ್ಕೆ ಒಳಗಾಗಿ ಪೋಷಕರೊಂದಿಗೆ ಬೆರೆಯುವ ಪರಿಸ್ಥಿತಿಯಲ್ಲಿ ಉಳಿಯುತ್ತಿಲ್ಲ ಎಂದು ಮಕ್ಕಳ ಪೋಷಕರು ಗಂಭೀರ ಆರೋಪವನ್ನು ಮಾಡಿದ್ದಾರೆ ಜಿಲ್ಲಾಡಳಿತ ಮತ್ತು ಶಿಕ್ಷಣ ಇಲಾಖೆ ಇನ್ನಾದರೂ ಅನಧಿಕೃತ ಕೋಚಿಂಗ್ ಸೆಂಟರ್ ಮಾಫಿಯಾಕ್ಕೆ ಕಡಿವಾಣ ಹಾಕುತ್ತಾ ಅಂತ ಕಾಯ್ದು ನೋಡಬೇಕಿದೆ.

ಒಟ್ಟಾರೆಯಾಗಿ ಪಾಲಕರು ತಮ್ಮ ಮಕ್ಕಳಿಗೆ ಯಾವ ಸಮಯದಲ್ಲಿ ತಮ್ಮ ಮಕ್ಕಳಿಗೆ ಉತ್ತಮ ಭವಿಷ್ಯ ನಿರ್ಮಿಸುವುದರ ಒತ್ತಡದಲ್ಲಿ ಮಕ್ಕಳ ಜೀವನದ ಜೊತೆ ಆಟವಾಡುತ್ತಿರುವುದು ವಿಪರ್ಯಾಸವೇ ಸರಿ ಎಚ್ಚರ ಪಾಲಕರೇ ಎಚ್ಚರ.



ಅನಧಿಕೃತ ಮಕ್ಕಳ ತರಬೇತಿ ಕೇಂದ್ರಗಳ ನಡೆಸುತ್ತಿರುವ ಮಾಹಿತಿ ಬಂದಿದ್ದು ಪರವಾಣಿಗೆ ಇಲ್ಲದೆ ಯಾವುದೇ ತರಬೇತಿ ನಡೆಸುವಂತಿಲ್ಲ ಈ ಬಗ್ಗೆ ಡಿಡಿಪಿಐ ಅವರಿಗೆ ನಾನು ಮಾಹಿತಿ ಸಲ್ಲಿಸುತ್ತೇನೆ. ಜೂನ್ ಆರಂಭದಿಂದ ರಜೆಯವರೆಗೆ ಮಕ್ಕಳು ವಿದ್ಯಾಭ್ಯಾಸ ಮಾಡುತ್ತ ಇದ್ದು ಅವರನ್ನು ಮಾನಸಿಕ ಒತ್ತಡದಿಂದ ಹೊರ ತರಲು ಬೇಸಿಗೆ ರಜೆ ನೀಡುವ ವಾಡಿಕೆ ಇದೆ.ಆದರೆ ಇದು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಖಾಸಗಿ ಟ್ಯೂಷನ್ ಮಾಫಿಯಾ ಮಾರಕವಾಗಿದ್ದು ಇದರಿಂದ ಮಕ್ಕಳು ಮಾನಸಿಕ ಖಿನ್ನತೆಗೆ ಒಳಗಾಗುತ್ತಿರುವದು,ಆತ್ಮಹತ್ಯೆ ಹಾದಿ ತುಳಿಯುವದು ನಡೆಯುತ್ತಿದ್ದು ಈ ಬಗ್ಗೆ ಶಿಕ್ಷಣ ಇಲಾಖೆ ಕ್ರಮ ವಹಿಸಬೇಕು.

–ಮಂಜುಳಾ ಆನಂದ
ಮಕ್ಕಳ ಹಕ್ಕುಗಳ ಆಯೊಗದ ಸದಸ್ಯೆ

## ಶ್ರೀ ರೇಣುಕಾಚಾರ್ಯರ ವೃತ್ತ ಉದ್ಘಾಟನೆ

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

19 ನಗರದ ವೀರಶೈವ ಲಿಂಗಾಯತ ಸಮಾಜದ ವತಿಯಿಂದ ಕೊಪ್ಪಳ ಮತ್ತು ರಾಯಚೂರು ಹೆದ್ದಾರಿ ಎಪಿಎಂಸಿ ಪ್ರಥಮ ಗೇಟ್ ಮುಂಭಾಗದಲ್ಲಿ ಶ್ರೀ ರೇಣುಕಾಚಾರ್ಯರ ವೃತ್ತ ಉದ್ಘಾಟನೆಯನ್ನು ನೆರವೇರಿಸಲಾಯಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಬೃಹನ್ ಮಠ ಹೆಬ್ಬಾಳ ಶ್ರೀ ನಾಗಭೂಷಣ ಶಿವಚಾರ್ಯ ಮಹಾಸ್ವಾಮಿಗಳು ಸಾನಿಧ್ಯ ವಹಿಸಿಕೊಂಡಿದ್ದರು.

ನಂತರ ಮಾತನಾಡಿದ ಮಾಜಿ ಶಾಸಕರಾದ ಪರಣ್ಣ ಮುನವಳ್ಳಿ ಅವರು ರೇಣುಕಾಚಾರ್ಯರು ಕೇವಲ ಒಂದು ಜಾತಿ ಒಂದು ಸಮಾಜಕ್ಕೆ ಮೀಸಲಾಗಿಲ್ಲ, ಅವರು ಮಾನವ ಧರ್ಮಕ್ಕೆ ಜಯವಾಗಲಿ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಸಂದೇಶವನ್ನು ಸಾರಿದ್ದಾರೆ ಶರಣರು ಹಾಕಿಕೊಟ್ಟರುವ ಹಾದಿಯಲ್ಲಿ ನಾವು ನೀವೆಲ್ಲರೂ ಪರಿಶುದ್ಧತೆಯಿಂದ ನಡೆದುಕೊಳ್ಳಬೇಕು, ಅವರ ಮಾರ್ಗದರ್ಶನ ಆದರ್ಶಗಳು ಇಂದಿನ ಸಮಾಜಕ್ಕೆ ಅತ್ಯಗತ್ಯವಾಗಿವೆ ಎಂದರು. ನಂತರ ಮಾತನಾಡಿದ




ಮಾಜಿ ಸಂಸದ ಎಸ್. ಶಿವರಾಮಗೌಡ ಮಾತನಾಡಿ ಶ್ರೀ ರೇಣುಕಾಚಾರ್ಯರ ವೃತ್ತ ಬಹುದಿನಗಳಿಂದ ಬೇಡಿಕೆ ಇತ್ತು ಈಗ ಅದು ಕಾಯಕಲ್ಪಕ್ಕೆ ಬಂದು ನಿಂತಿದ್ದು, ಸಮಾಜದ ಎಲ್ಲಾ ಒಳಪಂಗಡಗಳು ಒಂದಾಗಿ ಮುನ್ನಡೆದರೆ ಮಾತ್ರ ಒಗ್ಗಟ್ಟು ಇರಲು ಸಾಧ್ಯವಾಗುತ್ತದೆ, ಕೈಯಲ್ಲಿನ ಐದು ಬೆರಳುಗಳು ಸಮಾನಾಂತರವಾಗಿ ಇಲ್ಲದಿದ್ದರೂ ಸಹ, ಮಾನವ ಮನೆಯಲ್ಲಿ ಊಟ ಮಾಡುವಾಗ ಒಗ್ಗಟ್ಟಿನಿಂದ ತುತ್ತನ್ನು ತಿನ್ನಿಸುತ್ತವೆ ಹಾಗಾಗಿ ಒಡೆದು ಹೋದ ಮತ್ತು ಒಳಪಂಗಡ ಸಂಘಟನೆಗಳು ಸಮಾಜದ ಕಾರ್ಯ ಚಟುವಟಿಕೆಗಳಲ್ಲಿ ಯಶಸ್ವಿಯಾಗಬೇಕೆಂದರೆ ಸಮಾಜದ ವೀರಶೈವ ಲಿಂಗಾಯಿತರು ಒಂದಾಗಬೇಕು ಎಂದರು.

## ನೀರಾನೆ ದಾಳಿ, ಪಶುವೈದ್ಯೆ ಸಾವು: ಸಂತಾಪ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಶಿವಮೊಗ್ಗದ ತಾವರೆಕೊಪ್ಪ ಮೃಗಾಲಯದಲ್ಲಿ ವನ್ಯಜೀವಿಗೆ ಚಿಕಿತ್ಸೆ ನೀಡಲು ತೆರಳಿದ್ದ ಪಶುವೈದ್ಯೆ ನೀರಾನೆ(Hippopotamus)ದಾಳಿಯಿಂದ ಮೃತಪಟ್ಟಿದ್ದು, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಸಂತಾಪ ಸೂಚಿಸಿದ್ದಾರೆ.



ಇದೊಂದು ದುರದೃಷ್ಟಕರ ಘಟನೆ ಎಂದು ಶೋಕ ವ್ಯಕ್ತಪಡಿಸಿರುವ ಅವರು, ಈ ದುಃಖದ ಸಂದರ್ಭದಲ್ಲಿ ಮೃತ ವೈದ್ಯರ ಕುಟುಂಬದೊಂದಿಗೆ ಸರ್ಕಾರ ನಿಲ್ಲುತ್ತದೆ. ಪ್ರತಿಯೊಂದು ಜೀವವೂ ಅಮೂಲ್ಯ. ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ದೇವರು ನೀಡಲಿ ಎಂದು ಪ್ರಾರ್ಥಿಸಿದ್ದಾರೆ. ಮೃತ ಯುವ ವೈದ್ಯೆಯ ಕುಟುಂಬದವರಿಗೆ ನಿಯಮಾನುಸಾರ ಕೂಡಲೇ ಪರಿಹಾರ ನೀಡುವಂತೆ ಸೂಚಿಸಿರುವ ಅವರು, ರಾಜ್ಯದ ಎಲ್ಲ ಮೃಗಾಲಯಗಳಲ್ಲಿರುವ ಪಶುವೈದ್ಯರು ಯಾವುದೇ ವನ್ಯಜೀವಿಗೆ ಚಿಕಿತ್ಸೆ ನೀಡುವಾಗ ಪ್ರಮಾಣಿತ ಮಾನದಂಡ (ಎಸ್.ಓ.ಪಿ.) ಪಾಲಿಸಬೇಕು ಎಂದೂ ಸ್ಪಷ್ಟ ಸೂಚನೆ ನೀಡಿದ್ದಾರೆ.

ಈ ದುರಂತದ ಬಗ್ಗೆ ಹಿರಿಯ ಪಶುವೈದ್ಯರು ಹಾಗೂ ಅರಣ್ಯಾಧಿಕಾರಿಗಳನ್ನು ಒಳಗೊಂಡ ತಂಡದಿಂದ ತನಿಖೆ ಮಾಡಿಸಿ, 7 ದಿನಗಳ ಒಳಗಾಗಿ ವರದಿ ನೀಡುವಂತೆಯೂ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ. ಇತ್ತೀಚೆಗಷ್ಟೇ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡಿದ್ದ ಡಾ ಸಮೀಕ್ಷಾ ರೆಡ್ಡಿ ಅವರು ನಿನ್ನೆ ರಾತ್ರಿ 11.30ರ ಸಮಯದಲ್ಲಿ ವನ್ಯಜೀವಿಯೊಂದಕ್ಕೆ ಚಿಕಿತ್ಸೆ ನೀಡಲು ತೆರಳಿದ್ದಾಗ, ನೀರಾನೆ ದಾಳಿಯಿಂದ ಗಾಯಗೊಂಡಿದ್ದರು. ಅವರನ್ನು ಕೂಡಲೇ ಶಿವಮೊಗ್ಗದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಇಂದು ಬೆಳಗ್ಗೆ 6.30ರ ಸುಮಾರಿನಲ್ಲಿ ಅವರು ಕೊನೆಯುಸಿರೆಳೆದರು ಎಂದು ವೈದ್ಯರು ತಿಳಿಸಿದ್ದಾರೆ.

## ಕನ್ನಡಿಗರ 16ನೇ ಸಾಂಸ್ಕೃತಿಕ ಸಮ್ಮೇಳನಕ್ಕೆ ಮುಖ್ಯಮಂತ್ರಿ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ ಗೋವಾ

ಗೋವಾದ ಬಿಚ್ಚುಲಿಯಂನಲ್ಲಿ 16ನೇ ಬಾರಿಗೆ ಕನ್ನಡಿಗರ ಸಾಂಸ್ಕೃತಿಕ ಸಮ್ಮೇಳನವನ್ನ ಕರ್ನಾಟಕ ಜಾಗೃತಿ ವೇದಿಕೆ ಬೆಂಗಳೂರು ಮತ್ತು ಕರ್ಮಭೂಮಿ ಕನ್ನಡ ಸಂಘ ಬಿಚ್ಚುಲಿಯಂ ಜಂಟಿಯಾಗಿ ಆಯೋಜಿಸಲಾಗಿತ್ತು. ಅದ್ದೂರಿ ಮೆರವಣಿಗೆಗೆ ಶ್ರೀ ಪ್ರಮೋದ್ ಸಾವಂತ್ ಅವರು ಚಾಲನೆ ನೀಡಿದರು.

751 ಮಹಿಳೆಯರು ಪೂರ್ಣ ಕುಂಬ ಹೊತ್ತು ಗೋವಾದ ಮಹಿಳೆಯರು ಸಮ್ಮೇಳನಾಧ್ಯಕ್ಷ ಶ್ರೀ ಸಂಗನಬಸಪ್ಪ ಬಿರಾದರ ಅವರನ್ನ ತೆರೆದ ಸಾರೋಟದಲ್ಲಿ ವೀರಗಾಸೆ ಡೊಳ್ಳು ಕುಣಿತ ಸಮಾಳ ಹಾಗೂ ಇತರೆ ಕಲಾತಂಡಗಳ ಅದ್ದೂರಿ ಮೆರವಣಿಗೆ ಮೂಲಕ ಸಭಾಂಗಣಕ್ಕೆ ತರಲಾಯಿತು. ಸಮ್ಮೇಳನಾಧ್ಯಕ್ಷ ಶ್ರೀ ಸಂಗನಬಸಪ್ಪ ಬಿರಾದರವರು ಗೋವಾದ ಮುಖ್ಯಮಂತ್ರಿಗಳಿಗೆ ಕನ್ನಡದ ಶಾಲು ಹಾಕುವ ಮೂಲಕ ಅವರನ್ನ ಸ್ವಾಗತಿಸಿದರು.



ಸಂಚಾಲಕರಾದ ಮಹೇಶ್ ಬಾಬು ಸುರ್ವೆಯವರು ಗೋವಾದ ಮುಖ್ಯಮಂತ್ರಿಗಳಾದ ಶ್ರೀ ಪ್ರಮೋದ್ ಸಾವಂತ್ ಅವರನ್ನ ಮೈಸೂರ್ ಪೇಟ ತೋಡಿಸಿ ಹಾರ ನನಪಿನ ಕಾಣಿಕೆ ಫಲ ಪುಷ್ಪ ತಾಂಬೂಲಗಳೊಂದಿಗೆ ನೆರೆದಿದ್ದ ಸಹಸ್ರಾರು ಕನ್ನಡಿಗರ. ಪ್ರೇಕ್ಷಕರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಹುಕ್ಕೇರಿಯ ಶ್ರೀ ಚಂದ್ರಶೇಖರ್, ಶಿವಾಚಾರ್ಯ ಮಹಾಸ್ವಾಮಿಜಿ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಅಧ್ಯಕ್ಷ ಸೋಮಣ್ಣ ಬೇವಿನಮರ, ಕಾರ್ಯದರ್ಶಿ ಪ್ರಕಾಶ್ ಮತ್ತಿಹಳ್ಳಿ, ಕರ್ನಾಟಕ ಹಾಪ್ ಕಾಮ್ಸ್ ಅಧ್ಯಕ್ಷ ಮಹಾದೇವಪ್ಪ ಕಟ್ಟಗಿ, ಗೋವಾದ ಮೆಚ್ಚುಲಿಯಂನ ಮಾಜಿ ನಗರಸಭಾ ಸದಸ್ಯ ಭಗವಾನ್ ಹಲಮನಕರ್, ಕರ್ಮ ಭೂಮಿ ಕನ್ನಡ ಸಂಘದ ಅಧ್ಯಕ್ಷ ಶ್ರೀ ಹನುಮಂತರ್ಡ್ಡೆ, ಶಿರೂರು ಕರ್ನಾಟಕ ಜಾಗೃತಿ ವೇದಿಕೆಯ ಅಧ್ಯಕ್ಷ ಕೆ ಎಲ್ ಕುಂದರಗಿ, ಉಪಾಧ್ಯಕ್ಷ ರವೀಂದ್ರ ತೋಟಗೇರ್, ಕಾರ್ಯದರ್ಶಿ ಜೀ ನಂದೀಶ್, ಬೆಂಗಳೂರು ಸಹ ಕಾರ್ಯದರ್ಶಿ ಪ್ರಕಾಶ್ ಅಳ್ಳೊಳ್ಳಿ, ಬೆಳಗಾವ್ ಮದ್ದು ಕರ್ಮ ಭೂಮಿ ಕನ್ನಡ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಸಮಾಜಘಾತುಕ ಶಕ್ತಿಗಳಿಗೆ ವಾರ್ನಿಂಗ್, ಅಕ್ರಮ ದಂಧೆಗಳಿಗೆ ಬ್ರೇಕ್



**ಆಡಳಿತ-ಅಭಿನಂದನೆ**
● ಚನ್ನಕೇಶವ
ವರದಿಗಾರರು, ಕಂಪ್ಲಿ

ಬಳ್ಳಾರಿ ಜಿಲ್ಲೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಬಂದಿರುವ ಡಾ.ಸುಮನ್.ಡಿ.ಪೆನ್ನೇಕರ್ ಅವರು ಇದಕ್ಕೆ ಪರ್ಯಾಯವಾಗಿ ಬಂದಿದ್ದಾರೆ. ಜಿಲ್ಲೆಯಲ್ಲಿ ಶಾಂತಿ, ನೆಮ್ಮದಿಗಾಗಿ ಎಲ್ಲ ದುಷ್ಟ ಶಕ್ತಿಗಳು ಸುಮ್ಮನಿದ್ದರೆ ಸುಮನ್ ಡಿ. ಪೆನ್ನೇಕರ್ ಶಾಂತಿಯಾಗಿರುತ್ತಾರೆ . ಬಾಲ ಬಿಚ್ಚಿದರೆ ಮಾತ್ರ ಬೆಂಕಿ ಬಿರುಗಾಳಿಯಾಗುತ್ತಾರೆ. ಇದು ಅವರ ಕರ್ತವ್ಯ ಪ್ರಜ್ಞೆಗೆ ನಾಡಿನ ಜನತೆ ನೀಡಿದ ಅಭಿಪ್ರಾಯ ವಿಶೇಷವಾಗಿದೆ.

ಜುಲೈ 30 1985 ರಂದು ಜನಿಸಿದರು. ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಬಿಡಿ ಅನ್ನುವ ಗ್ರಾಮ ಇವರ ಹುಟ್ಟೂರು. ಇವರ ತಂದೆಯವರು ಶಾಲಾ ಶಿಕ್ಷಕರಾಗಿದ್ದರು, ತಂದೆ ದಿನಾಲೂ ದಿನಪತ್ರಿಕೆಗಳನ್ನು ತರುತ್ತಿದ್ದರು ಅದನ್ನು ಸುಮನ್ ರವರು ಓದುತ್ತಿದ್ದರು, ಅಗಾ ಬೆಳಗಾವಿಯಲ್ಲಿ ಒಬ್ಬ ಲೇಡಿ ಡಿ. ಸಿ. ಕೆಲಸ ನಿರ್ವಹಿಸುತ್ತಿದ್ದರು ಅವರ ಬಗ್ಗೆ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿತ್ತು. ತಂದೆಯವರು ಕೂಡ ಇವರ ಹಾಗೆ ನೀನು ಆಗಬೇಕು ಎಂದು ಸ್ಫೂರ್ತಿ ತುಂಬುತ್ತಿದ್ದರು, ಹೀಗೆ ಸ್ಫೂರ್ತಿ ಪಡೆದು ಜೀವನದಲ್ಲಿ ಏನಾದರೂ ಮಾಡಲೇಬೇಕು ಎಂಬ ಪಣತೊಟ್ಟರು. ಓದಿನಲ್ಲಿ ಮುಂದೆ ಇದ್ದ ಸುಮನ್ 2009ರಲ್ಲಿ ಆಯುರ್ವೇದ ಡಾಕ್ಟರಾದರು. ವೈದ್ಯೆಯಾಗಿ ಜನರ ಸೇವೆ ಮಾಡಬೇಕೆಂಬ ಹಂಬಲ ಇದ್ದಾಗ ಕುಟುಂಬದವರು ಸುಮನ್ ರವರಿಗೆ ವಿವಾಹ ಮಾಡಿದರು. ನಂತರ ಯುಪಿಎಸ್ಸಿ ಪರೀಕ್ಷೆ ಬರೆದು ಕುಟುಂಬದ ಸಹಕಾರದೊಂದಿಗೆ ಐಪಿಎಸ್ ಅಧಿಕಾರಿಯಾದರು.

**ಬಳ್ಳಾರಿಗೆ ಬಂದ ದಕ್ಷ ಅಧಿಕಾರಿ:** ಬಿಸಿಲೂರಿನ ಬಳ್ಳಾರಿಯಲ್ಲಿ ಜನವರಿ 1 ರಿಂದಲೇ ದೊಡ್ಡ ಮಟ್ಟದ ದಾಂಧಲೇ ನಡೆದಿತ್ತು. ಮಹರ್ಷಿ ವಾಲ್ಮೀಕಿ ಪುತ್ಥಳಿ ಅನಾವರಣಕ್ಕಾಗಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಬ್ಯಾನರ್ ಅಳವಡಿಸಲು ಮುಂದಾದಾಗ ಬಿಜೆಪಿಯ ರೆಡ್ಡಿ, ರಾಮುಲು ಮತ್ತು ಕೈ ಪಕ್ಷದ ಶಾಸಕ ನಾರಾ ಭರತ್ ರೆಡ್ಡಿ ನಡುವೆ ದೊಡ್ಡ ಮಟ್ಟದ ಕಾಳಗ ನಡೆಯಿತು. ಆಗ ತಾನೇ ಡಾ.ಶೋಭಾರಾಣಿ ವಿ. ಜೆ. ಮಂಡ್ಯ ಜಿಲ್ಲೆಗೆ ವರ್ಗಾವಣೆ ಆಗಿದ್ದರು. ಅವರ ಸ್ಥಾನಕ್ಕೆ ಪವನ್ ನೆಜ್ಜೂರ್ ಎನ್ನುವ ಎಸ್.ಪಿ. ಕಾಲಿರಿಸಿದ್ದರು. ಅಷ್ಟರೊಳಗೆ ಬಳ್ಳಾರಿಯಲ್ಲಿ ಗುಂಪು ಘರ್ಷಣೆ ನಡೆದು ಹೋಗಿ, ಓರ್ವ ಕಾರ್ಯಕರ್ತ ಗುಂಡಿಗೆ ಬಲಿಯಾಗಿ ಬಿಟ್ಟ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಘಟನೆಯನ್ನು ನಿಭಾಯಿಸುವಲ್ಲಿ ವಿಫಲವಾದ ಹೊಸ ಎಸ್.ಪಿ.ಯನ್ನು ಕೂಡಲೇ ಅಮಾನತ್ತು ಮಾಡಿ ಉಸ್ತುವಾರಿ ಎಸ್ಪಿಯಾಗಿ ರಂಜಿತ್ ಕುಮಾರ್ ಬಂಡಾರುವರನ್ನು ನೇಮಿಸಿತು. ಇದರ ಹಿಂದೆಯೇ ಐಜಿಪಿ ವರ್ತಿಕಾ ಕಟಿಯಾರ್ ಅವರನ್ನೂ ಸಹ ವರ್ಗಾವಣೆ ಮಾಡಿತು. ಬಳಿಕ ಬಳ್ಳಾರಿ ಘಟನೆಯನ್ನು ನಿಭಾಯಿಸಲು ತನಿಖೆ ನಡೆಸಲು ಜಿಲ್ಲೆಯ ಕಾನೂನು ಸುವ್ಯವಸ್ಥೆಯನ್ನು ಹತೋಟಿಗೆ ತರಲು ನೂತನ ಎಸ್ಪಿಯಾಗಿ ಡಾ. ಸುಮನ್ ಡಿ. ಪನ್ನೇಕರ್ ಅವರನ್ನು ರಾಜ್ಯ ಸರ್ಕಾರ ಬಳ್ಳಾರಿ ಎಸ್ಪಿಯಾಗಿ ನಿಯೋಜಿಸಿತು. ಅಷ್ಟೇ ಅಲ್ಲ. ಬಳ್ಳಾರಿಯಲ್ಲಿ ಕಾನೂನು ಸುವ್ಯವಸ್ಥೆ



ಹದಗೆಟ್ಟು ಹೋಗಿದೆ. ಅಲ್ಲಿನ ವಾಸ್ತವ ಅರಿತು. ಘರ್ಷಣೆಗೆ ಕಾರಣರಾದ ಯಾರೇ ಇರಲಿ, ಅವರನ್ನು ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮಕ್ಕೆ ಒಳಪಡಿಸುವಂತೆ ಖುದ್ದು ಸಿಎಂ ಸಿದ್ದರಾಮಯ್ಯ ಅವರೆ ಡಾ.ಸುಮನ್ ಡಿ ಪೆನ್ನೇಕರ್ ಅವರಿಗೆ ಹೇಳಿ ಬಳ್ಳಾರಿಗೆ ಕಳುಹಿಸಿಕೊಟ್ಟಿದ್ದಾರೆ. ಬಳ್ಳಾರಿಗೆ ಬಂದ ವೀರನಾರಿ ಇದೀಗ ಇಲ್ಲಿನ ಸಮಾಜಘಾತುಕ ಶಕ್ತಿಗಳನ್ನು ಒಂದೊಂದಾಗಿ ಫುಟ್ಬಾಲ್ ಆಡುತ್ತಿದ್ದಾರೆ.

ಹೌದು...ಡಾ.ಸುಮನ್.ಡಿ.ಪೆನ್ನೇಕರ್ ಅವರು ಕರ್ನಾಟಕ ಕೇಡರ್‌ನ 2013 ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿ. ಈಗಾಗಲೇ 2018 ರಿಂದ ಕೊಡಗು ಜಿಲ್ಲೆಯ ಎಸ್ಪಿಯಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಸಮಾಜ ಸೇವೆ ಮತ್ತು ಪೊಲೀಸ್ ಆಡಳಿತದಲ್ಲಿ ತಮ್ಮ ಕಾರ್ಯ ಚಟುವಟಿಕೆಗಳಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದಾರೆ. ದಕ್ಷತೆ. ನಿಷ್ಠುರತೆ, ಕರ್ತವ್ಯನಿಷ್ಠೆಗೆ ಮತ್ತು ಮಾನವೀಯ ಆಡಳಿತಕ್ಕೆ ತಮ್ಮನ್ನು ತಾವು ದಕ್ಷತೆಯಿಂದ ಗುರುತಿಸಿಕೊಂಡಿದ್ದಾರೆ. ಕೊಡಗು–ಮಡಿಕೇರಿಯಲ್ಲಿ ಪ್ರವಾಹ ಉಂಟಾದಾಗ ಡಾ.ಸುಮನ್ ಪೆನ್ನೇಕರ್ ಅಕ್ಷರಶಃ ನಿದ್ದೆ ಮಾಡದೇ ಇರುವ ದಿನಗಳು ಅವು ಹಗಲೂ ರಾತ್ರಿ ಸಂತ್ರಸ್ಥರಿಗಾಗಿ ಮಿಡಿದಿದ್ದಾರೆ. ಪೊಲೀಸ್ ಇಲಾಖೆಯ ಸಮಗ್ರಶಕ್ತಿಯನ್ನು ಬಳಸಿ. ಅಲ್ಲಿನ ಜನತೆಗೆ ಸ್ಪಂದಿಸಿದ್ದಾರೆ.

ಶ್ರೀ ರೇಣುಕಾ ಎಲ್ಲಮ್ಮ ನೆಲೆಸಿರುವ ಬೆಳಗಾವಿ ಜಿಲ್ಲೆಯ ಮಣ್ಣಿನವರು. ಹೇಳಿ ಕೇಳಿ ಕ್ರಾಂತಿಕಾರಿಗಳ ಹಳ್ಳಿ ಸೊಗಡಿನಿಂದ ಬಂದಿರುವ ಡಾ.ಸುಮನ್ ಪೆನ್ನೇಕರ್ ಮೊದಲು ಎಸ್ಪಿಯಾಗಿದ್ದೇ, ಕೊಡಗು ಜಿಲ್ಲೆಗೆ. 2018 ರಲ್ಲಿ ಮಡಿಕೇರಿ ಅತಿವೃಷ್ಟಿಯ ಪ್ರವಾಹ, ಪ್ರಕೃತಿಯ ಅವಾಂತರಗಳನ್ನು ಎನ್‌ಡಿಆರ್.ಎಫ್ ನೊಂದಿಗೆ ಶ್ರಮವಹಿಸಿ, ನಿರ್ವಹಿಸಿ ಬಂದವರು. ದಕ್ಷ, ಪ್ರಾಮಾಣಿಕತೆ, ನಿಷ್ಠೆ ಮತ್ತು ನಿಷ್ಠುರ ನಡೆ ಇವರ ಕರ್ತವ್ಯದ ಪರಮಾವಧಿಯಾದರೂ ಸಜ್ಜನರಿಗೆ ಪರಮ ಔಷಧಿಯಾಗಿದೆ. ಇವರ ಆಡಳಿತ ಬಳಸಿ, ಅಲ್ಲಿನ ಜನತೆಗೆ ಸ್ಪಂದಿಸಿ ಜನರ ಮನಸ್ಸಿನಲ್ಲಿ ನೆಲೆಸಿದ್ದಾರೆ.

**ಉತ್ತರ ಕನ್ನಡಕ್ಕೆ:** ಸರ್ಕಾರಿ ನೌಕರರಿಗೆ ಸಹಜವಾಗಿ ವರ್ಗಾವಣೆ ಇರುವಂತೆ ಇವರಿಗೆ ಕೊಡಗಿನಿಂದ ಉತ್ತರ ಕನ್ನಡದ ಕಾರವಾರ ಜಿಲ್ಲೆಗೆ ಸರ್ಕಾರ ವರ್ಗಾವಣೆ ಮಾಡಿತ್ತು. ಕಾರವಾರಕ್ಕೆ ಬಂದಾಗ ಇವರಿಗೆ ಎದುರಾದ ಸವಾಲುಗಳು ಒಂದೆರಡಲ್ಲ. ಕೊಡಗಿನ ಪ್ರಕೃತಿ. ರಮಣೀಯತೆಯ ನಡುವೆ ಮಳೆ ಅವಾಂತರದಿಂದ ರೌದ್ರಾವತಾರ ತಾಳಿದ ಪ್ರಕೃತಿಯನ್ನು ಮಣಿಸಿ, ಜನರನ್ನು ಪಾಲಿಸಿ ಬಂದಿದ್ದ ಡಾ.ಸುಮನ್ ಪೆನ್ನೇಕರ್ ಅವರಿಗೆ ಕಾರವಾರದ ಪರಿಸ್ಥಿತಿ ಮತ್ತೊಂದು ರೀತಿಯ ಅನುಭವ ನೀಡಿತ್ತು. ಅಲ್ಲಿನ ರಾಜಕಾರಣಿಗಳ ಹಿಡಿತ, ಪ್ರಭಾವದಿಂದ ನಡೆಯುತ್ತಿರುವ ಎಲ್ಲಾ ಬಗೆಯ ಸಮಾಜ ಘಾತುಕ ಚಟುವಟಿಕೆಗಳನ್ನು ಹತ್ತಿಕ್ಕಲು ಮುಂದಾದರು. ಮಟಕಾ, ಗಾಂಜಾ, ಅಫೀಮು. ಇಸ್ಪೀಟ್, ಜೂಜಾಟ, ಗ್ಯಾಂಬ್ಲಿಂಗ್ ಸೇರಿದಂತೆ ಹಲವು ಬಗೆಯ ದುಷ್ಕೃತ್ಯಗಳು ನಡೆಯುತ್ತಿದ್ದವು. ಇವುಗಳನ್ನು ಹಂತ ಹಂತವಾಗಿ ಸದೆ ಬಡಿದ ಡಾ.ಸುಮನ್ ಪೆನ್ನೇಕರ ಅವರಿಗೆ ಸಹಜವಾಗಿ ಅಲ್ಲಿನ ರಾಜಕಾರಣಿಗಳೇ ಕೆಂಡಕಾರತೊಡಗಿದರು. ರೌಡಿ ಪಟಾಲಂಗಳು ಇವರ ಕರ್ತವ್ಯಕ್ಕೆ ಅಡ್ಡಿಪಡಿಸಲು ಯತ್ನಿಸಿದರು. ನಾನಾ ಬಗೆಯ ರಾಜಕಾರಣ ಮಾಡಿದರು. ಯಾರೇ ಏನೇ ಮಾಡಿದರೂ ಇವರು ತಮ್ಮ ಕೆಲಸವನ್ನು ನಿಷ್ಠೆಯಿಂದ ಮಾಡಿ ಎಲ್ಲ ಸಮಾಜ ಘಾತುಕ ಚಟುವಟಿಕೆಗಳನ್ನು ಮಟ್ಟ ಹಾಕಿದರು. ಪ್ರಾಮಾಣಿಕತೆಗೆ ಅಧಿಕಾರಿಗೆ ಅಪ್ರಾಮಾಣಿಕ ರಾಜಕಾರಣಿಗಳು ಇನ್ನೇನು ಮಾಡಲು ಸಾಧ್ಯ? ಇವರನ್ನು ವರ್ಗಾವಣೆ ಮಾಡಿಸಿಯೇ ಬಿಟ್ಟರು. ಅನೇಕ ಪ್ರತಿಭಟನೆ ಪತ್ರಿಕಾಗೋಷ್ಠಿಗಳು ನಡೆದು ಇವರ ವರ್ಗಾವಣೆಗೆ ಅಲ್ಲಿನ ಸ್ಥಳೀಯರು ತೀವ್ರ ವಿರೋಧ ವ್ಯಕ್ತಪಡಿಸಿದರು.

ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಸಮಬಲ ರಾಜಕಾರಣಿಗಳ ನಡುವೆ ಮಂಡ್ಯ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಗಿಂತ ಅಲ್ಲಿನ ರಾಜಕಾರಣಿಗಳ ಜೊತೆ ಹೆಣಗಾಡುವುದೇ ದೊಡ್ಡ ಸವಾಲು. ಬಹಳ ಕ್ಲಿಷ್ಟಕರ ಕೆಲಸ. ಕಾರವಾರದಿಂದ ನೇರವಾಗಿ ಮಂಡಕ್ಕೆ ಬಂದ ಡಾ.ಸುಮನ್ ಪೆನ್ನೇಕರ್ ಅವರಿಗೆ ಪೋಸ್ಟಿಂಗ್ ಆದರೂ ಕರ್ತವ್ಯಕ್ಕೆ ಸಾಧ್ಯವಾಗಲಿಲ್ಲ. ಆ ದಿನಗಳನ್ನು ಖಾಲಿಯಾಗಿಯೇ ಕಳೆದರು, ಒಬ್ಬ ಎಸ್ಪಿಗೆ ಸರಕಾರ ಪೋಸ್ಟಿಂಗ್ ಕೊಟ್ಟರು. ಸ್ಥಳೀಯ ರಾಜಕಾರಣಿ ಚಿತಾವಣಿಗೆ ಡ್ಯೂಟಿ ರಿಪೋರ್ಟ್ ಮಾಡಲಾಗಲಿಲ್ಲ ಅಂದರೆ ಅಲ್ಲಿನ ರಾಜಕಾರಣಿಗಳಿಗೆ ಸುಮನ್ ರವರ ಬಗ್ಗೆ ಮಾಹಿತಿ ಇತ್ತು. ಸುಮನ್‌ರವರಿಗೆ ಬೆದರಿದ ಅಲ್ಲಿನ ರಾಜಕಾರಣಿಗಳು ಮಂಡ್ಯದಲ್ಲಿ ಡ್ಯೂಟಿಗೆ ರಿಪೋರ್ಟ್ ಮಾಡುವ ಮುಂಚೆಯೇ ಸುಮನ್ ವರ್ಗಾವಣೆ ಆದೇಶ ತಂದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)